ಭಾರತದ ಕೃಷಿ ಅಭಿವೃದ್ಧಿ ಯೋಜನೆ–

ಒಂದು ಪಕ್ಷಿ ನೋಟ

ಎ ಪಿ ಶ್ರೀನಿವಾಸಮೂರ್ತಿ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ–153

ಭಾರತದ ಕೃಷಿ ಅಭಿವೃದ್ಧಿ ಯೋಜನೆ - ಒಂದು ಪಕ್ಷಿನೋಟ

ಎ. ಪಿ. ಶ್ರೀನಿವಾಸಮೂರ್ತಿ

1986

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 065

ಭಾರತದ ಕೃಷಿ ಅಭಿವೃದ್ಧಿ ಯೋಜನೆ - ಒಂದು ಪಕ್ಷಿನೋಟ (ಕ
ವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಪ್ರಕಾಶಿತ)

ಮುದ್ರಣ 1986

ಪ್ರತಿಗಳು : 1000, ಪುಟಗಳು Xii + 109

ಬೆಲೆ : ಸಾದಾ ಪ್ರತಿ ರೂ. 12-00 ಕ್ಯಾಲಿಕೊ ಪ್ರತಿ ರೂ. 22-00

ಮುದ್ರಣ

ಅನುಗ್ರಹ ಪ್ರಿಂಟರ್ಸ್
ನಂ. 1/1, 6ನೇ ಮುಖ್ಯರಸ್ತೆ, ಶಿವನಹಳ್ಳಿ
ರಾಜಾಜಿನಗರ, ಬೆಂಗಳೂರು - 560 010

ಕುಲಪತಿಗಳ ಹಾರೈಕೆ

ಕೇಂದ್ರ ಸರ್ಕಾರದಿಂದ ಪುರಸ್ಕೃತಗೊಂಡ ಯೋಜನೆಯ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಕನ್ನಡ ಅಧ್ಯಯನ ವಿಭಾಗ 1970ರಲ್ಲಿ ಆರಂಭಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಕೃಷಿ ವಿಜ್ಞಾನಗಳಿಗೆ ಸಂಬಂಧಿಸಿದ ಬೇಸಾಯಶಾಸ್ತ್ರ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯಶಾಸ್ತ್ರ, ಹೈನುಗಾರಿಕೆ, ತೋಟಗಾರಿಕೆ, ಕೋಳಿಸಾಕಣೆ, ಅರಣ್ಯಶಾಸ್ತ್ರ, ಗೃಹವಿಜ್ಞಾನ, ಮತ್ಸ್ಯಶಾಸ್ತ್ರ, ಕೃಷಿ ಸಹಕಾರ, ಜೇನುಸಾಕಣೆ, ರೇಷ್ಮೆ ವ್ಯವಸಾಯ, ಮೂಲ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳಲ್ಲಿ ನೂರಾರು ಪುಸ್ತಕಗಳು ಪ್ರಕಟಗೊಂಡಿವೆ. ಹಲವಾರು ವಿಷಯಗಳ ಮೇಲಿನ ತಾಂತ್ರಿಕ ಶಬ್ದಕೋಶಗಳು ನಿರ್ಮಾಣವಾಗಿವೆ. ಈ ಪೈಕಿ ಈಗಾಗಲೇ ಕೆಲವು ಪುಸ್ತಕಗಳು ಪುನರ್‌ಮುದ್ರಣಗೊಂಡಿವೆ. ಮತ್ತೆ ಕೆಲವು ಪುಸ್ತಕಗಳ ಪ್ರತಿಗಳು ಮುಗಿದಿದ್ದು, ಇವುಗಳಿಗಾಗಿ ಅಪಾರ ಬೇಡಿಕೆ ಉಂಟಾಗಿ ಪುನರ್ಮುದ್ರಣಗೊಳ್ಳಬೇಕಾಗಿದೆ. ಇದು ಈ ಪುಸ್ತಕಗಳಿಗಿರುವ ಜನಪ್ರಿಯತೆಗೆ ಸಾಕ್ಷಿ.

ಕೃಷಿ ವಿಜ್ಞಾನಗಳಲ್ಲಿ ಕೆಲವು ವಿಷಯದ ಮೇಲೆ ಹೆಚ್ಚಿನ ಪುಸ್ತಕಗಳು ಪ್ರಕಟಗೊಂಡಿವೆ. ಈ ದಿಶೆಯಲ್ಲಿ ಒಂದು ರೀತಿಯ ಸಮತೋಲನ ಕಾಯ್ದುಕೊಳ್ಳಬೇಕಲ್ಲದೆ ಇತ್ತೀಚೆಗೆ ಅತ್ಯಂತ ಮಹತ್ವಗಳಿಸುತ್ತಿರುವ ಹೈನುಗಾರಿಕೆ, ಕೋಳಿಸಾಕಣೆ ಹಾಗೂ ಮೀನುಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ನೀಡಿ ಉಪಯುಕ್ತತೆ ಕಂಡುಕೊಳ್ಳುವುದು ಅತ್ಯಗತ್ಯ.

ವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಬೆಳೆದು ಬರಬೇಕೆಂದು ನಡೆಯುತ್ತಿರುವ ಯತ್ನದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಈ ಕೊಡುಗೆ ಅಳಿಲು ಸೇವೆ. ಈ ಕೆಲಸ ಇದೀಗ ಮೈದುಂಬಿ ನಡೆಯುತ್ತಿದೆ. ಇದು ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ವಿಶಾಲವಾದ ಕೃಷಿ ವಿಜ್ಞಾನ ಪರಿಚಯ ಮಾಡಿಕೊಡಲು ಈಗ ಪ್ರಕಟಗೊಂಡಿರುವ ಪುಸ್ತಕಗಳು ಏತಕ್ಕೂ ಸಾಲದು. ಕೃಷಿ ವಿಜ್ಞಾನಗಳ ಒಂದೊಂದು ಶಾಖೆಯಲ್ಲೂ

ನೂರಾರು ಪುಸ್ತಕಗಳು ಪ್ರಕಟವಾಗಬೇಕು; ಎಲ್ಲ ಶಾಖೆಗಳ ಮೇಲೂ ತಾಂತ್ರಿಕ ಶಬ್ದಗಳು ಮೂಡಿಬರಬೇಕು. ಈ ದೃಷ್ಟಿಯಿಂದ ನೋಡಿದಾಗ ನಿಜವಾದ ಭೂಮಿಕೆ ಯಿದ್ದು ಭದ್ರವಾದ ಬುನಾದಿ ಇದೀಗ ಸಿದ್ಧವಾಗಿದೆ. ಅದರ ಮೇಲೆ ಇನ್ನೂ ಕಟ್ಟಡ ನಿರ್ಮಾಣವಾಗಬೇಕು.

ಕೃಷಿ ವಿಶ್ವವಿದ್ಯಾನಿಲಯದ ವ್ಯವಸಾಯ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ತರಗತಿ ಈಗಾಗಲೇ ಪ್ರಾರಂಭಗೊಂಡಿದ್ದು, ಕನ್ನಡದ ಬಗ್ಗೆ ಕಳಕಳಿಯುಳ್ಳ, ಆಸಕ್ತಿಯುಳ್ಳ ಅತ್ಯಂತ ಉತ್ಸಾಹಿ ವಿದ್ಯಾರ್ಥಿಗಳು ಈ ಪುಸ್ತಕಗಳ ಸದುಪಯೋಗ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಈಗ ಪ್ರಕಟವಾಗುತ್ತಿರುವ **ಭಾರತದ ಕೃಷಿ ಅಭಿವೃದ್ಧಿ ಯೋಜನೆ–ಒಂದು ಪಕ್ಷಿನೋಟ** ಪುಸ್ತಕ ಎಲ್ಲ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಲೆಂದು ಆಶಿಸುತ್ತೇನೆ.

ಎಸ್. ವಿ. ಪಾಟೀಲ್
ಕುಲಪತಿಗಳು

ಗಾಂಧೀ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಸಂಪಾದಕರ ಮಾತು

ಇತ್ತೀಚಿನ ದಶಕಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಸಲುವಾಗಿ ಯೋಜನೆಗಳನ್ನು ರೂಪಿಸಿಕೊಂಡಿವೆ. ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ಕುರಿತಂತೆ ಈ ಯೋಜನೆಗಳ ಪಾತ್ರ ಮಹತ್ವಪೂರ್ಣ. ಸಾಮಾನ್ಯವಾಗಿ ಎಲ್ಲ ರಾಷ್ಟ್ರಗಳೂ ಆರ್ಥಿಕ ಯೋಜನಾ ಪದ್ಧತಿಯನ್ನು ಅನುಸರಿಸಿವೆ. ಭಾರತದಲ್ಲಿ ಅನುಸರಿಸುತ್ತಿರುವ ಪುರಾತನ ವ್ಯವಸಾಯ ಪದ್ಧತಿಯನ್ನು ಆಧುನಿಕ ವೈಜ್ಞಾನಿಕ ಪದ್ಧತಿಯನ್ನಾಗಿ ಪರಿವರ್ತಿಸುವುದೇ ಭಾರತದ ಕೃಷಿ ಯೋಜನೆಯ ಪ್ರಮುಖ ಉದ್ದೇಶ. 'ಭಾರತದ ಕೃಷಿ ಅಭಿವೃದ್ಧಿ ಯೋಜನೆ–ಒಂದು ಪಕ್ಷಿನೋಟ', ಈ ಪುಸ್ತಕವನ್ನು ಬರೆದ ಶ್ರೀ ಎ. ಪಿ. ಶ್ರೀನಿವಾಸ ಮೂರ್ತಿಯವರು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು. ತಮ್ಮ ಸೇವಾವಧಿಯಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಅರ್ಥಶಾಸ್ತ್ರವನ್ನು ಬೋಧಿಸಿದವರು; ಈ ಅನುಭವವನ್ನು ತಮ್ಮದಾಗಿಸಿಕೊಂಡು ಅನುಭವದ ಪಕ್ವತೆಯನ್ನು ಕೃತಿಗಿಳಿಸಿ ಕನ್ನಡದಲ್ಲಿ ಹಲವಾರು ಅರ್ಥಶಾಸ್ತ್ರ ಗ್ರಂಥಗಳನ್ನು ರಚಿಸಿ ಹೆಸರುಗಳಿಸಿದವರು. ಈ ಪುಸ್ತಕ ಭಾರತದ ಕೃಷಿ ಅಭಿವೃದ್ಧಿ ಯೋಜನೆಗಳ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ಭಾರತದ ಯೋಜನೆಯ ಸ್ವರೂಪ, ಕೃಷಿ ಯೋಜನೆ ಕುರಿತ ಮುಖ್ಯ ಸಾಮಾನ್ಯ ವಿಷಯಗಳು, ಕೃಷಿ ಅಭಿವೃದ್ಧಿಗೆ ಯೋಜಿತ ವೆಚ್ಚ, ಕೃಷಿ ಅಭಿವೃದ್ಧಿಗೆ ಸಂಸ್ಥಾ ಅಡಿಪಾಯ ರಚನೆ ಯೋಜನೆ, ನೀರಾವರಿ ಅಭಿವೃದ್ಧಿ ಯೋಜನೆ, ಆಧುನಿಕ ಕೃಷಿ ಸಾಧನಗಳ ಬಳಕೆ, ಕೃಷಿ ಯೋಜನೆಯ ಫಲಗಳ ಸಮೀಕ್ಷೆ, ಕೃಷಿ ಸರಕುಗಳ ಬೆಲೆಗಳು ಮತ್ತು ಯೋಜನೆ, ಕೃಷಿ ಸಂಬಂಧಿ ಉದ್ಯಮಗಳ ಅಭಿವೃದ್ಧಿ ಯೋಜನೆ ಮತ್ತು ಸಾರಾಂಶ ಹೀಗೆ 10 ಅಧ್ಯಾಯಗಳಲ್ಲಿ ವಿಷಯವನ್ನು ವಿಂಗಡಿಸಲಾಗಿದೆ.

ಈ ಪುಸ್ತಕದ ತಾಂತ್ರಿಕ ಪರಿಶೀಲನೆ ಮಾಡಿದವರು ಡಾ। ಆರ್. ರಾಮಣ್ಣ, ಕೃಷಿ ಶಿಕ್ಷಣ ನಿರ್ದೇಶಕರು. ಇದರ ಭಾಷಾಸಂಪಾದನೆಯನ್ನು ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಚ್. ಕೆ. ನರಸಿಂಹೇಗೌಡ ಹಾಗೂ ಸಂಶೋಧನಾ ಸಹಾಯಕರಾದ

ಶ್ರೀಮತಿ ಉಷಾಕಿರಣ್ ನಿರ್ವಹಿಸಿದ್ದಾರೆ. ಕರಡೋದಿಕೆಯಲ್ಲಿ ಶ್ರೀ ಎಂ. ರಮೇಶ್ ಹಾಗೂ ಮುದ್ರಣಕ್ಕೆ ಸ್ವಚ್ಛ ಬೆರಳಚ್ಚು ಪ್ರತಿಯ ತಯಾರಿಕೆಯಲ್ಲಿ ಶ್ರೀ ಎಲ್.ಆರ್. ದೊಡ್ಡರಂಗಯ್ಯ ನೆರವಾಗಿದ್ದಾರೆ. ಇವರಿಗೆಲ್ಲ ನಮ್ಮ ಕೃತಜ್ಞತೆಗಳು. ಈ ಪುಸ್ತಕ ಓದುಗರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧಕರಿಗೆ ಉಪಯುಕ್ತವಾಗುವುದಾದರೆ ನಮ್ಮ ಶ್ರಮ ಸಾರ್ಥಕ.

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಚ್. ಕೆ. ನರಸಿಂಹೇಗೌಡ
ಪ್ರಭಾರಿ ಕನ್ನಡ ಪ್ರಾಧ್ಯಾಪಕರು ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಲೇಖಕರ ಮಾತು

ಭಾರತದ ಯೋಜನೆಗಳ ಅನುಭವಗಳನ್ನು ಕುರಿತ ವಿಮರ್ಶಾತ್ಮಕ ವಿವರಣೆಯನ್ನು ಸಂಕ್ಷಿಪ್ತವಾಗಿ ಕನ್ನಡದಲ್ಲಿ ನೀಡುವ ದೃಷ್ಟಿಯಿಂದ ಬರೆದ 'ಭಾರತದ ಅಭಿವೃದ್ಧಿ ಯೋಜನೆ', ಎಂಬ ನನ್ನ ಕೃತಿಯನ್ನು 1982 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದ ನಂತರ ಕೃಷಿ, ಕೈಗಾರಿಕೆ, ಮೂಲ ಸೌಕರ್ಯಗಳು ಇತ್ಯಾದಿ ಯೋಜನೆಯ ವಿವಿಧ ವಿಭಾಗಗಳ ಒಂದೊಂದರ ಬಗ್ಗೆಯೂ ಪ್ರತ್ಯೇಕವಾದ ಗ್ರಂಥಗಳನ್ನು ಬರೆದರೆ ವಿದ್ಯಾರ್ಥಿವೃಂದಕ್ಕೆ ಪ್ರಯೋಜನವಾಗಬಹುದೆಂದು ಈ ಕಾರ್ಯವನ್ನು ಆರಂಭಿಸಿ **'ಭಾರತದ ಕೃಷಿ ಅಭಿವೃದ್ಧಿ ಯೋಜನೆ-ಒಂದು ಪಕ್ಷಿನೋಟ'** ಎಂಬ ಈ ಪುಸ್ತಕವನ್ನು ಬರೆದೆ. ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಈ ಕೃತಿಯನ್ನು ವಿಭಾಗದ ಪ್ರಕಟಣೆಯಾಗಿ ಪ್ರಕಟಿಸಲು ಒಪ್ಪಿದುದಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯಕ್ಕೂ, ಮುಖ್ಯವಾಗಿ ಪ್ರಭಾರಿ ಕನ್ನಡ ಪ್ರಾಧ್ಯಾಪಕ ಶ್ರೀ ಎಚ್. ಕೆ, ನರಸಿಂಹೇಗೌಡ, ಎಂ.ಎ. ಹಾಗೂ ನಿವೃತ್ತ ಕನ್ನಡ ಪ್ರಾಧ್ಯಾಪಕ ಶ್ರೀ ವೀ. ಚ. ಹಿತ್ತಲಮನಿ ಅವರಿಗೂ ಹಸ್ತಪ್ರತಿಯನ್ನು ಸೂಕ್ಷ್ಮವಾಗಿ ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿದ ತಾಂತ್ರಿಕ ಪರಿಶೀಲಕರಾದ ಡಾ. ಆರ್. ರಾಮಣ್ಣ, ಕೃಷಿ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ ಅವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಶೀಘ್ರವಾಗಿಯೂ, ಅಂದವಾಗಿಯೂ ಪುಸ್ತಕವನ್ನು ಮುದ್ರಿಸಿ ಸಿದ್ಧಮಾಡಿಕೊಟ್ಟುದುದಕ್ಕಾಗಿ ಅನುಗ್ರಹ ಪ್ರಿಂಟರ್ಸ್ ಹಾಗೂ ಅದರ ಸಹಾಯಕ ವರ್ಗದವರಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಹಸ್ತಪ್ರತಿಯನ್ನು ಟೈಪುಮಾಡಿಕೊಟ್ಟ ಶ್ರೀ ಬಿ.ಎಸ್. ವೆಂಕಟೇಶರಾವ್ ಅವರಿಗೆ ನನ್ನ ವಂದನೆಗಳು,

ಆಸಕ್ತ ವಿದ್ಯಾರ್ಥಿವೃಂದದವರಿಗೇ ಅಲ್ಲದೆ ಸಾಮಾನ್ಯ ಓದುಗರಿಗೂ ಈ ಪುಸ್ತಕವು ಉಪಯುಕ್ತವಾಗುವುದೆಂದು ಆಶಿಸಿದ್ದೇನೆ.

151 'ಸುರಭಿ'
12ನೇ ಮೆಯಿನ್, 10ನೇ ಕ್ರಾಸ್
ಕುವೆಂಪುನಗರ
ಮೈಸೂರು- 23

ಎ. ಪಿ. ಶ್ರೀನಿವಾಸಮೂರ್ತಿ

ಪರಿವಿಡಿ

ಭಾರತದ ಕೃಷಿ ಅಭಿವೃದ್ಧಿ ಯೋಜನೆ - ಒಂದು ಪಕ್ಷಿನೋಟ

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
7	5	ಮುೂಲಕುಃ	ಮೂಲಕಃ
10	27	adescriptive	a descriptive
12	32	Eeconomic	Economic
15	27	ನಯಡಲಾಗುವುದು	ಮಾಡಲಾಗುವುದು
16	25	ಉದೆದ್ಯೋಗಾವಕಾಶಗಳ	ಉದ್ಯೋಗಾವಕಾಶಗಳ
22	6	ಕೋಷ್ಟಕ್ಕ	ಕೋಷ್ಟಕ
24	21	ರಷ್ಟು	ರಷ್ಟು
	25	ಹೂಡಿಕೆಯು	ಹೂಡಿಕೆಯು
36	11	ವೈವಿಧ	ವೈವಿಧ್ಯ
39	13	ಕಟುಂಬಗಳು	ಕುಟುಂಬಗಳು
40	21	ಅತ್ಯಗತ	ಅತ್ಯಗತ್ಯ
44	13	ಟ್ರಬುನಲ್‌ಗಳ	ಟ್ರಿಬುನಲ್‌ಗಳ
49	22	ಮಟ್ಟದಲ್ಲಿ	ಮಟ್ಟದಲ್ಲಿ
59	3	ಆದಮು	ಆವುದು
	2	ಫೊಟಾಷಿಕ್	ಫೊಟಾಷಿಕ್*
	14	ಈಗೊಬ್ಬರ	*ಈಗೊಬ್ಬರ
68	7	ಸುವ್ರದು	ಸುವುದು
71	28	p.012	p.102
52	6	ಗಮನಹಾರ್ವಾಗಿದೆ	ಗಮನಾರ್ಹವಾಗಿದೆ
56	5	ಅಪೋರ್ಣ	ಅಪೂರ್ಣ

ಅಧ್ಯಾಯ 1

ಭಾರತದ ಯೋಜನೆಯ ಸ್ವರೂಪ

ಪೀಠಿಕೆ

ಯೋಜನೆಗಳ ಮೂಲಕ ಆರ್ಥಿಕಾಭಿವೃದ್ಧಿ ಸಾಧಿಸುವುದು ಈಚಿನ ದಶಕಗಳಲ್ಲಿ ಭಾರತವೂ ಸೇರಿದಂತೆ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅತಿ ಮುಖ್ಯವಾದ ಕಾರ್ಯವಾಗಿದೆ. ಈ ರಾಷ್ಟ್ರಗಳ ತೀವ್ರ ಅಭಿವೃದ್ಧಿ ಪ್ರಯತ್ನಕ್ಕೆ ಅಂತರರಾಷ್ಟ್ರೀಯ ಸಂಸ್ಥೆಗಳ ಹಾಗೂ ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳ ಸಕ್ರಿಯ ಬೆಂಬಲವಿರುವುದು ಎರಡನೆ ಮಹಾಯುದ್ಧಾನಂತರ ಪ್ರಪಂಚದ ವೈಶಿಷ್ಟ್ಯವಾಗಿದೆ. ಇಂದಿನ ಪ್ರಪಂಚದಲ್ಲಿ ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳೂ ಆರ್ಥಿಕ ಯೋಜನಾ ಪದ್ಧತಿಯನ್ನು ಅನುಸರಿಸಿವೆ. ಹೀಗೆ ಅನುಸರಿಸಿರುವ ಯೋಜನಾ ಪದ್ಧತಿಗಳಲ್ಲಿ ವ್ಯತ್ಯಾಸಗಳಿರುವುದಾದರೂ ಎಲ್ಲಾ ಯೋಜಿತ ಆರ್ಥಿಕತೆಗಳೂ ಕೆಳಗಿನ ಕೆಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿವೆ.

ಯೋಜನೆಯು ವಿವರವಾದ ಪೂರ್ವಾಲೋಚಿತ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳನ್ನು ಒಳಗೊಂಡ ಕ್ರಿಯೆಯಾಗಿರುತ್ತದೆ. ಸಾಧಿಸಬೇಕಾದ ಉದ್ದೇಶಗಳು ಹಾಗೂ ಗುರಿಗಳು, ಇವುಗಳನ್ನು ಸಾಧಿಸಲು ಬೇಕಾಗುವ ಸಂಪನ್ಮೂಲಗಳನ್ನು ರೂಢಿಸುವ ಬಗೆ ಮತ್ತು ಅನುಸರಿಸಬೇಕಾದ ರೀತಿನೀತಿಗಳು ಮತ್ತು ಅವಶ್ಯಕವಾದ ಸಂಸ್ಥೆಗಳು ಇತ್ಯಾದಿ ಅಂಶಗಳೆಲ್ಲವೂ ಯೋಜನೆಯಲ್ಲಿ ವಿವರಿಸಲ್ಪಟ್ಟಿರುತ್ತವೆ. ಈ ಅಂಶಗಳೆಲ್ಲದರ ಬಗ್ಗೆ ನಿರ್ಣಯ ಕೈಗೊಳ್ಳುವ ಯೋಜನಾ ಅಧಿಕಾರ ಸಾಮಾನ್ಯವಾಗಿ ಆಯಾ ದೇಶದ ಸರ್ಕಾರಕ್ಕೆ ಸೇರಿರುತ್ತದೆ. ಆರ್ಥಿಕ ಚಟುವಟಿಕೆಗಳು ಯೋಜನೆಗಳಿಗೆ ಅನುಸಾರವಾಗಿ ನಡೆಯಬೇಕಾದರೆ ಈ ಚಟುವಟಿಕೆಗಳಿಗೆ ಆಧಾರವಾದ ಉತ್ಪಾದನಾ ಸಾಧನಗಳ ಉತ್ಪಾದನೆ ಹಾಗೂ ವಿತರಣೆಯ ಮೇಲೆ ನಿಯಂತ್ರಣ ಆವಶ್ಯಕ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಸಂಪತ್ಸಾಧನಗಳ ಪೂರ್ಣ ರಾಷ್ಟ್ರೀಕರಣವಿರುವುದರ ಮೂಲಕ ಈ ನಿಯಂತ್ರಣ ಸಾಧಿಸಲು ಮಾರ್ಗವಾಗುವುದು. ಇತರೆಗ

ರಾಷ್ಟ್ರಗಳಲ್ಲಿ ಭಾಗಶಃ ರಾಷ್ಟ್ರೀಕರಣ ಹಾಗೂ ವಿವಿಧ ನಿಯಂತ್ರಣಾ ಮಸೂದೆಗಳ ಮೂಲಕ ಯೋಜನಾ ಅಧಿಕೃತ ಸಂಸ್ಥೆಯು ಆರ್ಥಿಕ ಸಾಧನೆಗಳ ಮೇಲೆ ಸಮಗ್ರ ಹತೋಟಿಯನ್ನು ಪಡೆಯುವುದು. ಈ ಉತ್ಪಾದನಾ ಸಾಧನಗಳ ಉಪಯೋಗ ವನ್ನು ನಿರ್ದೇಶಿಸುವ ಹೊಣೆ ಯೋಜನಾ ಅಧಿಕೃತ ಸಂಸ್ಥೆಗೆ ಸೇರಿದೆ.

ಮೇಲೆ ಹೇಳಿದಂತೆ ಉದ್ದೇಶಗಳು, ಗುರಿಗಳು, ಆರ್ಥಿಕ ರೀತಿನೀತಿಗಳು, ಕಾರ್ಯಕ್ರಮಗಳು ಇತ್ಯಾದಿಗಳ ವಿವರಣೆಗಳಿಂದ ಯೋಜನೆಗಳನ್ನು ರೂಪಿಸುವ ಕಾರ್ಯ ಮಾತ್ರವಾಯಿತು. ಸಹಜವಾದ ಅರ್ಥದಲ್ಲಿ 'ಯೋಜನೆ' ಎಂಬ ಪದವು ಇನ್ನೂ ಹೆಚ್ಚಿನ ಅರ್ಥ ಹೊಂದಿರುವುದು. ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತರುವ ಕಾರ್ಯ ಯೋಜನೆಯ ಇನ್ನೊಂದು ಮುಖ್ಯ ಅಂಗವಾಗಿದೆ. ಇದಕ್ಕೆ ಅವಶ್ಯ ಕತಾದುದೆಲ್ಲವನ್ನೂ ನಿರ್ವಹಿಸುವ ಕಾರ್ಯಗಳೂ ಯೋಜನೆಯಲ್ಲಿ ಸೇರುವುವು. ಅಲ್ಲದೆ ಹಾಗೆ ಕೈಗೊಳ್ಳಲಾಗುವ ಕಾರ್ಯಕ್ರಮಗಳ ಫಲ ಹಾಗೂ ಪರಿಣಾಮಗಳನ್ನು ಆಗಿಂದಾಗ್ಗೆ ತುಲನೆಮಾಡಿ ಸಮೀಕ್ಷಾ ವರದಿಗಳನ್ನು ಸಿದ್ಧಪಡಿಸುವುದು ಯೋಜ ನೆಯ ಇನ್ನೊಂದು ಮುಖ್ಯ ಭಾಗವಾಗಿದೆ. ಈ ಸಮೀಕ್ಷೆಗಳು ಯೋಜಿತ ಕಾರ್ಯಕ್ರಮಗಳ ಪುನರ್ವಿಮರ್ಶೆಗೆ ಸಹಾಯಕವಾಗುವುವು. ಇವೆಲ್ಲವೂ ಯಾವುದೇ ಯೋಜಿತ ಆರ್ಥಿಕತೆಯ ಸಾಮಾನ್ಯ ಲಕ್ಷಣಗಳಾಗಿವೆ. ಅಂತೆಯೇ ಇವು ಭಾರತದ ಯೋಜಿತ ಆರ್ಥಿಕತೆಗೂ ಅನ್ವಯಿಸುತ್ತವೆ. ಇನ್ನು ಭಾರತದ ಯೋಜನೆಯ ಕೆಲವು ವಿಶಿಷ್ಟ ಲಕ್ಷಣಗಳನ್ನು ಸ್ಥೂಲವಾಗಿ ವಿವರಿಸೋಣ.

'ತೆರೆದ ಆರ್ಥಿಕತೆಯ' ಯೋಜನೆ

ಭಾರತದ ಆರ್ಥಿಕತೆಯು ಇತರ ರಾಷ್ಟ್ರಗಳೊಡನೆ ಸಂಪರ್ಕವಿರದ ತೆರೆಯ ಮರೆಯ ಮುಚ್ಚಿದ ರಾಷ್ಟ್ರೀಯ ಆರ್ಥಿಕತೆಯಾಗಿಲ್ಲ. ಇದು ಅಂತರರಾಷ್ಟ್ರೀಯ ಆರ್ಥಿಕ ಸಂಪರ್ಕ ಬೆಳೆಸಿಕೊಂಡಿರುವ ತೆರೆದ ಆರ್ಥಿಕತೆಯಾಗಿದೆ. ಭಾರತವು ವಿವಿಧ ರಾಷ್ಟ್ರಗಳೊಡನೆ ಆರ್ಥಿಕ ಒಪ್ಪಂದಗಳನ್ನು ಮಾಡಿಕೊಂಡಿರುವುದೇ ಅಲ್ಲದೆ ಅಂತರ ರಾಷ್ಟ್ರೀಯ ಉದ್ದೇಶಗಳನ್ನುಳ್ಳ ವಿವಿಧ ಸಂಸ್ಥೆಗಳ–ವಿಶ್ವಬ್ಯಾಂಕು, ಅಂತರ ರಾಷ್ಟ್ರೀಯ ವಿನಿಮಯ ನಿಧಿ, ಸುಂಕ ಹಾಗೂ ವ್ಯಾಪಾರ ಕುರಿತ ಸಾರ್ವತ್ರಿಕ ಒಪ್ಪಂದ ಇತ್ಯಾದಿ–ಸದಸ್ಯ ರಾಷ್ಟ್ರವಾಗಿದೆ. ಈ ಸನ್ನಿವೇಶದಲ್ಲಿ ಯೋಜನೆಗಳನ್ನು ರೂಪಿಸುವಾಗ ಅದು ಅಂತರರಾಷ್ಟ್ರೀಯ ಹೊಣೆ ಹಾಗೂ ಅಂತರರಾಷ್ಟ್ರೀಯ ಶಕ್ತಿ ಗಳನ್ನು ಪರಿಗಣಿಸಬೇಕಾಗುವುದು.

ನವೀನ ರಚನೆ ಹಾಗೂ ಸಂಸ್ಥಾನಿರ್ಮಾಪಕ ಯೋಜನೆ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಯೋಜನೆಗಳು ಕೇವಲ ಕ್ರಿಯಾತ್ಮಕ ಯೋಜನೆಗಳಾಗಿದ್ದರೆ, ಅಭಿವೃದ್ಧಿಶೀಲ ರಾಷ್ಟ್ರಗಳ ಯೋಜನೆಗಳು ನೂತನ, ಸಾಮಾಜಿಕ, ಆರ್ಥಿಕ ರಚನೆ ಹಾಗೂ ಸಂಸ್ಥೆಗಳನ್ನು ನಿರ್ಮಿಸುವ ಯೋಜನೆಗಳಾಗಿವೆ. ಭಾರತದಲ್ಲಿ ಹಿಂದಿನಿಂದಲೂ ನಡೆದು ಬಂದಿರುವ ಆರ್ಥಿಕ, ಸಾಮಾಜಿಕ ಚೌಕಟ್ಟು ಆಧುನಿಕ ಜ್ಞಾನದ ಬೆಳವಣಿಗೆಗೆ ಅನುಸಾರವಾಗಿ ಪರಿವರ್ತನೆಯಾಗಬೇಕಾಗಿದೆ. ಈ ಪರಿವರ್ತನೆಯ ಕಾರ್ಯವನ್ನು ಯೋಜನೆಗಳು ನಿರ್ವಹಿಸಬೇಕಾಗಿದೆ.

ಪ್ರಜಾಸತ್ತಾತ್ಮಕ ಯೋಜನೆ

ಪ್ರಜಾಸತ್ತಾತ್ಮಕ ರಾಜಕೀಯ ಪದ್ಧತಿಯನ್ನು ಅನುಮೋದಿಸಿರುವ ಭಾರತದ ಯೋಜನೆಯು ಈ ಪದ್ಧತಿಯ ಮೂಲ ಮೌಲ್ಯಗಳಿಗೆ ಭಂಗವುಂಟುಮಾಡದ ರೀತಿಯಲ್ಲಿ ರೂಪಿಸಲ್ಪಡತಕ್ಕದ್ದಾಗಿದೆ. ವಾನ್‌ಮಿಸಸ್ ಮತ್ತು ವಾನ್ ಹೇಯರ್‌ರಂತಹ ಗಣ್ಯ ಅರ್ಥಶಾಸ್ತ್ರಜ್ಞರು ವಾದ ಸರಣಿಯಂತೆ ಅತಿಕೇಂದ್ರೀಕೃತ ಯೋಜನೆಯು ಸರ್ವಾಧಿಕಾರ ರಾಜ್ಯ ಸ್ಥಾಪನೆಗೂ ವೈಯಕ್ತಿಕ ಸ್ವಾತಂತ್ರ್ಯ ನಾಶಕ್ಕೂ ಮಾರ್ಗ ಮಾಡಿಕೊಡುವುದು. ಅಂದಮೇಲೆ ಭಾರತದ ಪ್ರಜಾಪ್ರಭುತ್ವಕ್ಕೆ ಧಕ್ಕೆಯುಂಟಾಗದಿರಬೇಕಾದರೆ ಅತಿ ಕೇಂದ್ರೀಕೃತ ಯೋಜನೆ ಸಲ್ಲದೆಂದು ಹೇಳಬಹುದು. ಪ್ರಜಾಪ್ರಭುತ್ವ ಮಾದರಿಯ ಯೋಜನೆಯಲ್ಲಿ ಅಧಿಕಾರದಲ್ಲಿರುವ ರಾಜಕೀಯ ಪಂಗಡವು ಯೋಜನಾ ಕಾರ್ಯಗಳನ್ನು ನೆರವೇರಿಸುವುದರಲ್ಲಿ ವಿರೋಧಿ ಪಂಗಡಗಳ ಸಹಕಾರವನ್ನೂ ಪಡೆಯಬೇಕು. ಈ ಅಂಶವನ್ನು ಭಾರತೀಯ ಯೋಜನಾ ಆಯೋಗವು ಒತ್ತಿ ಹೇಳಿದೆ. ಹೀಗೆ ವಿವಿಧ ರಾಜಕೀಯ ಪಂಗಡಗಳ ಅಭಿಪ್ರಾಯಗಳನ್ನು ಸಮ್ಮಿಳಿತಗೊಳಿಸುವುದರ ಮೂಲಕ ಪ್ರಜಾಭಿಪ್ರಾಯಕ್ಕೆ ಸೂಕ್ತ ಮನ್ನಣೆ ನೀಡಿದಂತೆ ಆಗುವುದು.

ಭಾರತದ ಯೋಜನೆ ಸಿದ್ಧಪಡಿಸುವ ವಿಧಾನದಲ್ಲಿ ಜನಾಭಿಪ್ರಾಯ ಪಡೆಯಲು ಅವಕಾಶವಿದೆ. ಕರಡು ಯೋಜನೆಯನ್ನು ಬಹಿರಂಗಪಡಿಸಿ ತಜ್ಞರ ಹಾಗೂ ಸಾರ್ವಜನಿಕರ ಪ್ರತಿಕ್ರಿಯೆಗಳನ್ನು ಪಡೆಯಲಾಗುವುದು. ನಂತರ ಕರಡು ಯೋಜನೆಯನ್ನು ಸೂಕ್ತವಾಗಿ ಮಾರ್ಪಡಿಸಿ ಸಂಸತ್ತಿನ ಅನುಮೋದನೆಗೆ ಒಪ್ಪಿಸಲಾಗುವುದು. ಹೀಗೆ, ಭಾರತದ ಯೋಜನೆಯು, ರಿಚರ್ಡ್ ಎಕಾಸ್[1] ಎಂಬ ತಜ್ಞನು ಹೇಳಿರು

ವಂತೆ, ಪ್ರತಿವರ್ತನಾ ಗುಣವುಳ್ಳ ಪ್ರಜಾಸತ್ತಾತ್ಮಕ ರಾಜಕೀಯ ಕ್ರಿಯಾ ವಿಧಾನವಾಗಿದೆ.

ಮಿಶ್ರ ಆರ್ಥಿಕತೆಯ ಯೋಜನೆ

ಭಾರತದ ಯೋಜನೆಯು ಖಾಸಗಿ ಹಾಗೂ ಸರ್ಕಾರಿವಲಯಗಳೆರಡೂ ಇರುವಂತಹ ಮಿಶ್ರ ಆರ್ಥಿಕತೆಯ ಯೋಜನೆಯಾಗಿದೆ. ಸರ್ಕಾರಿವಲಯದ ಆರ್ಥಿಕ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳು ಸರ್ಕಾರದ ನೇರ ನಿರ್ದೇಶನ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿದ್ದು, ಖಾಸಗಿವಲಯದ ಆರ್ಥಿಕ ಚಟುವಟಿಕೆಗಳನ್ನು ಯೋಜನಾಬದ್ಧ ಗೊಳಿಸಬೇಕಾದರೆ ಇಂತಹ ನೇರ ನಿಯಂತ್ರಣವು ಮಿತಿಯುಳ್ಳ ಸಾಧನವಾಗಿರುವುದು. ಖಾಸಗಿ ವಲಯಕ್ಕೆ ಯೋಜನೆಗಳಲ್ಲಿ ರೂಪಿಸಲಾಗುವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದರೆ ಬಹುಮಟ್ಟಿಗೆ ಉತ್ತೇಜಕ ಶಿಕ್ಷಾರೂಪದ ಕ್ರಮಗಳನ್ನೂ ಪ್ರಚಾರ ಸಾಧನಗಳನ್ನೂ ಉಪಯೋಗಿಸಬೇಕಾಗುವುದು. ಅಂದ ಮೇಲೆ, ನೇರ ನಿಯಂತ್ರಣ, ನೇರ ನಿರ್ದೇಶನ, ಪರೋಕ್ಷ ನಿರ್ದೇಶನ, ಉತ್ತೇಜಕ ಹಾಗೂ ನಿರೋಧಕ ಕ್ರಮ, ಪ್ರಚಾರ ತಂತ್ರ—ಇವೆಲ್ಲದರ ಸೂಕ್ಷ್ಮ ಅಧ್ಯಯನ ನಡೆಸಿ ವಿವೇಚನೆಯಿಂದ ಅನುಗುಣವಾದ ಒಂದು ಸಮ್ಮಿಳಿತ ಯೋಜನಾ ತಂತ್ರ ರೂಪಿಸುವುದು ಭಾರತದ ಮಿಶ್ರ ಆರ್ಥಿಕತೆ ಯೋಜನೆಯ ಒಂದು ಅತಿ ಮುಖ್ಯ ಭಾಗವಾಗಿದೆ. ಪ್ರಕೃತ ಗ್ರಂಥದ ವಿಷಯವಾದ ಕೃಷಿಯು ಬಹುಮಟ್ಟಿಗೆ ಖಾಸಗಿ ವಲಯದ ಉದ್ಯಮವಾಗಿರುವುದರಿಂದ ಇದರ ಯೋಜನೆಯಲ್ಲಿ ಪರೋಕ್ಷ ನಿರ್ದೇಶನ, ಉತ್ತೇಜಕ ಹಾಗೂ ನಿರೋಧಕ ಕ್ರಮಗಳು ಮತ್ತು ಪ್ರಚಾರ ತಂತ್ರ ಇವುಗಳು ಮುಖ್ಯಪಾತ್ರ ಹೊಂದಿವೆ. ಮಿಶ್ರ ಆರ್ಥಿಕ ಯೋಜನೆಯಲ್ಲಿ ಖಾಸಗಿ ಹಾಗೂ ಸರ್ಕಾರಿ ವಲಯಗಳ ಸಾಪೇಕ್ಷ ಪ್ರಾಮುಖ್ಯ ಹಾಗೂ ಪಾತ್ರ ನಿರ್ಣಯವು ವಿವಾದಕ್ಕೆ ಎಡೆಮಾಡಿಕೊಡುವ ಒಂದು ಅಂಶವಾಗಿದೆ. ಸಮಾಜವಾದ ಮತ್ತು ಮುಕ್ತ ಖಾಸಗಿ ಉದ್ಯಮ ಶೀಲ ಪದ್ಧತಿಯ (System of free Private enterprise) ಧ್ಯೇಯಾತ್ಮಕ ಭಾವನೆ ಹಾಗೂ ಭಾವೋದ್ರೇಕಗಳು ಈ ವಿವಾದವನ್ನು ಹರಿತಗೊಳಿಸುವ ಇನ್ನೊಂದು ಅಂಶವಾಗಿದೆ. ಭಾರತದ ಮಿಶ್ರ ಆರ್ಥಿಕತೆಯ ಯೋಜನೆಯು ಇಂತಹ ಜಟಿಲ ಪ್ರಶ್ನೆಗಳನ್ನು ಎದುರಿಸಬೇಕಾಗಿದೆ,

---

1. GOI, Planning Commission, The First FiveYear Plan, P.10.

ಫೆಡರಲ್ ಯೋಜನೆ

ಭಾರತದ ರಾಜ್ಯಾಂಗ ಫೆಡರಲ್ ಮಾದರಿಯದಾಗಿದೆ. ಅಧಿಕಾರ, ಕರ್ತವ್ಯ ಹಾಗೂ ಜವಾಬ್ದಾರಿ, ಹಣಬಲ ಇವುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರಾಜ್ಯಾಂಗದಲ್ಲಿ ನಮೂದಿಸಿರುವಂತೆ ಹಂಚಿಕೊಂಡು ಆಡಳಿತವನ್ನು ನಿರ್ವಹಿಸುತ್ತಿವೆ. ಆರ್ಥಿಕ ಹಾಗೂ ಸಾಮಾಜಿಕ ಯೋಜನೆಯು 'ಸಮಾನಾಧಿಕಾರ ಪಟ್ಟಿ'ಗೆ ಸೇರಿದ ವಿಷಯವಾಗಿದೆ. ಯೋಜನೆಗೆ ಸೇರಿದ ಅನೇಕ ಬಾಬುಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಳಗೆ ಒಂದು ರೀತಿಯ ಹಂಚಿಕೆ ಏರ್ಪಟ್ಟಿದೆ. ಪರಸ್ಪರ ಸಂಬಂಧ ವಿರುವ ಈ ವಿವಿಧ ಬಾಬುಗಳ ಬಗ್ಗೆ ಯೋಜನೆಗಳಲ್ಲಿ ಸೇರಿಸಲಾಗುವ ಕಾರ್ಯಕ್ರಮ ಗಳಲ್ಲಿ ಹೊಂದಾಣಿಕೆ ಅವಶ್ಯಕ. ಇಂತಹ ಹೊಂದಾಣಿಕೆ ಸಂಪೂರ್ಣವಾಗಿ ಉಂಟಾಗು ವುದು ಕಷ್ಟ. ಏಕೆಂದರೆ, ಸಂಸ್ಥಾನಗಳು ತಮ್ಮದೇ ಆದ ಪ್ರಾದೇಶಿಕ ದೃಷ್ಟಿಕೋನ ಹೊಂದಿರುವುದಾದರೆ, ಕೇಂದ್ರವು ಸಮಗ್ರ ರಾಷ್ಟ್ರೀಯ ದೃಷ್ಟಿ ಹೊಂದಿರುವುದು. ಇದರಿಂದ, ಅನೇಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಅವಕಾಶವಿರುವುದು, ಕೇಂದ್ರ ಹಾಗೂ ರಾಜ್ಯಗಳಲ್ಲಿ ಬೇರೆ ಬೇರೆ ರಾಜಕೀಯ ಪಂಗಡಗಳ ಅಧಿಕಾರವಿರುವ ಸಂದರ್ಭದಲ್ಲಿ ಇಂತಹ ಭಿನ್ನತೆಯ ಸಾಧ್ಯತೆ ಹೆಚ್ಚು. ಈ ತರಹದ ಸಂದರ್ಭಗಳಲ್ಲಿಯೂ ಕೇಂದ್ರ ಹಾಗೂ ರಾಜ್ಯಗಳೊಳಗೆ ಪರಸ್ಪರ ಹೊಂದಾಣಿಕೆ ಏರ್ಪಡಿಸಲು ಸಮರ್ಥವಾದ, ಸಮರ್ಪಕವಾದ ಯೋಜನಾ ಯಂತ್ರ ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಭಾರತದ ಯೋಜನಾಯಂತ್ರದ ಅಂಗಸಂಸ್ಥೆಯಾದ 'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ' (National Development Council) ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಳಗೆ ಕಾಲಕಾಲಕ್ಕೆ ವಿಚಾರ ವಿನಿಮಯ ನಡೆಸುವ ಸತ್ಸಂಪ್ರದಾಯವೂ ಮುಖ್ಯವಾಗಿದೆ.

ಕೇಂದ್ರ ಹಾಗೂ ರಾಜ್ಯಗಳ ಪರಸ್ಪರ ಸಂಬಂಧಗಳು ಅನ್ಯೋನ್ಯತೆಯಿಂದ ಬೆಳೆಯಲೆಂಬ ಉದ್ದೇಶದಿಂದ ರಾಜ್ಯಾಂಗದಲ್ಲಿ ಇವುಗಳ ಅಧಿಕಾರವ್ಯಾಪ್ತಿಯನ್ನು ಸ್ಪಷ್ಟ ಗೊಳಿಸಲಾಗಿದೆ. ಕೇಂದ್ರ, ರಾಜ್ಯ ಮತ್ತು ಇವೆರಡರ ಸಮಾನಾಧಿಕಾರ ವ್ಯಾಪ್ತಿಯ ಕಾನೂನು ಮಾಡುವ ಅಧಿಕಾರ ಪಟ್ಟಿಗಳನ್ನು ರಾಜ್ಯಾಂಗದ ಏಳನೆಯ ಷೆಡ್ಯೂಲಿನಲ್ಲಿ ಕೊಡಲಾಗಿದೆ. ಅಂತರರಾಜ್ಯ ನದಿಗಳ ಹಾಗೂ ನದಿ ಕಣಿವೆ ಯೋಜನೆಗಳ ಬಗ್ಗೆ ಉದ್ಭವಿಸಬಹುದಾದ ವಿವಾದಗಳ ತೀರ್ಪುನೀಡುವ ಅಧಿಕಾರ 262ನೇ ಪ್ರಕರಣದ ಪ್ರಕಾರ ಕೇಂದ್ರ ಸರ್ಕಾರಕ್ಕೆ ಸೇರಿದೆ. ವಿವಿಧ ರಾಜ್ಯಗಳ ಸಾಮಾನ್ಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನೀತಿ ಮತ್ತು ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ

ಉಂಟು ಮಾಡುವುದಕ್ಕಾಗಿ ಅಂತರರಾಜ್ಯ ಸಭೆಯನ್ನು ಸ್ಥಾಪಿಸುವ ಅವಕಾಶವನ್ನು 262ನೇ ಪ್ರಕರಣದಲ್ಲಿ ಮಾಡಿಕೊಡಲಾಗಿದೆ. ಕೇಂದ್ರ-ರಾಜ್ಯಗಳ ಹಣಕಾಸು ಸಂಬಂಧಗಳನ್ನು ಕುರಿತಂತೆ ರಾಜ್ಯಾಂಗದ 12ನೇ ಭಾಗದಲ್ಲಿ ಕೆಲವು ಪ್ರಕರಣಗಳಿವೆ. ತೆರಿಗೆ ವಿಧಿಸುವಿಕೆ, ಎತ್ತುವಿಕೆ ಹಾಗೂ ತೆರಿಗೆ ಹಣದ ಹಂಚಿಕೆ, ಇವು ರಾಜ್ಯಾಂಗದ 268, 269, 270, 271, 274 ಮತ್ತು 276ನೆಯ ಪ್ರಕರಣಗಳಲ್ಲಿಯೂ, ಕೇಂದ್ರವು ರಾಜ್ಯಗಳಿಗೆ ನೀಡುವ ಸಹಾಯಧನದ ಬಗ್ಗೆ 272 ಮತ್ತು 275ನೆಯ ಪ್ರಕರಣಗಳಲ್ಲಿಯೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾಲ ಎತ್ತುವಿಕೆ ಬಗ್ಗೆ 292 ಮತ್ತು 293ನೆಯ ಪ್ರಕರಣಗಳಲ್ಲಿಯೂ ಮತ್ತು ಹಣಕಾಸು ನಿಯೋಗವನ್ನು ಐದುವರ್ಷಗಳಿಗೊಮ್ಮೆ ನೇಮಿಸುವುದರ ಬಗ್ಗೆ 280ಮತ್ತು 281ನೆಯ ಪ್ರಕರಣಗಳಲ್ಲಿಯೂ ನಮೂದಿಸಲಾಗಿದೆ. ಭಾರತದ ವಿವಿಧ ಭಾಗಗಳೊಳಗೆ ನಡೆಯುವ ವ್ಯಾಪಾರ, ವಾಣಿಜ್ಯ ಸಂಪರ್ಕಗಳನ್ನು ನಿರ್ದೇಶಿಸಲು ರಾಜ್ಯಾಂಗದ 13ನೆಯ ಪ್ರಕರಣಗಳು ಕೆಲವು ಆದೇಶಗಳನ್ನಿತ್ತಿವೆ.

ಮೇಲೆ ಹೇಳಿರುವ ರಾಜ್ಯಾಂಗದ ವಿಧಿಗಳ ಜೊತೆಗೆ ಕೇಂದ್ರ-ರಾಜ್ಯಗಳ ಪರಸ್ಪರ ಒಡಂಬಡಿಕೆಯ ಆಧಾರದ ಮೇಲೆ ಅವುಗಳ ಸಂಬಂಧಗಳ ಬಗ್ಗೆ ಕೆಲವು ಸಂಪ್ರದಾಯಗಳು ಬೆಳೆದುಬಂದಿವೆ. ಆ ಯೋಜನಾ ಪದ್ಧತಿಯಲ್ಲಿ ಈ ಎರಡು ಸರ್ಕಾರಗಳೊಳಗೆ ಹೆಚ್ಚಿನ ಹೊಂದಾಣಿಕೆ ಅವಶ್ಯಕವಾಗಿರುವುದರಿಂದ ಈ ಸಂಪ್ರದಾಯಗಳಿಗೆ ವಿಶೇಷ ಪ್ರಾಮುಖ್ಯವುಂಟು. ಉದಾಹರಣೆಗೆ ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ವಿದ್ಯಾಭ್ಯಾಸ, ಸಾರ್ವಜನಿಕ ಆರೋಗ್ಯ, ಸಾರಿಗೆ ಮತ್ತು ಕೈಗಾರಿಕೆಯ ಕೆಲವು ಭಾಗಗಳು ರಾಜ್ಯಾಂಗ ರೀತ್ಯಾ ರಾಜ್ಯಗಳ ಪಟ್ಟಿಗೆ ಸೇರಿರುವ ಬಾಬುಗಳಾಗಿರುವುದಾದರೂ, ಅನೇಕ ರೂಪಗಳಲ್ಲಿ ಕೇಂದ್ರದ ಪ್ರವೇಶ ಅನಿವಾರ್ಯವಾಗಿ ಬೆಳೆದುಬಂದಿದೆ. ಹೀಗೆಯೇ ಕೇಂದ್ರಕ್ಕೆ ಮೀಸಲಾಗಿರುವ ಬಾಬುಗಳ ಬಗ್ಗೆಯೂ ರಾಜ್ಯಗಳು ಆಸಕ್ತಿ ಹೊಂದಿರುತ್ತವೆ. ಈ ವಿಷಯಗಳ ಬಗ್ಗೆ ಸಮರಸ ಸ್ಥಾಪನೆಗೆ ಸಂಪ್ರದಾಯಗಳೇ ಆಧಾರವಾಗಿವೆ.

ಮೇಲೆ ಹೇಳಿರುವಂತೆ ಕೇಂದ್ರ-ರಾಜ್ಯಗಳ ನಡುವಣ ಸಂಬಂಧಗಳನ್ನು ವ್ಯವಸ್ಥೆಗೊಳಿಸಲು ರಾಜ್ಯಾಂಗವಿಧಿಗಳೂ, ಸಾಂಪ್ರದಾಯಿಕ ಆಚರಣೆಗಳೂ ಇರುವುದಾದರೂ ವಾಸ್ತವವಾಗಿ ಐಕ್ಯತಾ ಮಾದರಿ ರಾಜ್ಯಾಂಗ ಹೊಂದಿರುವ ರಾಷ್ಟ್ರಗಳಿಗಿಂತಲೂ ಭಾರತದಂತಹ ಫೆಡರಲ್ ರಾಜ್ಯಾಂಗ ರಾಷ್ಟ್ರಗಳಲ್ಲಿ ಯೋಜನೆಯು ಹೆಚ್ಚು ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗುವುದು. ಏಕೆಂದರೆ, ಎಲ್ಲಾ ಫೆಡರೇಷನ್ನುಗಳಲ್ಲಿಯೂ

ಸಾಮಾನ್ಯವಾಗಿ ಪ್ರಸಿದ್ಧ ಅರ್ಥವಿಜ್ಞಾನಿ ಆರ್ಥರ್‌ಲೂಯಿಸ್ ಹೇಳಿರುವಂತೆ, ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಅಸೂಯೆಯಿಂದಿರುವುದು ಹಾಗೂ ಅವೆರಡರ ದೃಷ್ಟಿಕೋನ ಒಂದೇ ಆಗಿರುವುದಿಲ್ಲ. ಈ ಬಿಗುವು ಕೇವಲ ವಿಧಿಗಳ ಮೂಲಕ ನಿವಾರಣೆಯಾಗುವುದಿಲ್ಲ. ಸಹಕಾರವೆಂಬುದು ಮೂಲತಃ ಒಂದು ಮನೋಧರ್ಮ, ಇದು ಸೌಜನ್ಯ ಹಾಗೂ ಅನ್ಯೋನ್ಯತಾ ನಡವಳಿಕೆಯಲ್ಲಿ ಪ್ರತಿಬಿಂಬಿತವಾಗುವುದು.[1] ಕೇಂದ್ರದ ರಾಷ್ಟ್ರೀಯ ದೃಷ್ಟಿಕೋನ ಹಾಗೂ ರಾಜ್ಯಗಳ ಪ್ರಾದೇಶಿಕ ದೃಷ್ಟಿಕೋನಗಳ ಘರ್ಷಣೆಯೇ ಇಂತಹ ಬಿಗುವುಗಳಿಗೆ ಕಾರಣವಾಗಿದೆ. ಭಿನ್ನ ರಾಜಕೀಯ ನಿಲುವುಗಳು ಘರ್ಷಣೆಗಳ ತೀವ್ರತೆಯನ್ನು ಹೆಚ್ಚಿಸಬಲ್ಲವು. ಇಂತಹ ಸಂದರ್ಭಗಳಲ್ಲಿ ಯೋಜನೆಗೆ ಅವಶ್ಯಕವಾದ ಕೇಂದ್ರ–ರಾಜ್ಯ ಹೊಂದಾಣಿಕೆ ಕಷ್ಟವಾಗುವುದು. ಲೂಯಿಸ್ ಹೇಳಿರುವಂತೆ 'ಹೊಂದಾಣಿಕೆ ಸಾಧನೆಯು ತಜ್ಞರುಗಳ ಮಟ್ಟದಲ್ಲಿ ರಾಜಕೀಯ ಮಟ್ಟದಲ್ಲಿ ಇರವುದಕ್ಕಿಂತ ಸಾಮಾನ್ಯವಾಗಿ ಸುಲಭ. ತಜ್ಞರು ಸಾಮಾನ್ಯ ಅಳತೆಗೋಲುಗಳನ್ನೂ, ಉದ್ದೇಶಗಳನ್ನೂ ಹೊಂದಿದ್ದು ಪರಸ್ಪರವಾಗಿ ಒಪ್ಪಿಗೆ ಇರುವ ಭಾಷೆಯನ್ನು ಅನುಸರಿಸುತ್ತಾರೆ, ಆದುದರಿಂದಲೇ ರಾಜತಾಂತ್ರಿಕರಿಗಿಂತಲೂ ಸುಲಭವಾಗಿ ಅವರುಗಳಲ್ಲಿ ಒಮ್ಮತ ಏರ್ಪಡುತ್ತದೆ'[2]. ಆದರೆ ಯೋಜನೆಗಳನ್ನು ರೂಪಿಸುವ ಮತ್ತು ಇತರ ಕಾರ್ಯಗಳಲ್ಲಿ ತಜ್ಞರು ಮತ್ತು ತಾಂತ್ರಿಕ ನಿಪುಣರಿಗೆ ಸ್ಥಾನವಿರುವುದಾದರೂ, ನಿರ್ಣಾಯಕ ಪಾತ್ರ ಸಾಧಾರಣವಾಗಿ ರಾಜ ತಾಂತ್ರಿಕರಿಗೆ ಸೇರಿರುತ್ತದೆ.

ಯೋಜನಾ ವಿಧಾನ

ಯಾವುದೇ ರಾಷ್ಟ್ರದ ಯೋಜನೆಯು ಸಮರ್ಪಕವಾಗಿರಬೇಕಾದರೆ ಕೆಳಮಟ್ಟದ ಪ್ರಾದೇಶಿಕ ಘಟಕಗಳಿಗೆ–ಗ್ರಾಮ, ಬ್ಲಾಕು, ಜಿಲ್ಲೆ ಇತ್ಯಾದಿ-ಮೊದಲು ಯೋಜನೆಗಳನ್ನು ರೂಪಿಸಿಕೊಂಡು ಇವುಗಳ ಆಧಾರದ ಮೇಲೆ ಸಮಗ್ರ ರಾಷ್ಟ್ರೀಯ ಯೋಜನೆಯನ್ನು ತಯಾರಿಸಬೇಕು. ಆದರೆ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರಥಮ ಹಂತಗಳಲ್ಲಿ ಈ ವಿಧಾನ ಕಷ್ಟ. ಸ್ಥಳೀಯ ಮಟ್ಟಗಳಲ್ಲಿ ನುರಿತ ಯೋಜನಾ ಸಿಬ್ಬಂದಿ, ಅಂಕಿ ಅಂಶಗಳು, ಜನತೆಯಲ್ಲಿ ಯೋಜನಾ ಮನೋಭಾವ ಹಾಗೂ ಪ್ರವೃತ್ತಿ ಇವುಗಳ ಅಭಾವವಿರುತ್ತದೆ. ಆದುದರಿಂದ, ಭಾರತದ ಯೋಜನೆಗಳು ಬಹುಮಟ್ಟಿಗೆ ಕೇಂದ್ರೀಕೃತ ವಿಧಾನವನ್ನು ಅನುಸರಿಸಿವೆ. ಅಂದರೆ, ರಾಷ್ಟ್ರವು ನಿರ್ದಿಷ್ಟ ಅವಧಿಯಲ್ಲಿ ಸಾಧಿಸ

1. Lewis W. Arthur, **Development Planning**, Allen & Unwin, 1966, P. 253.
2. Ibid, P. 252.

ಬೇಕೆಂದಿರುವ ರಾಷ್ಟ್ರೀಯ ವರಮಾನ, ಉದ್ಯೋಗ ಹೆಚ್ಚುವರಿ ಇತ್ಯಾದಿ ಗುರಿಗಳನ್ನು ನಿರ್ಣಯಿಸಿ, ಇವುಗಳಿಗೆ ಬೇಕಾಗುವ ಒಟ್ಟು ಬಂಡವಾಳವನ್ನು ವಿವಿಧ ಕಾರ್ಯಕ್ಷೇತ್ರಗಳಿಗೂ, ವಿವಿಧ ಪ್ರಾದೇಶಿಕ ಘಟಕಗಳಿಗೂ ಹಂಚಲಾಗುವುದು. ಹೀಗೆ 'ಕೇಂದ್ರದಿಂದ ಪ್ರಾದೇಶಿಕ ಘಟಕಗಳಿಗೆ' (Top-down) ಎಂಬ ಯೋಜನಾ ವಿಧಾನವನ್ನು ಮಾತ್ರ ಅನುಸರಿಸುವುದು ತೃಪ್ತಿಕರವಾಗಲಾರದು. 'ಪ್ರಾದೇಶಿಕ ಘಟಕಗಳಿಂದ ಕೇಂದ್ರಕ್ಕೆ' ಅಥವಾ 'ಕೆಳಮಟ್ಟಗಳಿಂದ ಯೋಜನೆ' (Bottom up) ಎಂಬ ವಿಧಾನವೂ ಅತ್ಯಂತಮುಖ್ಯವಾದುದು. ಈ ಎರಡು ವಿಧಾನಗಳ ಸಂಯೋಜಿತಕ್ರಮವು ಅತ್ಯುತ್ತಮ ಯೋಜನಾ ವಿಧಾನವಾಗಿದೆ. ಯೋಜನಾತಜ್ಞ ವಾಟರ್‌ಸ್ಟನ್ ಹೇಳಿರುವಂತೆ 'ಎರಡು ವಿಧಾನಗಳೂ ಪರಸ್ಪರ ಹೊಂದಿಕೊಳ್ಳಲು ಸಾಧ್ಯವಾಗುವಂತೆ ಸುಷ್ಟ ಯೋಜನೆಯಲ್ಲಿ ಮೇಲ್ಮಟ್ಟದಿಂದ (ಕೇಂದ್ರದಿಂದ) ಪ್ರಾದೇಶಿಕ ಘಟಕಗಳಿಗೆ ರೂಪಿಸುವ ವಿಧಾನದೊಡನೆಯೇ, ಕೆಳಮಟ್ಟಗಳಿಂದ ಅಂದರೆ ಪ್ರಾದೇಶಿಕ ಘಟಕಗಳಿಂದ ಮೇಲ್ಮಟ್ಟದ (ಕೇಂದ್ರಕ್ಕೆ) ಯೋಜನೆ ರೂಪಿಸುವ ವಿಧಾನವನ್ನು ಕೈಗೊಳ್ಳಬೇಕು. ಸರಿಯಾಗಿ ನಿರ್ವಹಣೆಯಾಗುವುದಾದರೆ, ಈ ವಿಧಾನದಲ್ಲಿ 'ತಪ್ಪು ಕಂಡುಕೊಂಡು ತಿದ್ದು' ಎಂಬುದರ ಅನುಸಾರವಾಗಿ ಪ್ರತಿಯೊಂದು ಪ್ರಯೋಜನೆ (ಪ್ರಾಜೆಕ್ಟ್) ವಿಭಾಗ ಕಾರ್ಯಕ್ರಮ ಹಾಗೂ ಪ್ರಾದೇಶಿಕ ಯೋಜನೆಯು. ಸಮಗ್ರ ಗುರಿಗಳಿಗೆ ಹೊಂದಿಕೊಳ್ಳುವಂತಾಗಬೇಕು. ಸಮಗ್ರ ಗುರಿಗಳು ಮುಂದುವರಿಯುತ್ತಿರುವ ಪ್ರಯೋಜನೆಗಳಿಗೂ, ವಿಭಾಗ ಕಾರ್ಯಕ್ರಮಗಳಿಗೂ, ಪ್ರಾದೇಶಿಕ ಯೋಜನೆಗಳಿಗೂ ಹೊಂದಿಕೊಳ್ಳುವಂತಾಗಬೇಕು[1].

ಭಾರತದಲ್ಲಿ ವಿಕೇಂದ್ರೀಕೃತ ಯೋಜನೆಯನ್ನು ಬಲಗೊಳಿಸುವುದು ಯೋಜನಾ ಆಯೋಗದ ಉದ್ದೇಶವಾಗಿದ್ದಿತಾದರೂ[2] ಕೆಳಮಟ್ಟಗಳಲ್ಲಿ—ಬ್ಲಾಕು ಮತ್ತು ಜಿಲ್ಲಾ ಮಟ್ಟಗಳಲ್ಲಿ—ಯೋಜನೆಗಳನ್ನು ರೂಪಿಸುವ ಕಾರ್ಯ ಕೇವಲ ಇತ್ತೀಚಿನ ಬೆಳವಣಿಗೆಯಾಗಿದೆ. ಇದರಿಂದ, ತಂತಮ್ಮ ಪ್ರದೇಶಗಳಿಗೆ ಅನ್ವಯಿಸುವ ಯೋಜನೆ ಸಿದ್ಧಪಡಿಸುವುದರಲ್ಲಿ ಆಯಾ ಪ್ರದೇಶದ ನಿವಾಸಿಗಳಿಗೆ ಅವಕಾಶ ಸಿಕ್ಕಂತಾಗುವುದು.

---

1. Albert Waterston, **Development Planning-Lessons of Experience**, Johns Hopkins Press, Baltimore, 1971, PP. 65-66.
2. See G.O.I, Planning Commission, **Third Five Year Plan**, pp. 335-336.

ಯೋಜನೆಗಳ ಅನುಷ್ಠಾನದಲ್ಲಿ ಈ ಜನರಿಗೆ ಹೆಚ್ಚು ಆಸಕ್ತಿ ಹುಟ್ಟಿಸಿದಂತಾಗುವುದು. ಅಲ್ಲದೆ, ರಾಷ್ಟ್ರೀಯ ಯೋಜನೆಯು ಒಳಗೊಳ್ಳುವ ವಿವರಗಳು ದೇಶದ ವಿವಿಧ ಪ್ರದೇಶಗಳ ಮತ್ತು ಜನಾಂಗಗಳ ಅವಶ್ಯಕತೆಗಳನ್ನು ಪ್ರತಿಬಿಂಬಿಸುವುದರ ಜೊತೆಯೇ ಸಮಗ್ರ ರಾಷ್ಟ್ರೀಯ ಅವಶ್ಯಕತೆಗಳನ್ನೂ ಪ್ರತಿಬಿಂಬಿಸುವುವು. ಯೋಜನಾ ವಿಧಾನದ ಇತ್ತೀಚಿನ ಈ ಬೆಳವಣಿಗೆಯು ಕೃಷಿಯೋಜನೆಯ ದೃಷ್ಟಿಯಿಂದಲೂ ಅರ್ಥಪೂರ್ಣ ವಿಷಯವಾಗಿದೆ.

ಉದ್ಯಮ ಕ್ಷೇತ್ರ—ಪ್ರದೇಶಗಳ ಸುಸಂಘಟಿತ ಯೋಜನೆ

ಉದ್ಯಮ ಆರ್ಥಿಕ ಯೋಜನೆಯಲ್ಲಿ ಕೃಷಿ, ಕೈಗಾರಿಕೆ, ಸಾರಿಗೆ ಇತ್ಯಾದಿ ಉದ್ಯಮ ಕ್ಷೇತ್ರಗಳಿಗೆ ಅನ್ವಯಿಸುವ ಯೋಜನೆಗಳನ್ನು ರೂಪಿಸುವಾಗ ಇದರೊಡನೆಯೇ ಪ್ರಾದೇಶಿಕವಾಗಿಯೂ ಈ ಒಂದೊಂದರ ವಿವರಗಳನ್ನೂ ವಿವೇಚಿಸಿ, ಕಾರ್ಯಕ್ರಮಗಳನ್ನು ರಚಿಸಬೇಕು. ನಿರ್ದಿಷ್ಟ ಅವಧಿಯಲ್ಲಿ ಒಂದೊಂದು ಉದ್ಯಮ ಕ್ಷೇತ್ರದಲ್ಲಿಯೂ ರೂಢಿಸಬೇಕೆಂದು ಯೋಜನೆಯಲ್ಲಿ ನಿಗದಿ ಮಾಡಲಾಗಿರುವ ಬಂಡವಾಳವನ್ನು ದೇಶದ ನಾನಾ ಪ್ರದೇಶಗಳಿಗೂ ಒಂದು ನಿಯಮಿತ ರೀತಿಯಲ್ಲಿ ಹಂಚಬೇಕು. ಭಾರತದ ಯೋಜನೆಗಳು ಈಚಿನವರೆಗೆ ಬಹುಮಟ್ಟಿಗೆ ಉದ್ಯಮ ಕ್ಷೇತ್ರ ವಿಭಾಗ ಯೋಜನೆ (Sectoral plans) ಗಳಾಗಿವೆಯೇ ವಿನಾ ಪ್ರಾದೇಶಿಕ ಯೋಜನೆಗಳಾಗಿಲ್ಲ. ಇತ್ತೀಚೆಗೆ ಉದ್ಯಮಕ್ಷೇತ್ರ ಹಾಗೂ ಪ್ರಾದೇಶಿಕ ಅಂಶಗಳೆರಡರ ಸಂಘಟಿತ ಯೋಜನೆಗಳನ್ನು ಸಿದ್ಧಪಡಿಸುವ ಪ್ರಯತ್ನ ನಡೆಯುತ್ತಿದೆ.

ಯೋಜನೆಗಳ ಕಾಲಾವಧಿ ಸ್ವರೂಪ

ರೂಪಿಸಲಾಗುವ ಯೋಜನೆಗಳ ಅವಧಿ ಎಷ್ಟು ವರ್ಷಗಳನ್ನು ಒಳಗೊಳ್ಳಬೇಕು ಎಂಬುದು ಯೋಜನಾ ಪದ್ಧತಿಯ ಒಂದು ಪ್ರಶ್ನೆಯಾಗಿದೆ. ಯೋಜನೆಗಳ ಮುನ್ನೋಟ ಆದಷ್ಟು ಭವಿಷ್ಯ ಕಾಲಕ್ಕೆ ಚಾಚಿರಬೇಕಾದುದರಿಂದ ಸಾಮಾನ್ಯವಾಗಿ ಎಲ್ಲಾ ಯೋಜಿತ ರಾಷ್ಟ್ರಗಳಲ್ಲಿಯೂ ದೀರ್ಘ ಕಾಲಾವಧಿಯ ಪ್ರತೀಕ್ಷಾ ಯೋಜನೆ (Perspective plan) ಯೊಂದನ್ನು ರಚಿಸಲಾಗುವುದು. ಭಾರತದಲ್ಲಿ ಸುಮಾರು 20 ವರ್ಷಗಳ ಅವಧಿಯ ಇಂತಹ ಪ್ರತೀಕ್ಷಾ ಯೋಜನೆಗಳನ್ನು ರಚಿಸಲಾಗಿದೆ. ಈ ಪ್ರತೀಕ್ಷಾ ಯೋಜನೆಯ ಚೌಕಟ್ಟಿನೊಳಗೆ ಪಂಚವಾರ್ಷಿಕಯೋಜನೆಗಳನ್ನೂ ರೂಪಿಸಲಾಗಿದೆ. ಈ ಐದು ವರ್ಷಗಳ ಅವಧಿಗೆ ಅನ್ವಯಿಸುವಂತೆ

ಗುರಿಗಳನ್ನೂ, ಬಂಡವಾಳ ವಿತರಣೆಯನ್ನೂ ಮತ್ತು ಇತರ ವಿವರಣೆಗಳೆಲ್ಲವನ್ನೂ ಗೊತ್ತುಮಾಡಲಾಗಿದೆ. ವಾರ್ಷಿಕಯೋಜನೆಗಳನ್ನು ಈ ಪಂಚವಾರ್ಷಿಕ ಯೋಜನೆಯ ವಿವರಗಳಿಗೆ ಹೊಂದಿಕೊಳ್ಳುವಂತೆ ರೂಪಿಸಲಾಗುತ್ತಿದೆ.

ಭಾರತದ ಯೋಜನಾ ಯಂತ್ರ

ಭಾರತವು 1951ರಲ್ಲಿ ಯೋಜನೆಯನ್ನು ಅನುಮೋದಿಸಿದಾಗಿನಿಂದ ಯೋಜನಾ ಕಾರ್ಯ ನಿರ್ವಹಣೆಗಾಗಿ ಅನೇಕ ಸಂಸ್ಥೆಗಳನ್ನು ಒಳಗೊಂಡ ಒಂದು ಅಗಾಧವಾದ ಯೋಜನಾಯಂತ್ರ ವಿಕಾಸವಾಗಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳೆರಡೂ ಸೇರಿ ಯೋಜನೆಯ ಮುಖ್ಯ ಹೊಣೆ ಹೊತ್ತಿರುವ ಯೋಜನಾಪ್ರಾಧಿಕಾರವೆಂಬ ಅಧಿಕೃತ ಸಂಸ್ಥೆಯಾಗಿದೆ. ಇದಕ್ಕೆ ಸಹಾಯಕವಾಗಿ ಯೋಜನಾ ಆಯೋಗ ಮತ್ತು ಅದರ ವಿವಿಧ ಶಾಖೆ ಉಪಶಾಖೆಗಳು, ಈ ಆಯೋಗವು ಸ್ಥಾಪಿಸುವ ಕ್ರಿಯಾತಂಡಗಳು, ಸ್ಥಾಯಿ ಸಲಹಾ ಸಮಿತಿಗಳು, ಸಂಶೋಧನೆ ಹಾಗೂ ಸಮೀಕ್ಷಾ ಸಮಿತಿಗಳು ರಾಜ್ಯ ಹಾಗೂ ಜಿಲ್ಲಾ ಮತ್ತು ಬ್ಲಾಕು ಮಟ್ಟಗಳ ಯೋಜನಾ ಸಮಿತಿಗಳು, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (National Development Council), ವಿವಿಧ ಸಚಿವ ಶಾಖೆಗಳ ಸಂಶೋಧನಾ ವಿಭಾಗಗಳು, ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ, ಅರ್ಥಶಾಸ್ತ್ರಜ್ಞರ ಪೇನೆಲ್, ಭಾರತೀಯ ರಿಸರ್ವ್ ಬ್ಯಾಂಕಿನ ವಿವಿಧ ಅಭಿವೃದ್ಧಿ ಸಮಿತಿಗಳು, ಖಾಸಗಿ ಉದ್ಯಮಿಗಳ ಕೆಲವು ಪ್ರಮುಖ ಸಂಸ್ಥೆಗಳು ಇತ್ಯಾದಿಗಳೆಲ್ಲವೂ ಇವೆ. ಇವೆಲ್ಲವೂ ಸೇರಿ ಭಾರತದ ಯೋಜನಾಯಂತ್ರವಾಗಿದೆ. ಯೋಜನೆಗಳನ್ನು ರೂಪಿಸುವುದು, ಯೋಜಿತ ಕಾರ್ಯಕ್ರಮಗಳ ಫಲಾಫಲ ಸಮೀಕ್ಷೆಯನ್ನು ಕಾಲ ಕಾಲಕ್ಕೆ ನಡೆಸುವುದು ಹಾಗೂ ಯೋಜನೆಗಳನ್ನು ಪುನರ್ ವಿಮರ್ಶಿಸುವುದು ಈ ಯೋಜನಾ ಯಂತ್ರದ ಕಾರ್ಯವಾಗಿದೆ[1]. ಹೀಗೆ ಸಿದ್ಧಪಡಿಸಲಾದ ಯೋಜನೆಗಳನ್ನು ಅನುಮೋದಿಸುವ ಕರ್ತವ್ಯ ಕೇಂದ್ರ ಪಾರ್ಲಿಮೆಂಟಿಗೂ, ರಾಜ್ಯ ವಿಧಾನಸಭೆಗಳಿಗೂ ಸೇರಿದೆ. ಯೋಜನೆಯು ಒಳಗೊಳ್ಳುವ ಕಾರ್ಯಕ್ರಮಗಳನ್ನು ಜಾರಿಗೆ ತರುವ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಉದ್ಯಮಗಳಿಗೆ ಸೇರಿದೆ.

---

1. ಭಾರತದ ಯೋಜನಾ ಯಂತ್ರದ ವಿವರ ನಿರೂಪಣೆಯನ್ನು ಕೆಳಗಿನ ಗ್ರಂಥಗಳಲ್ಲಿ ಕಾಣಬಹುದು:

a. Paranjape, H. K., The Planning Commission-adescriptive account 11 PA, New Delhi, 1964.

b. Hanson, A. H., The Process of Planning, OUP, 1966 Ch. III, pp.50-88.

ಅಧ್ಯಾಯ 2

ಕೃಷಿ ಯೋಜನೆ ಕುರಿತ ಮುಖ್ಯ ಸಾಮಾನ್ಯ ವಿಷಯಗಳು

ಕೃಷಿ–ಕೈಗಾರಿಕೆಗಳ ಪರಸ್ಪರ ಸಂಬಂಧ

ಭಾರತವು ಯೋಜನೆ ಕೈಕೊಂಡ ತರುಣದಲ್ಲಿ ಅದು ನಿರ್ಣಯಿಸಬೇಕಾದ ಅನೇಕ ವಿಷಯುಗಳಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಆದ್ಯತೆ ನೀಡುವ ಸಮಸ್ಯೆ ಮುಖ್ಯವಾದುದು. ಅಂದಿನ ಪ್ರಚಲಿತ ತಾತ್ವಿಕ ಅಭಿಪ್ರಾಯಗಳಲ್ಲಿ ಒಮ್ಮತವಿರಲಿಲ್ಲ. ಕೆಲವು ಅರ್ಥಶಾಸ್ತ್ರಜ್ಞರು ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಆದ್ಯತೆ ಉಚಿತ ಎಂದು ವಾದಿಸಿದರೆ ಇತರ ಕೆಲವರು ಕೃಷಿ ಅಭಿವೃದ್ಧಿಗೆ ಆದ್ಯತೆ ಸಲ್ಲತಕ್ಕದ್ದೆಂದು ವಾದಿಸುತ್ತಿದ್ದರು. ಲೇಬಿನ್‌ಸ್ಟಿನ್, ಕೆನೆತ್ ಕುರಿಹರ, ಗ್ಯಾಲ್‌ಬ್ರೈತ್, ಬೋಸೆರಪ್[1]

---

1. Harvey Leibenstein, **Economic Backwardness and Economic Growth**, John Wiley & Sons, 1957, p.264.

   Kenneth K. Kurihara, "Theoretical Objections to Agriculture biased economic development", **Indian Journal of Economics**, Oct. 1958, pp.163-170.

   G. K. Galbraith, "Conditions for economic change in underdeveloped countries", **Journal of farm Economics**, Nov. 1951, p.690.

   M. Boserup, "Agrarian Structure and Take-Off" cited in Caincross, Factors in Economic Development, Allen & Unwin, 1963, p.65.

ಮುಂತಾದ ಅರ್ಥಶಾಸ್ತ್ರಜ್ಞರು ಕೈಗಾರಿಕಾಭಿವೃದ್ಧಿಗೆ ಆದ್ಯತೆ ನೀಡಿದರೆ ಕೃಷಿವಲಯವು ತಾನಾಗಿಯೇ ಆಧುನಿಕ ಕೃಷಿಯಾಗಿ ಪರಿವರ್ತನೆಯಾಗುವುದೆಂದು ತಮ್ಮದೇ ಆದ ಕಾರಣಗಳೊಡನೆ ಸಮರ್ಥಿಸಿದರು. ಈ ಅಭಿಪ್ರಾಯಕ್ಕೆ ಪ್ರತಿಯಾಗಿ ಮೈಕೇಲ್ ಲಿಪ್ಟನ್, ಜೇಕಬ್ ವೈನರ್, ಕೋಲ್ ಮತ್ತು ಹೂವರ್, ರಾಸ್ಟೋವ್[1] ಇತ್ಯಾದಿ ಅರ್ಥಶಾಸ್ತ್ರಜ್ಞರು ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ಮೊದಲು ಕೃಷಿ ಆಧುನೀಕರಣಕ್ಕೆ ಆದ್ಯತೆ ನೀಡಬೇಕೆಂದು ಸಕಾರಣವಾಗಿ ವಾದಿಸಿದರು. ಈ ರೀತಿಯ ವಿವಾದ ಈಗ ಹಳೆಯದಾಯಿತು. ಮಿಯರ್[2] ಎಂಬ ಅರ್ಥಶಾಸ್ತ್ರಜ್ಞನು ಹೇಳಿರುವಂತೆ ಈ ವಿಷಯದಲ್ಲಿ ತಮ್ಮ ಆಸಕ್ತಿ ಇರುವುದು ಕೃಷಿ ಹಾಗೂ ಕೈಗಾರಿಕಾ ವಲಯಗಳ ನಡುವಣ ಪರಸ್ಪರ ಸಂಬಂಧಗಳ ವಿಶ್ಲೇಷಣೆ ಮತ್ತು ಒಂದು ವಲಯವು ಇನ್ನೊಂದು ವಲಯದ ಅಭಿವೃದ್ಧಿಗೆ ನೀಡಬಹುದಾದ ಕೊಡುಗೆಯಾಗಿದೆ. ಕೃಷಿ ಹಾಗೂ ಕೈಗಾರಿಕಾ ವಲಯಗಳ ಸಮತೋಲ ಅಭಿವೃದ್ಧಿಯ ಅವಶ್ಯಕತೆಯನ್ನು ಆರ್ಥರ್ ಲೂಯಿಸ್[3] ಚೆನ್ನಾಗಿ ವಿವರಿಸಿರುತ್ತಾನೆ. ಕೃಷಿವಲಯದ ಅಭಿವೃದ್ಧಿಯು ಕೈಗಾರಿಕಾಭಿವೃದ್ಧಿಗೆ ಆವಶ್ಯಕವಾದ ಬೆಂಬಲ ನೀಡುವಂತೆಯೇ ಕೈಗಾರಿಕಾಭಿವೃದ್ಧಿಯೂ ಕೃಷಿ

---

1. Michael Lipton, Strategy for Agriculture : Urban Bias & Rural Planning, in Paul Streeton & Michael Lipton (Ed.) **The Crisis of Indian Planning,** O. U. P. , 1968, pp. 88-95.
   Jacob Viner, **International Trade and Econocmic Development** Illinois, The Free Press, 1952, P. 135.
   A. J. Coale and E. M. Hoover, **Population Growth and Economic Development in Law-income countries-a case study of India's** prospects, O. U. P., 1959, pp. 120 and 139.
   W. W. Rostow, **The Stages of Growth-A non Communist Manifesto,** Cambridge University Press, 1965, p. 24.
2. G.M. Meier, (Ed.), **Leading issues in Economic Development,** O. U. P., Second Edition, 1970, p. 391.
3. Lewis, Arthur W., **The Theory of Economic Growth,** Allen & Unwin, 1955, pp. 276-278 & 388.
   Eeonomic Development in Law-income countries-a case

ಅಭಿವೃದ್ಧಿಗೆ ಸಹಾಯಕವಾಗುವುದೆಂಬುದು ಸಮರ್ಥನೀಯ ಅಭಿಪ್ರಾಯವಾಗಿದೆ. ಕೈಗಾರಿಕೆಗಳಿಗೆ ಅವಶ್ಯಕವಾದ ಕಚ್ಚಾ ಸರಕುಗಳನ್ನು ಒದಗಿಸುವುದೂ, ಆಹಾರ ಪದಾರ್ಥಗಳಿಗೆ ಉಂಟಾಗುವ ಹೆಚ್ಚುವರಿ ಬೇಡಿಕೆಯನ್ನು ಪೂರೈಸುವುದೂ, ಕೈಗಾರಿಕೆಗಳಿಗೆ ಬೇಕಾಗುವ ಕಾರ್ಮಿಕ ಬಲ ಒದಗಿಸಲು ಕೃಷಿವಲಯದಿಂದ ಕಾರ್ಮಿಕರನ್ನು ಬಿಡುಗಡೆ ಮಾಡುವುದೂ, ಬೆಳೆಯುವ ಕೈಗಾರಿಕೆಗಳ ಉತ್ಪನ್ನಗಳಿಗೆ ಗ್ರಾಮೀಣ ಜನತೆಯ ಬೇಡಿಕೆಯನ್ನು ವಿಸ್ತರಿಸುವುದೂ ಕೃಷಿವಲಯವು ಕೈಗಾರಿಕಾವಲಯಕ್ಕೆ ನೀಡಬೇಕಾದ ಮುಖ್ಯ ಸೇವೆಗಳಾಗಿವೆ. ಹೀಗೆಯೇ, ಕೃಷಿಉದ್ಯಮದ ನವೀಕರಣಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಕ್ರಿಮಿಕೀಟನಾಶಕ ವಸ್ತುಗಳು, ಯಂತ್ರೋಪಕರಣಗಳು ಮತ್ತು ಕೃಷಿಕರ ಜೀವನಕ್ಕೆ ಅವಶ್ಯಕವಾದ ತಯಾರಕೋತ್ಪನ್ನಗಳು ಇತ್ಯಾದಿಗಳ ಸರಬರಾಯಿ ಕೈಗಾರಿಕಾವಲಯದ ಹೊಣೆಯಾಗಿದೆ. ಗ್ರಾಮೀಣ ಕಾರ್ಮಿಕವರ್ಗದ ಹೆಚ್ಚಳ ಭಾಗಕ್ಕೆ ಉದ್ಯೋಗಾವಕಾಶ ಒದಗಿಸುವುದೂ ಕೈಗಾರಿಕಾಭಿವೃದ್ಧಿಯನ್ನು ಅವಲಂಬಿಸಿದೆ. ಹೀಗೆ ಕೃಷಿ ಮತ್ತು ಕೈಗಾರಿಕಾವಲಯಗಳು ಹೊಂದಿರುವ ಪರಸ್ಪರ ಪ್ರಯೋಜಕ ಸಂಬಂಧಗಳನ್ನು ಗಮನಿಸಿ, ಈ ವಿವಿಧ ಪ್ರಯೋಜನೆಗಳು ಸರಿಯಾದ ಪ್ರಮಾಣದಲ್ಲಿ ಪರಸ್ಪರವಾಗಿ ಲಭಿಸುವಂತೆಯೂ, ಇವೆರಡು ವಲಯಗಳೂ ಸಮತೋಲನಗತಿಯಿಂದ ಅಭಿವೃದ್ಧಿಯಾಗುವಂತೆಯೂ ಮಾಡುವುದೇ ಭಾರತದ ಯೋಜನೆಯು ಸಾಧಿಸಬೇಕಾದ ಮುಖ್ಯ ಗುರಿಯಾಗಿದೆ.

ಭಾರತದ ಕೃಷಿ ವಲಯ

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿವಲಯವು ಅನೇಕ ದೃಷ್ಟಿಯಿಂದ ಅತ್ಯಂತ ಮುಖ್ಯ ಭಾಗವಾಗಿದೆ. ಕೃಷಿ ಉದ್ಯಮವು ದೇಶದ 5,75,936 ಗ್ರಾಮಗಳ ಹಾಗೂ ಒಟ್ಟು ಜನಸಂಖ್ಯೆಯ ಸುಮಾರು ಶೇಕಡಾ 80ರಷ್ಟು ಜನರ ಮುಖ್ಯ ಚಟುವಟಿಕೆಯಾಗಿದೆ.[1] ದೇಶದ ಒಟ್ಟು ಕಾರ್ಮಿಕ ಬಲದ ಶೇಕಡಾ 73.8ರಷ್ಟು ಭಾಗ ಜನರು ಈ ಉದ್ಯಮದಲ್ಲಿ ನಿರತರಾಗಿರುತ್ತಾರೆ.[2] ಈ ಉದ್ಯಮವು 164 ದಶಲಕ್ಷ ಹೆಕ್ಟೇರುಗಳಷ್ಟು ಭೂಮಿಯನ್ನು ಅಂದರೆ ದೇಶದ ಒಟ್ಟು ಭೂಭಾಗದ ಸುಮಾರು ಶೇಕಡಾ 50ರಷ್ಟನ್ನು ಒಳಗೊಂಡಿದ್ದು 49.8ದಶಲಕ್ಷ ಹಿಡುವಳಿಗಳಾಗಿ ವಿಭಾಗಿತವಾಗಿದೆ[3].

---

1. ಇದು 1971 ರ ಜನಗಣತಿಯ ಪ್ರಕಾರ.
2. G.O.I., **Draft Five Year Plan, 1978-83**, Vol. II, p. 102
3. G.O.I., **Indian Agriculture in Brief, Fourteenth** Edition pp. 1,11 & 56.

ಭಾರತದ ಮಿಶ್ರ ಆರ್ಥಿಕವ್ಯವಸ್ಥೆಯ ಖಾಸಗಿ ವಲಯದಲ್ಲಿ ಕೃಷಿ ಉದ್ಯಮವೇ ಪ್ರಧಾನವಾಗಿದೆ. ಕೃಷಿ ಉದ್ಯಮದ ಸರ್ಕಾರಿವಲಯವು ಭಾರತದ ರಾಜ್ಯ ಫಾರ್ಮ್‌ಗಳ ನಿಗಮದ ಕಾರ್ಯನಿರ್ವಹಣೆಯ ವ್ಯಾಪ್ತಿಗೆ ಸೇರಿರುವ ಹನ್ನೆರಡು ರಾಜ್ಯ ಫಾರ್ಮ್‌ಗಳಿಗೆ (ಡಿಸೆಂಬರ್ 1977 ರಲ್ಲಿ ಇದ್ದಂತೆ) ಮಾತ್ರ ಸೀಮಿತವಾಗಿದೆ. ಬಂಜರು ಭೂಮಿಯನ್ನು ಸಾಗುವಳಿಯೋಗ್ಯಗೊಳಿಸುವುದು ; ಉತ್ತಮ ಬೀಜಗಳನ್ನು ತಯಾರಿಸುವುದು, ಆಹಾರ ಧಾನ್ಯ, ಹತ್ತಿ, ಸೆಣಬು ಇತ್ಯಾದಿ ಬೆಳೆಗಳು, ಬೃಹತ್ ತೋಟಗಾರಿಕೆ ಉತ್ಪನ್ನಗಳು, ತೈಲಬೀಜಗಳು, ಹಣ್ಣು ಹಾಗೂ ತರಕಾರಿ ಬೆಳೆಯುವುದು–ಇವು ರಾಜ್ಯ ಫಾರ್ಮ್‌ಗಳ ನಿಗಮದ ಮುಖ್ಯ ಉದ್ದೇಶಗಳಾಗಿವೆ[1]. ಭಾರತದ ಸಹಕಾರಿ ಕೃಷಿವಲಯದಲ್ಲಿ 1.24 ಲಕ್ಷ ಸದಸ್ಯರನ್ನು ಹೊಂದಿದ್ದ 4824 ಜಂಟಿ ಬೇಸಾಯ ಸಂಘಗಳು 2.52ಲಕ್ಷ ಹೆಕ್ಟೇರುಗಳನ್ನು ಸಾಗುವಳಿ ಮಾಡುತ್ತಿದ್ದವು ; 1.40 ಲಕ್ಷ ಸದಸ್ಯರನ್ನುಳ್ಳ 4653 ಸಾಮೂಹಿಕ ಬೇಸಾಯ ಸಂಘಗಳು, 1.44ಲಕ್ಷ ಹೆಕ್ಟೇರುಗಳನ್ನು ಸಾಗುವಳಿ ಮಾಡುತ್ತಿದ್ದವು.[2] ಭಾರತದ ಕೃಷಿ ಉದ್ಯಮದಲ್ಲಿ ಸರ್ಕಾರಿ ಹಾಗೂ ಸಹಕಾರಿ ವಲಯಗಳ ಭಾಗ ಕೇವಲ ಅತ್ಯಲ್ಪವಾಗಿದೆ ಎಂಬುದನ್ನು ಈ ಮೇಲಿನ ಅಂಕಿ ಅಂಶಗಳು ಸ್ಪಷ್ಟಪಡಿಸುವವು. ಈ ಉದ್ಯಮವು ಲಕ್ಷಾಂತರ ಕೃಷಿಕರು ನಿರ್ವಹಿಸುತ್ತಿರುವ ಖಾಸಗಿ ಉದ್ಯಮವಾಗಿದೆ. ಇವರುಗಳ ಚಟುವಟಿಕೆಗಳನ್ನು ಯೋಜಿತ ಚೌಕಟ್ಟಿಗೆ–ಅಂದರೆ ಯೋಜನೆಗಳ ಗುರಿಗಳು, ರೀತಿನೀತಿಗಳಿಗೆ—ಒಳಪಡಿಸುವುದು ಯೋಜನಾ ತಂತ್ರದ ಒಂದು ಮುಖ್ಯ ಸಮಸ್ಯೆಯಾಗಿದೆ.

ಪ್ರಜಾಸತ್ತಾತ್ಮಕ ರಾಜ್ಯಾಂಗವುಳ್ಳ ಭಾರತದ ಖಾಸಗಿವಲಯದ ಪ್ರಧಾನ ಉದ್ಯಮವಾದ ಕೃಷಿವಲಯದ ಯೋಜನೆ ಬಹುಮಟ್ಟಿಗೆ ಪರೋಕ್ಷ ನಿರ್ದೇಶನ, ಉತ್ತೇಜಕ ಹಾಗೂ ನಿರೋಧಕ್ರಮಗಳು, ಪ್ರಚಾರ ಇತ್ಯಾದಿ ವಿಧಾನಗಳ ಮೂಲಕ ನಡೆಯಬೇಕಾಗಿದೆ. ಸರ್ಕಾರವು ನೇರವಾಗಿ ನಿರ್ದೇಶಿಸುವಂತಿಲ್ಲ; ನಿಯಂತ್ರಿಸುವಂತಿಲ್ಲ. ಆದಾಗ್ಯೂ ಕೃಷಿ ಉದ್ಯಮದ ಯೋಜಿತ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರ ಅತಿ ಮುಖ್ಯವಾಗಿದೆ. ಸಂಸ್ಥಾನಿರ್ಮಾಣಕಾರ್ಯ, ನೀರಾವರಿ, ಸಾರಿಗೆ ಇತ್ಯಾದಿ ಅಡಿಪಾಯ ಸೌಕರ್ಯಗಳು ಕೃಷಿ ಸಂಶೋಧನೆ ಹಾಗೂ ಕೃಷಿ ವಿದ್ಯಾಭ್ಯಾಸ, ಇಂತಹ

---

1. *Yojana, December 1, 1977, p.21.*
2. **Reserve Bank of India, Statistical Tables Relating to Co-operative Movement in India, 1973-74, Part II- Non-credit Societies, Table No. 55, p. 167.**

ಮುಖ್ಯ ಕಾರ್ಯಗಳ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರ ಅತಿಮುಖ್ಯ ಎಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿವುದು.

ಕೃಷಿ—ಕೇಂದ್ರ ಹಾಗೂ ರಾಜ್ಯಗಳಪಾತ್ರ

ರಾಜ್ಯಾಂಗದ ಪ್ರಕಾರ ಕೃಷಿ ರಾಜ್ಯಗಳಿಗೆ ಸೇರಿದ ವಿಷಯವಾಗಿದೆ. ಅಂದಮೇಲೆ ಕೃಷಿ ಅಭಿವೃದ್ಧಿ ಯೋಜನೆಯು ಪ್ರಧಾನವಾಗಿ ರಾಜ್ಯಗಳ ಹೊಣೆಯಾಗಿದೆ. ಆದರೆ ಯೋಜಿತ ಆರ್ಥಿಕತೆಯಲ್ಲಿ ಫೆಡರಲ್ ರಾಜ್ಯಾಂಗ ಸಂಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆಗುವುದಿಲ್ಲ. ಆದುದರಿಂದ ಕಾರ್ಯತಃ ಕೇಂದ್ರದ ಹಸ್ತ ಅನೇಕ ವಿಧದಲ್ಲಿ ಕೃಷಿ ಉದ್ಯಮ ನಿರ್ವಹಣೆಯಲ್ಲಿ ಗೋಚರವಾಗುವುದು. ಆದಾಗ್ಯೂ, ಕೃಷಿ ದೇಶದ ಎಲ್ಲಾ ಭಾಗಗಳಲ್ಲಿಯೂ ವಿಸ್ತಾರವಾಗಿ ಹರಡಿರುವ ವಿಶಿಷ್ಟ ಉದ್ಯಮವಾದುದರಿಂದ ವಿಕೇಂದ್ರೀಕೃತ ಯೋಜನೆ ಇದರ ಅಭಿವೃದ್ಧಿಗೆ ಅತ್ಯಾವಶ್ಯಕ. ಅಂದಮೇಲೆ ರಾಜ್ಯಾಂಗವು ಕೃಷಿಯನ್ನು ರಾಜ್ಯಗಳ ಹೊಣೆಯಾಗಿ ಮಾಡಿರುವುದು ಉಚಿತವೇ ಆಗಿದೆ. ಕೃಷಿ ಉದ್ಯಮದ ವಿವರಗಳ ಅಧ್ಯಯನ, ಕಾರ್ಯಕ್ರಮಗಳನ್ನು ರೂಪಿಸುವಿಕೆ ಇತ್ಯಾದಿಗಳನ್ನು ರಾಜ್ಯಮಟ್ಟದಲ್ಲಿ ಮಾಡುವುದು ಅತ್ಯುತ್ತಮ. ಆದರೆ, ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಕೇಂದ್ರದ ಪಾತ್ರವೂ ಅನಿವಾರ್ಯವಾಗಿದೆ. ಅಂತರರಾಜ್ಯಗಳು ವ್ಯಾಪ್ತಿ ಇರುವ ನದಿಗಳ ನೀರಿನ ಉಪಯೋಗದ ಬಗ್ಗೆ ಪರಿಶೀಲನೆ, ಕೃಷಿಗೆ ಸಂಬಂಧಿಸಿದಂತೆ ಆಮದು ವ್ಯಾಪಾರ ನಿಯಂತ್ರಿಸುವಿಕೆ, ಕೃಷಿ ಅಭಿವೃದ್ಧಿಗೆ ಅವಶ್ಯಕವಾಗಬಹುದಾದ ವಿದೇಶೀ ನೆರವು ಬಗ್ಗೆ ಸಂಧಾನ ನಡೆಸುವಿಕೆ ಇತ್ಯಾದಿಗಳು ಇಂತಹ ವಿಷಯಗಳಲ್ಲಿ ಸೇರಿವೆ. ಅಲ್ಲದೆ 'ಯೋಜನೆ'ಯು ರಾಜ್ಯಾಂಗದ ರೀತ್ಯ ಸಮಾನಾಧಿಕಾರ ಪಟ್ಟಿಯೊಳಗೆ ಸೇರಿರುವುದರಿಂದ ಕೇಂದ್ರಕ್ಕೆ ಕೃಷಿ ಅಭಿವೃದಿ ಯೋಜನೆಯ ಮೇಲೆ ಪ್ರಭಾವ ಬೀರಲು ಅವಕಾಶ ಮಾಡಿಕೊಟ್ಟಂತಾಗಿದೆ.

ಕೃಷಿ ಯೋಜನೆ ಒಳಗೊಳ್ಳುವ ಕಾರ್ಯಕ್ರಮಗಳನ್ನು ಸಾಧಿಸಬೇಕಾದ ವಿವಿಧ ಗುರಿಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಸಹಕರಿಸಿ ರೂಪಿಸುವುವು. ವಿವಿಧ ಕೃಷಿ ಉತ್ಪನ್ನಗಳ ಉತ್ಪಾದನಾ ಗುರಿಗಳನ್ನು ಅಂದಾಜು ಮಾಡುವ ವಿಧಾನ ಹೀಗಿದೆ. ನಿರೀಕ್ಷಿತ ಜನಸಂಖ್ಯಾ ಹೆಚ್ಚಳ ಮತ್ತು ತಲಾವರಮಾನ ಹೆಚ್ಚುವರಿಗಳ ಆಧಾರದ ಮೇಲೆ ಕೃಷಿ ಸರಕುಗಳಿಗೆ ಉಂಟಾಗಬಹುದಾದ ಬೇಡಿಕೆ ಹೆಚ್ಚುವರಿಯನ್ನು ಅಂದಾಜು ಮಾಡಲಾಗುವುದು, ಈ ಪ್ರಮಾಣದ ಉತ್ಪಾದನೆಗೆ ಬೇಕಾಗುವ ಸಾಗು

ವಳಿ ಸಾಧನಗಳನ್ನು—ನೀರು, ಗೊಬ್ಬರ, ಬೀಜ, ಕ್ರಿಮಿನಾಶಕಗಳ, ಯಂತ್ರೋಪಕರಣಗಳು ಇತ್ಯಾದಿ—ನಂತರ ಅಂದಾಜು ಮಾಡಲಾಗುವುದು. ಈ ವಿವಿಧ ಸಾಗುವಳಿ ಸಾಧನಗಳಿಗೆ ಬೇಕಾಗುವ ಹಣದ ಅಂದಾಜನ್ನೂ ಮಾಡಲಾಗುವುದು. ಹೀಗೆ ಸಿದ್ಧಪಡಿಸಲಾಗುವ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗದೊಡನೆ ಚರ್ಚಿಸಿ ರಾಜ್ಯ ಸರ್ಕಾರಗಳು ತಂತಮ್ಮ ರಾಜ್ಯಗಳ ಕೃಷಿ ಯೋಜನೆಗಳನ್ನು ನಿರ್ಣಯಿಸಿಕೊಳ್ಳುವುವು.

ಯೋಜನೆಗಳ ಸಾಮಾನ್ಯ ಉದ್ದೇಶಗಳು

ಭಾರತದ ಯೋಜನೆಗಳು ಕೆಲವು ಸಾಮಾನ್ಯ ಉದ್ದೇಶಗಳನ್ನೂ, ಒಂದೊಂದು ಆರ್ಥಿಕ ವಲಯದ ಪ್ರತ್ಯೇಕ ಉದ್ದೇಶಗಳನ್ನೂ ಸ್ಪಷ್ಟಪಡಿಸಿವೆ. ಸಾಮಾನ್ಯ ಉದ್ದೇಶಗಳು ಕೃಷಿ ವಲಯಕ್ಕೂ ಅನ್ವಯಿಸುವುದರಿಂದ ಇಲ್ಲಿ ಮೊದಲು ಈ ಸಾಮಾನ್ಯ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಹೇಳಿ ನಂತರ ಕೃಷಿಯೋಜನೆಯ ನಿರ್ದಿಷ್ಟ ಉದ್ದೇಶಗಳನ್ನು ಹೇಳಲಾಗುವುದು.

ಭಾರತವು ಅನುಮೋದಿಸಿರುವ 'ಸಮಾಜವಾದಿ ನಮೂನೆ ಸಮಾಜ'ದ ನಿರ್ಮಾಣವೇ ಯೋಜನೆಗಳ ಅಂತಿಮ ಗುರಿ ಆಗಿದೆ. ಇದಕ್ಕೆ ಅನುಸಾರವಾಗಿ ಪಂಚವಾರ್ಷಿಕ ಯೋಜನೆಗಳ ಉದ್ದೇಶವನ್ನೂ ಘೋಷಿಸಲಾಗಿದೆ. ಮೊದಲನೆಯ ಯೋಜನೆಯು (1651–52 ರಿಂದ 1955-56) ಎರಡನೆಯ ಮಹಾಯುದ್ಧದ ಹಾಗೂ ಈ ಉಪಖಂಡವು ಭಾರತ ಹಾಗೂ ಪಾಕಿಸ್ತಾನ ಎಂಬೆರಡು ರಾಷ್ಟ್ರಗಳಾಗಿ ಇಬ್ಭಾಗವಾದುದರ ದುಷ್ಪರಿಣಾಮಗಳನ್ನೂ, ಹಿಂದಿನಿಂದಲೂ ಕೂಡಿಬಂದಿದ್ದ ಅನೇಕ ವಿಧದ ಅಸಮತೆಗಳನ್ನೂ ನಿವಾರಿಸುವ ಮತ್ತು ರಾಷ್ಟ್ರೀಯ ವರಮಾನ ಹಾಗೂ ಜನತೆಯ ಜೀವನ ಮಟ್ಟ ಏರುವಂತೆ ಮಾಡಬಲ್ಲ ಸರ್ವತೋಮುಖ ಅಭಿವೃದ್ಧಿಕ್ರಿಯೆಗಳನ್ನು ಆರಂಭಿಸುವ ಉದ್ದೇಶಗಳನ್ನು ಹೊಂದಿತ್ತು. ಎರಡನೆ ಯೋಜನೆಯ (1656–57 ರಿಂದ 1960–61) ಘೋಷಿತ ಮುಖ್ಯ ಉದ್ದೇಶಗಳಾವುವೆಂದರೆ : (1) ರಾಷ್ಟ್ರೀಯ ವರಮಾನದ ಶೇಕಡಾ 25ರಷ್ಟು ಹೆಚ್ಚುವರಿ (2) ಮೂಲ ಹಾಗೂ ಸ್ಥೂಲ ಕೈಗಾರಿಕೆಗಳಿಗೆ ಆದ್ಯತೆ ನೀಡಿ ಶೀಘ್ರ ಕೈಗಾರಿಕಾಭಿವೃದ್ಧಿ ಸಾಧನೆ (3) ಉದ್ಯೋಗಾವಕಾಶಗಳ ವಿಸ್ತರಣೆ (4) ವರಮಾನ ಮತ್ತು ಸಂಪತ್ತು ಮತ್ತು ಆರ್ಥಿಕ ಆಧಾರದ ವಿತರಣೆಯಲ್ಲಿ ಸಮಾಜದಲ್ಲಿರುವ ಅಸಮಾನತೆಯ ಇಳುವರಿ (5) ಬಂಡವಾಳ ಹೂಡಿಕೆ ದರವನ್ನು ರಾಷ್ಟ್ರೀಯ ವರಮಾನದ ಶೇಕಡಾ 7 ರಿಂದ 11ಕ್ಕೆ ಹೆಚ್ಚಿಸುವಿಕೆ ... ತರನಾಯ

ಕೈಗೊಂಡಿರುವ ಒಂದೊಂದು ಪಂಚವಾರ್ಷಿಕ ಯೋಜನೆಯೂ, ತಲಾವರಮಾನ ಹೆಚ್ಚುವರಿ, ಉದ್ಯೋಗಾವಕಾಶ ಕಲ್ಪಿಸುವಿಕೆ, ಆರ್ಥಿಕ ಹಾಗೂ ಪ್ರಾದೇಶಿಕ ಅಸಮಾನತೆ ಇಳುವರಿ ಉದ್ದೇಶಗಳನ್ನು ಪುನರುಚ್ಚರಿಸಿರುವುದಲ್ಲದೆ ಸಂದರ್ಭೋಚಿತವಾಗಿ ಇತರ ಕೆಲವು ಉದ್ದೇಶಗಳನ್ನು ಒತ್ತಿ ಹೇಳಿದೆ. ಹೀಗೆ ಮೂರನೆಯ ಯೋಜನೆಯು (1961–62 ರಿಂದ 1965–66) ದೇಶದ ಆರ್ಥಿಕತೆಯನ್ನು ಸ್ವಾವಲಂಬಿತ ಹಾಗೂ ಸ್ವಪ್ರಚೋದಿತ ಬೆಳವಣಿಗೆಯತ್ತ ಕೊಂಡೊಯ್ಯುವ ಗುರಿಯನ್ನು ಒತ್ತಿ ಹೇಳಿದೆ. ನಾಲ್ಕನೆಯ ಯೋಜನೆಯು (1968–69 ರಿಂದ 1973–74) ಸ್ಥಿಮಿತಯುತ ಅಭಿವೃದ್ಧಿ ಕೃಷಿ ಉತ್ಪನ್ನದ ಏರಿಳಿತಗಳನ್ನು ತಪ್ಪಿಸುವುದು, ವಿದೇಶಿ ನೆರವಿನ ಅನಿಶ್ಚಿತತೆಯಿಂದಾಗುವ ತೊಂದರೆಗಳನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ; ಸಮಾಜದ ದೀನದಲಿತ ವರ್ಗದವರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು, ಇಂತಹ ಉದ್ದೇಶಗಳನ್ನು ಒತ್ತಿ ಹೇಳಿತು. ಐದನೆಯ ಯೋಜನೆಯು (1974–75 ರಿಂದ 1978–79) ತೀವ್ರಗೊಂಡಿದ್ದ ಹಣದುಬ್ಬರ ತಡೆಗೂ, ಬಡತನ ರೇಖೆಯ ಕೆಳಗಿರುವ ಜನಾಂಗದ ಉದ್ಧಾರಕ್ಕೂ, ನಿರುದ್ಯೋಗ ನಿವಾರಣೆಗೂ ಹೆಚ್ಚು ಆದ್ಯತೆಯ ಅವಶ್ಯಕತೆಯನ್ನು ಒತ್ತಿಹೇಳಿತು. ಪ್ರಸಕ್ತ ಆರನೆಯ ಯೋಜನೆಯು (1978–79 ರಿಂದ 1979-84) ದೇಶದ ಎಲ್ಲರಿಗೂ–ಮುಖ್ಯವಾಗಿ ಕೆಳಮಟ್ಟ ವರಮಾನ ಗುಂಪಿನಲ್ಲಿರುವ ಜನತೆಗೆ ಕುಡಿಯಲು ಶುದ್ಧವಾದ ನೀರು, ಅಕ್ಷರತೆ ಹಾಗೂ ಪ್ರಾಥಮಿಕ ವಿದ್ಯಾಭ್ಯಾಸ, ಆರೋಗ್ಯಸೇವೆಗಳು, ವಸತಿ ಸೌಕರ್ಯ ಇತ್ಯಾದಿ ಮೂಲಭೂತ ಜೀವನ ಸೌಕರ್ಯಗಳ ಒದಗುವಿಕೆಯನ್ನು ಒತ್ತಿಹೇಳಿದೆ.

ಕೃಷಿ ಯೋಜನೆಯ ಉದ್ದೇಶ

ಮೇಲೆ ಹೇಳಿರುವ ಸಾಮಾನ್ಯ ಉದ್ದೇಶಗಳ ಜೊತೆಗೆ ಯೋಜನೆಗಳು ಒಂದೊಂದು ಉದ್ಯಮವಲಯಕ್ಕೂ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಸಾರಿದೆ. ಕೃಷಿ ಯೋಜನೆಯ ಉದ್ದೇಶಗಳು ನಮ್ಮ ಪ್ರಸಕ್ತ ಆಸಕ್ತಿಯಾಗಿವೆ. ಹಿಂದೆ ವಿವರಿಸಲಾಗಿರುವ ಕೃಷಿ ಹಾಗೂ ಕೈಗಾರಿಕಾವಲಯಗಳ ಅಂತರ ಸಂಬಂಧಗಳನ್ನೂ, ಇವೆರಡು ವಲಯಗಳ ಸಮತೋಲನ ಅಭಿವೃದ್ಧಿಯ ಅವಶ್ಯಕತೆಯನ್ನೂ ಭಾರತದ ಯೋಜನೆ ತತ್ವಶಃ ಒಪ್ಪಿದೆ. ಬೃಹತ್ ಕೈಗಾರಿಕೆಗಳ ಅಭಿವೃದ್ಧಿಯನ್ನು ಒತ್ತಿಹೇಳಿದ ಎರಡನೆಯ ಯೋಜನೆಯಲ್ಲಿಯೂ ಈ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ

ಒದಗಿಸುವ ಮತ್ತು ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನು ನೀಡುವ ಉದ್ದೇಶ ಹೊಂದಿವೆ. ಆದುದರಿಂದ, ಎರಡನೆಯ ಯೋಜನೆಯಲ್ಲಿ ಮೊದಲನೆ ಯೋಜನೆಗಿಂತಲೂ ಹೆಚ್ಚು ಸ್ಪಷ್ಟವಾಗಿ ಕೃಷಿ ಮತ್ತು ಕೈಗಾರಿಕಾ ವಲಯಗಳ ಅಭಿವೃದ್ಧಿಯಲ್ಲಿ ಇರುವ ಪರಸ್ಪರ ನಿಕಟ ಸಂಬಂಧವನ್ನು ಒಪ್ಪಿಕೊಳ್ಳಲಾಗಿದೆ.[1] ಇದೇ ಧೋರಣೆಯನ್ನು ತರುವಾಯ ಕೈಗೊಳ್ಳಲಾಗಿರುವ ಯೋಜನೆಗಳೂ ಘೋಷಿಸಿವೆ. ಅಭಿವೃದ್ಧಿ ವೆಚ್ಚ ವಿತರಣೆ ಹಾಗೂ ಇತರ ಯೋಜಿತ ರೀತಿಗಳು ಈ ಘೋಷಿತ ಉದ್ದೇಶಕ್ಕೆ ಅನುಸಾರವಾಗಿದೆಯೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಮುಂದೆ ಇದರ ಬಗ್ಗೆ ವಿವೇಚಿಸಲಾಗುವುದು.

ಪರಂಪರಾನುಗತವಾಗಿ ಆಚರಿಸಲ್ಪಡುತ್ತಿರುವ ಭಾರತದ ಸಾಂಪ್ರದಾಯಿಕ ಮಾದರಿಯ ಪುರಾತನ ವ್ಯವಸಾಯ ಪದ್ಧತಿಯನ್ನು ಆಧುನಿಕ ವೈಜ್ಞಾನಿಕ ಪದ್ಧತಿಯಾಗಿ ಪರಿವರ್ತಿಸುವುದೇ ಭಾರತದ ಕೃಷಿಯೋಜನೆಯ ಹೆಗ್ಗುರಿಯಾಗಿದೆ. ಇದರೊಡನೆಯೇ ಗ್ರಾಮೀಣ ಸಮಾಜದಲ್ಲಿ ಎಲ್ಲಾ ವರ್ಗದವರಿಗೂ ಸಾಮಾಜಿಕ ನ್ಯಾಯ ದೊರಕಿಸುವ ಗುರಿಯೂ ಘೋಷಿಸಲ್ಪಟ್ಟಿದೆ. ಆಹಾರ ಸರಕುಗಳು ಮತ್ತು ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಬಗ್ಗೆ ಸ್ವಸಂಪೂರ್ಣತೆ ಪಡೆಯುವುದು, ಕೃಷಿಸರಕುಗಳ ರಫ್ತು ಹೆಚ್ಚಿಸುವುದು, ಬೆಳೆಗಳ ಬೇಸಾಯ ಅಭಿವೃದ್ಧಿಗೊಳಿಸುವುದರ ಜೊತೆಗೆಯೇ ಹೈನುಗಾರಿಕೆಯನ್ನು ಅಭಿವೃದ್ಧಿಗೊಳಿಸುವುದು, ಗ್ರಾಮಗಳಲ್ಲಿ ಕೃಷಿಯೇತರ ಉದ್ಯಮಗಳನ್ನು ವಿಸ್ತರಿಸುವುದು—ಇವೆಲ್ಲವೂ ಭಾರತದ ಕೃಷಿ ಯೋಜನೆಗಳು ಸಾಧಿಸಲು ಉಪಕ್ರಮಿಸಿರುವ ಉದ್ದೇಶಗಳಲ್ಲಿ ಸೇರಿವೆ. ಈ ಉದ್ದೇಶಗಳಿಗೆ ಅನುಸಾರವಾಗಿ ಒಂದೊಂದು ಪಂಚವಾರ್ಷಿಕಯೋಜನೆಯೂ ವಿವಿಧ ಕಾರ್ಯಕ್ರಮಗಳ ಬಗ್ಗೆ ನಿರ್ದಿಷ್ಟ ಗುರಿಗಳನ್ನು ಹಾಕಿಕೊಂಡು ಯೋಜನಾಕಾರ್ಯ ನಿರ್ವಹಿಸುತ್ತಾ ಬಂದಿದೆ.

---

1. G.O.I., Second Five Year Plan, p. 259.

ಅಧ್ಯಾಯ 3

ಕೃಷಿ ಅಭಿವೃದ್ಧಿ ಯೋಜಿತ ವೆಚ್ಚ

ಯೋಜನೆಗಳ ಒಟ್ಟು ವೆಚ್ಚದಲ್ಲಿ ಕೃಷಿ ವಲಯಕ್ಕೆ ಹಂಚಲಾದ ಭಾಗವನ್ನು ವಿವೇಚಿಸುವಾಗ ಈ ಕೆಳಗಿನ ಬಾಬುಗಳಿಗೆ ನಿಗದಿಮಾಡಲಾದ ಹಣದ ಮೊತ್ತವನ್ನು ಪರಿಗಣಿಸಬಹುದು. (1) ಕೃಷಿ ಹಾಗೂ ಕೃಷಿ ಸಂಬಂಧ ಕಾರ್ಯಕ್ರಮಗಳು (2) ನೀರಾವರಿ ಹಾಗೂ ಪ್ರವಾಹ ಹತೋಟಿ ಮತ್ತು (3) ಗ್ರಾಮೀಣ ವಿದ್ಯುಚ್ಛಕ್ತಿ, ಗ್ರಾಮಗಳಿಗೆ ವಿಸ್ತರಿಸಿರುವ – ವಿದ್ಯುಚ್ಛಕ್ತಿ ಸೌಲಭ್ಯವು ಬಹುಮಟ್ಟಿಗೆ ನೀರಾವರಿ ಪಂಪುಗಳಿಗೆ ಉಪಯೋಗವಾಗುತ್ತಿವೆಯೇ ವಿನಃ ಗೃಹ ಬಳಕೆಗಲ್ಲ, ಆದುದರಿಂದ ಗ್ರಾಮೀಣ ವಿದ್ಯುಚ್ಛಕ್ತಿಗೆ ನೀಡಲಾದ ಮೊಬಲಗನ್ನು ಕೃಷಿ ಅಭಿವೃದ್ಧಿ ವೆಚ್ಚದಲ್ಲಿ ಸೇರಿಸುವುದು ಉಚಿತವೆಂದು ಹೇಳಬಹುದು. ಗೊಬ್ಬರ, ಕ್ರಿಮಿಕೀಟ ನಾಶಕಗಳು, ಕೃಷಿಯಂತ್ರಹಾಗೂ ಯಂತ್ರೋಪಕರಣಗಳ ವೆಚ್ಚವೂ ಕೃಷಿ ಅಭಿವೃದ್ಧಿ ವೆಚ್ಚಕ್ಕೆ ಸೇರುವುವು. ಆದರೆ ಈ ವೆಚ್ಚ ಬಹುಮಟ್ಟಿಗೆ ಖಾಸಗಿ ವಲಯದ ವೆಚ್ಚವಾಗಿದೆ. ಪ್ರಕೃತ, ಸರ್ಕಾರವು ಕೃಷಿ ಅಭಿವೃದ್ಧಿಗೆ ಮಾಡುತ್ತಿರುವ ಯೋಜನಾ ವೆಚ್ಚವನ್ನು ಮಾತ್ರ ಈ ಕೆಳಗೆ ವಿವೇಚಿಸಲಾಗುವುದು. ಈ ವೆಚ್ಚವು ಮೇಲೆ ಹೇಳಿರುವ ನವೀನ ಕೃಷಿ ಉತ್ಪಾದನಾ ಸಾಧನಗಳ ಲಭ್ಯತೆ ಹಾಗೂ ಬಳಕೆಗೆ ಸಂಬಂಧಿಸಿದ ಸಾಂಸ್ಥಿಕ ನಿರ್ಮಾಣ ಕಾರ್ಯಗಳ ವೆಚ್ಚವೂ ಸೇರಿದೆ.

ಕೃಷಿ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಯೋಜನಾ ವೆಚ್ಚದಬಗ್ಗೆ ಕೋಷ್ಟಕ 1 ಸ್ಥೂಲ ಚಿತ್ರವನ್ನು ನೀಡುತ್ತದೆ. 1950-51ರಿಂದ 1979ರವರೆಗಿನ 28 ವರ್ಷಗಳ ಅವಧಿಯಲ್ಲಿ ಸರ್ಕಾರಿ ವಲಯದ ಒಟ್ಟು ಯೋಜನಾ ವೆಚ್ಚವಾದ 76,062 ಕೋಟಿ ರೂಪಾಯಿಗಳಲ್ಲಿ ಕೃಷಿ ಅಭಿವೃದ್ಧಿಗೆ 18,329 ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚಮಾಡಲಾಗಿದೆ. ಒಂದು ಪಂಚವಾರ್ಷಿಕ ಯೋಜನೆಯಿಂದ ಅದರ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗಿರುವ ಕೃಷಿಯೋಜನಾ ವೆಚ್ಚ ಹೆಚ್ಚು ಕಡಮೆ ದ್ವಿಗುಣಿತವಾಗುತ್ತಿರುವುದೂ

ಕೋಷ್ಟಕ 1. ಕೃಷಿ ಅಭಿವೃದ್ಧಿ ಯೋಜನೆಗಳ ವೆಚ್ಚ (ಕೋಟಿ ರೂಪಾಯಿಗಳಲ್ಲಿ)

ಯೋಜನಾ ಅವಧಿ	ಸರ್ಕಾರಿ ವಲಯದ ಒಟ್ಟು ಯೋಜನಾ ವೆಚ್ಚ	ಕೃಷಿ ಮತ್ತು ಕೃಷಿ ಸಂಬಂಧಿ ಕಾರ್ಯಕ್ರಮಗಳ ವೆಚ್ಚ	ನೀರಾವರಿ ಮತ್ತು ಪ್ರವಾಹ ಹತೋಟಿ	ಗ್ರಾಮೀಣ ವಿದ್ಯುಚ್ಛಕ್ತಿ ವೆಚ್ಚ	ಕೃಷಿ ಒಟ್ಟು ವೆಚ್ಚ	ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ವೆಚ್ಚದ ಭಾಗ
ಮೊದಲನೆ ಯೋಜನೆ	1,960	291 (14.8)	310 (16.0)	2 (0.1)	603 (30.9)	1.47
ಎರಡನೆ ಯೋಜನೆ	4,600	530 (11.5)	420 (9.1)	75 (1.6)	1025 (22.2)	1.54
ಮೂರನೆ ಯೋಜನೆ	8,576	1089 (12.7)	665 (7.8)	125 (1.4)	1879 (21.9)	1.92
ಮೂರು ವಾರ್ಷಿಕ ಯೋಜನೆಗಳು	6.625	1107 (16.7)	471 (7.1)	240 (3.6)	1818 (27.4)	1.81
ನಾಲ್ಕನೆ ಯೋಜನೆ	15,779	2320 (14.7)	1354 (8.6)	445 (2.8)	4119 (26.1)	1.96
ಐದನೆ ಯೋಜನೆ	39,322	4766 (12.1)	3434 (8.7)	685 (1.7)	8885 (22.2)	2.21
ಒಟ್ಟು 1950–51 ರಿಂದ 1978–79	76,862	10,103	6,654	1,572	18,329	—
ಆರನೆ ಯೋಜನೆ	97,500	11,059	12,160	1,576	24,795 (25.1)	—

ವಿ.ಸೂ: ಕಂಸದಲ್ಲಿರುವುದು ಸರ್ಕಾರಿ ವಲಯದ ಒಟ್ಟು ಯೋಜನಾ ವೆಚ್ಚದಲ್ಲಿ ಇರುವ ಶೇಕಡಾ ಭಾಗವನ್ನು ಸೂಚಿಸುವುದು.
ಮೂಲ: ಮೊದಲನೆ ಮತ್ತು ಎರಡನೆ ಯೋಜನೆಗಳಿಗೆ-GOI, Third Five Year Plan, p.33
ಉಳಿದ ಯೋಜನೆಗಳಿಗೆ-GOI, Economic Survey 1977-78, pp.78-79 and 80-81 pp. 96-97 and GOI, Sixth Five Year Plan.
7ನೇ ಕಾಲಂ–ಕೇಂದ್ರ ಸಂಖ್ಯಾಶಾಸ್ತ್ರೀಯ ಸಂಸ್ಥೆಯ ಅಂದಾಜುಗಳ ಮೇಲೆ ಪರಿಗಣಿಸಿದುದು.

ಗಮನಾರ್ಹವಾಗಿದೆ. ಏಕೆಂದರೆ, ಬೆಲೆ ಏರಿಕೆಯನ್ನು ಪರಿಗಣಿಸಿದಾಗ್ಯೂ ಸಹ ಈ ಹೆಚ್ಚುವರಿಗಳು ಅಭಿವೃದ್ಧಿ ಪ್ರಯತ್ನ ವೇಗೋತ್ಕರ್ಷ ವಾಗುತ್ತಿರುವುದನ್ನು ಸೂಚಿಸುವುದೆಂದು ಹೇಳಬಹುದು. ಆರನೆ ಯೋಜನೆಯಲ್ಲಿ 94,500 ಕೋಟಿ ರೂಪಾಯಿಗಳ ಸರ್ಕಾರಿವಲಯದ ಒಟ್ಟು ಯೋಜನಾ ವೆಚ್ಚದಲ್ಲಿ 24,795 ಕೋಟಿ ರೂಪಾಯಿಗಳನ್ನು ಅಂದರೆ ಒಟ್ಟು ವೆಚ್ಚದ ಶೇಕಡಾ 25.1 ರಷ್ಟು ಹಣವನ್ನು-ಕೃಷಿ ಅಭಿವೃದ್ಧಿಗೆ ನಿಗದಿ ಮಾಡಲಾಗಿದೆ.

ಮೇಲೆ ಹೇಳಿರುವಂತೆ ಕೃಷಿ ಅಭಿವೃದ್ಧಿ ವೆಚ್ಚ ಹೆಚ್ಚುತ್ತಿರುವುದು ಯೋಜನೆಗಳಲ್ಲಿ ಕೃಷಿಗೆ ನೀಡಲಾದ ಆದ್ಯತೆಯನ್ನು ಸೂಚಿಸುವುದೆಂದು ಹೇಳಲಾಗುವುದಿಲ್ಲ. ಒಟ್ಟು ಯೋಜಿತ ವೆಚ್ಚದಲ್ಲಿ ಕೃಷಿ ಅಭಿವೃದ್ಧಿಗೆ ಹಂಚಲಾದ ಶೇಕಡಾ ಭಾಗವು ಸ್ವಲ್ಪಮಟ್ಟಿಗೆ ಈ ಅಂಶವನ್ನು ಸೂಚಿಸುವುದೆಂದು ಹೇಳಬಹುದು. ಈ ದೃಷ್ಟಿಯಿಂದ ಮೊದಲನೆ ಯೋಜನೆಯಲ್ಲಿ ಕೃಷಿಗೆ ನೀಡಲಾದ ಆದ್ಯತೆ ತರುವಾಯದ ಯೋಜನೆಗಳಲ್ಲಿ ಕಾಣ ಬರುವುದಿಲ್ಲ. ಕೋಷ್ಟಕ 1ರಲ್ಲಿ ಕೊಟ್ಟಿರುವ ಅಂಕಿಅಂಶಗಳು ಇದನ್ನು ಸ್ಪಷ್ಟ ಪಡಿಸುವುವು. ಕೃಷಿಗೆ ವೆಚ್ಚಮಾಡಲಾದ ಮೊಬಲಗು ಸರ್ಕಾರಿವಲಯದ ಒಟ್ಟು ಯೋಜನಾ ವೆಚ್ಚದಲ್ಲಿ ಮೊದಲನೆ ಯೋಜನೆಯಲ್ಲಿ ಶೇಕಡಾ 30.9 ರಷ್ಟು ಭಾಗ ಇದ್ದುದು ಎರಡನೆಯ ಯೋಜನೆಯಲ್ಲಿ ಕೇವಲ ಶೇಕಡಾ 22.2ಕ್ಕೆ ಇಳಿಯಿತು, ಎರಡನೆ ಯೋಜನೆಯಲ್ಲಿ ಹೀಗೆ ಕೃಷಿ ಅಭಿವೃದ್ಧಿ ವೆಚ್ಚದ ಭಾಗ ಕಡಮೆ ಮಾಡಿದುದರ ಜೊತೆಗೆ ಬೃಹತ್ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಿದುದು ಅನೇಕರ ಟೀಕೆಗೆ ಒಳಗಾಯಿತು. ಮುಂದಿನ ಯಾವ ಯೋಜನೆಯಲ್ಲಿಯೂ ಮೊದಲ ಯೋಜನೆಯಲ್ಲಿ ಮಾಡಲಾದ ವೆಚ್ಚದ ಶೇಕಡಾ ಭಾಗದಷ್ಟನ್ನು ಮಾಡಿಲ್ಲದಿರುವುದು ಹಿಂದೆಕೊಟ್ಟಿರುವ ಕೋಷ್ಟಕ 1ರ ಸಂಖ್ಯೆಗಳಿಂದ ಸ್ಪಷ್ಟವಾಗುವುದು. 'ಹಸಿರು ಕ್ರಾಂತಿ' ದೇಶದಲ್ಲಿ ರಾಷ್ಟ್ರವ್ಯಾಪಿಯಾಗಿ ಹರಡದಿರುವುದಕ್ಕೆ ಈ ಉಪೇಕ್ಷೆಯೂ ಒಂದು ಕಾರಣ ವೆಂದು ಅನೇಕರ ಅಭಿಪ್ರಾಯವಾಗಿದೆ. ಯೋಜನೆಗಳಲ್ಲಿ ಕೃಷಿಗೆ ನೀಡಲಾದ ಆದ್ಯತೆ ಪ್ರಶ್ನೆಯನ್ನು ಯೋಜಿತ ಅಭಿವೃದ್ಧಿ ವೆಚ್ಚದಲ್ಲಿ ಇದಕ್ಕೆಹಂಚಿರುವ ಶೇಕಡಾ ಭಾಗದಿಂದ ಮಾತ್ರವೇ ನಿರ್ಣಯಿಸುವುದು ತಪ್ಪಾಗುವುದೆಂಬುದು ಇನ್ನೊಂದು ಅಭಿಪ್ರಾಯ. ವಾಸ್ತವವಾಗಿ ಹೇಳುವುದಾದರೆ, ಕೃಷಿ ಪರಿವರ್ತನೆ ಕಾರ್ಯಕ್ಕೆ ಅವಶ್ಯಕವಾದ ಸಾಧನ ಗಳೆಲ್ಲವನ್ನೂ ಒದಗಿಸಲು ಬಂಡವಾಳ ಎಷ್ಟು ಎಂಬುದರ ಆಧಾರದ ಮೇಲೆ ಯೋಜಿತ ವೆಚ್ಚದಲ್ಲಿ ಇರುವ ಕೊರತೆಯನು ತಿಳಿಯಬಹುದು.

ಸರ್ಕಾರವು ಕೃಷಿ ಅಭಿವೃದ್ಧಿಗೆ ಕೈಗೊಂಡಿರುವ ಯೋಜನಾ ವೆಚ್ಚವನ್ನು ಮಾತ್ರ ಮೇಲೆ ವಿವೇಚಿಸಲಾಯಿತು. ಖಾಸಗಿ ಕೃಷಿ ಉದ್ಯಮಗಳ ಅಭಿವೃದ್ಧಿ ಪ್ರಯತ್ನದ ಬಗ್ಗೆ ನಿಖರವಾದ ಒಟ್ಟು ಬಂಡವಾಳ ವೆಚ್ಚದ ಅಂಕಿ ಅಂಶಗಳು ಲಭ್ಯವಿಲ್ಲ. ಆದರೆ ಕೃಷಿ ವಲಯದಲ್ಲಿ ವರ್ಷ ವರ್ಷವೂ ಬೆಳೆಯುತ್ತಿರುವ ಬಂಡವಾಳದ ಬಗ್ಗೆ ಕೇಂದ್ರೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆಯು ಅಂದಾಜುಗಳನ್ನು ಒದಗಿಸಿದೆ. ಕೋಷ್ಟಕ 2ರಲ್ಲಿ ಈ ಸಂಖ್ಯೆಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಕೋಷ್ಟಕ 2. ರಾಷ್ಟ್ರೀಯ ಆಂತರಿಕ ಬಂಡವಾಳ ಸಂಚಯನ-ಒಟ್ಟು ಹಾಗೂ ಕೃಷಿಯಲ್ಲಿ (ಕೋಟಿ ರೂಪಾಯಿಗಳಲ್ಲಿ)

ವರ್ಷ	ರಾಷ್ಟ್ರದ ಒಟ್ಟು ಆಂತರಿಕ (1960-61ರ ಬೆಲೆಗಳ ಪ್ರಕಾರ)	ಕೃಷಿ ವಲಯದಲ್ಲಿ (1960-61ರ ಬೆಲೆಗಳ ಪ್ರಕಾರ)
1960-61	2544	395
1961-62	2349	360
1962-63	2732	402
1963-64	2915	431
1964-65	3206	495
1965-66	3537	591
1966-67	3910	538
1967-68	3640	548
1968-69	3414	600
1969-70	3980	682
1970-71	4141	732
1971-72	4135	722
1972-73	4411	779
1973-74	4650	794

ಆಧಾರ: **C.S.O. National Accounts, Statistics, 1960-61-1974-75, October 1976, pp. 40-44 and 56.**

ಕೃಷಿ ವಲಯದ ಆಂತರಿಕ ವಾಸ್ತವ ಬಂಡವಾಳ 1960-61ರಲ್ಲಿ 395 ಕೋಟಿ ರೂಪಾಯಿಗಳಷ್ಟು ಇದ್ದುದು 1973-74ರಲ್ಲಿ 794 ಕೋಟಿ ರೂಪಾಯಿಗಳಿಗೆ ಹೆಚ್ಚಿದುದನ್ನು ಮೇಲಿನ ಕೋಷ್ಟಕದಲ್ಲಿ ಕಾಣಬಹುದು. ಈ ಹೆಚ್ಚುವರಿ ದರವು ಹೆಚ್ಚುಕಡಿಮೆ ರಾಷ್ಟ್ರದ ಒಟ್ಟು ಆಂತರಿಕ ಬಂಡವಾಳ ಸಂಚಯನದರದಷ್ಟೇ ಆಗಿರುವುದನ್ನು ಅದು ಸೂಚಿಸುವುದು. ಕೃಷಿವಲಯದ ಬಂಡವಾಳ ಸಂಚಯನದ ಹೆಚ್ಚುವರಿ ದರ ತೃಪ್ತಿಕರವೇ ಎಂಬ ಪ್ರಶ್ನೆ ಏಳುವುದು. ಕೃಷಿ ಮತ್ತು ಕೈಗಾರಿಕೆಗಳ ಸಮತೂಕ ಬೆಳವಣಿಗೆ ಕುರಿತು ಹಿಂದೆ ಪ್ರಸ್ತಾಪಿಸಲಾಗಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಈ ದೃಷ್ಟಿಯಿಂದ ನೋಡುವುದಾದರೆ ಕೃಷಿ ಅಭಿವೃದ್ಧಿಗೆ ಹಾಕಿರುವ ಬಂಡವಾಳ ಮತ್ತು ಇದರ ಜೊತೆಗೆ ಮಾಡಲಾದ ಪ್ರಯತ್ನಗಳು ತೃಪ್ತಿಕರವಾಗಿಲ್ಲವೆಂದೇ ಹೇಳಬಹುದು, ಏಕೆಂದರೆ ಹಿಂದೆ ವಿವರಿಸಿದಂತೆ ಕೃಷಿವಲಯವು ಕೈಗಾರಿಕಾವಲಯಕ್ಕೆ ನೀಡಬೇಕಾದ ಬೆಂಬಲವನ್ನೂ ಅದು ಕೊಡುತ್ತಿಲ್ಲ. ಅಲ್ಲದೆ ಗ್ರಾಮೀಣ ಉಳಿತಾಯವು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲವೆಂಬುದನ್ನು ಈ ಕೆಳಗೆ ತೋರಿಸಲಾಗುವುದು.

ಗ್ರಾಮೀಣ ಉಳಿತಾಯ

ರಾಷ್ಟ್ರವು ಅಭಿವೃದ್ಧಿ ಹಂತ ತಲುಪಿದ ನಂತರ ಗ್ರಾಮೀಣ ವಲಯವು ದೇಶದ ಒಟ್ಟು ಉಳಿತಾಯಕ್ಕೆ ತನ್ನದೇ ಆದ ನಿವ್ವಳ ಉಳಿತಾಯವನ್ನು ನೀಡಬಲ್ಲದು ಎಂಬುದು ಸೈದ್ಧಾಂತಿಕವಾಗಿಯೂ, ಅನುಭವಗಳಿಂದಲೂ ಸಮರ್ಥನೀಯವಾದ ವಿಷಯವಾಗಿದೆ. ಗ್ರಾಮೀಣ ವಲಯದ ಉದ್ಯಮಗಳಲ್ಲಿ ಬಂಡವಾಳ–ಉತ್ಪನ್ನ ಪ್ರಮಾಣ ಕಡಿಮೆಯಾಗಿರುವುದರಿಂದ ಅವಶ್ಯಕವಾಗುವ ಬಂಡವಾಳ ಸಾಪೇಕ್ಷವಾಗಿ ಕಡಿಮೆಯಾಗಿರುವುದು. ಅಭಿವೃದ್ಧಿಯಾಗುತ್ತಿರುವ ಹಂತದಲ್ಲಿ ಆಂತರಿಕ ವ್ಯಾಪಾರದ ಷರತ್ತುಗಳು ಕೃಷಿಗೆ ಅನುಕೂಲವಾಗಿರುವುದರಿಂದ ಕೃಷಿಕರ ವರಮಾನಗಳೂ ಸಾಪೇಕ್ಷವಾಗಿ ಹೆಚ್ಚುದರದಲ್ಲಿ ಬೆಳೆಯುತ್ತವೆಂದು ಸಾಮಾನ್ಯವಾಗಿ ಹೇಳಲಾಗಿದೆ. ಗ್ರಾಮೀಣ ಜನತೆಯ ಅನುಭೋಗ ವೆಚ್ಚ ಸಾಧಾರಣವಾಗಿ ಅವರ ವರಮಾನಗಳಿಗೆ ಅನುಗುಣವಾಗಿ ಹೆಚ್ಚುವ ಪ್ರವೃತ್ತಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಕೃಷಿ ಅಭಿವೃದ್ಧಿಯೊಡನೆ ಲಭಿಸುವ ವರಮಾನದಲ್ಲಿ ಗ್ರಾಮೀಣ ಜನತೆಯು ಮಾಡುವ ಉಳಿತಾಯವು ಗ್ರಾಮೀಣ ಉದ್ಯಮಗಳಿಗೆ ಮಾತ್ರ ಬಂಡವಾಳ ಒದಗಿಸುವುದಲ್ಲದೆ ಕೃಷಿಯೇತರ ಉದ್ಯಮಗಳಿಗೂ ಬಂಡವಾಳ ಒದಗಿಸಬಲ್ಲದೆಂದು ಹೇಳಲಾಗಿದೆ.

ಈ ಮೇಲಿನ ವಿಚಾರಧಾರೆಯ ಹಿನ್ನೆಲೆಯಲ್ಲಿ ಭಾರತದಲ್ಲಿ ಈವರೆಗೆ ಕಂಡು ಬಂದಿರುವ ಪರಿಸ್ಥಿತಿಯನ್ನು ಕೋಷ್ಟಕ 3ರಲ್ಲಿನ ಅಂಕಿ ಅಂಶಗಳ ಸಹಾಯದಿಂದ ಪರಿಶೀಲಿಸಬಹುದು

ಕೋಷ್ಟಕ 3. ಗ್ರಾಮೀಣ ಉಳಿತಾಯ ಮತ್ತು ಕೃಷಿ ಉದ್ಯಮದಲ್ಲಿ ಬಂಡವಾಳ ಹೂಡಿಕೆ

(ಗ್ರಾಮೀಣ ವರಮಾನಗಳ ಶೇಕಡಾ ಭಾಗದ ಲೆಕ್ಕದಲ್ಲಿ)

ಯೋಜನಾ ಅವಧಿ	ನಿವ್ವಳ ಉಳಿತಾಯ	ಒಟ್ಟು ಹೂಡಿಕೆ	ನಿವ್ವಳ ಹೂಡಿಕೆ
ಮೊದಲನೆ ಯೋಜನೆ	2.32	4.66	2.42
ಎರಡನೆ ಯೋಜನೆ	2.45	6.46	4.32
ಮೂರನೆ ಯೋಜನೆ	2.61	6.39	4.43
ಮೂರು ವಾರ್ಷಿಕ ಯೋಜನೆಗಳು	3.85	6.56	4.66
ನಾಲ್ಕನೆ ಯೋಜನೆ	4.48	7.19	5.02

ಮೂಲ : Raj Krishna & G.S. Roy Chaudhuri, **Trends in Rural Savings and Capital Formation in India 1950-51 to 1973-74.**

ಕೋಷ್ಟಕ 3ರಲ್ಲಿ ಕಾಣಿಸಿರುವಂತೆ, ಗ್ರಾಮೀಣ ಉಳಿತಾಯ ದರ ತೀರಾ ಕಡಿಮೆಯಾಗಿದೆ. ನಾಲ್ಕನೆಯ ಯೋಜನೆ ಅವಧಿಯಲ್ಲಿ ದೇಶದಒಟ್ಟು ಉಳಿತಾಯ ರಾಷ್ಟ್ರೀಯ ವರಮಾನದ ಶೇಕಡಾ13ರಷ್ಟು ಆಗಿದ್ದಿತು; ಆದರೆ ಗ್ರಾಮೀಣ ಉಳಿತಾಯ ಗ್ರಾಮೀಣ ವರಮಾನದ ಕೇವಲ 4.5ರಷ್ಟು ಮಾತ್ರವಾಗಿದ್ದಿತು ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರದ ಒಟ್ಟು ಉಳಿತಾಯ ಗಮನಾರ್ಹವಾಗಿ ಹೆಚ್ಚುತ್ತಾ ಬಂದಿದೆ. 1976–77ರಿಂದ 1983–84ರ ಅವಧಿಯಲ್ಲಿ ಇದು ರಾಷ್ಟ್ರೀಯವರಮಾನದ ಸರಾಸರಿ ಶೇಕಡಾ 23-ರಷ್ಟಿದೆ.[1] ಆದರೆ ರಾಷ್ಟ್ರದ ಒಟ್ಟು ಉಳಿತಾಯ ಹೆಚ್ಚಿದ ದರದಲ್ಲಿಯೇ ಗ್ರಾಮೀಣ ಉಳಿತಾಯ ಭಾಗ ಹೆಚ್ಚಿರುವುದಿಲ್ಲ. ಕೃಷಿ ಉದ್ಯಮದಲ್ಲಿ ಹಾಕಲಾಗಿರುವ ಹೂಡಿಕೆಯ

1. G.O.I. Economic Survey, 1984-85 table no. 1-3, p. 93

ಗ್ರಾಮೀಣ ಉಳಿತಾಯಕ್ಕಿಂತಲೂ ಹೆಚ್ಚಾಗಿದೆ. ಅಂದಮೇಲೆ ಗ್ರಾಮಗಳಿಗೆ ಕೃಷಿ ಅಭಿವೃದ್ಧಿಗಾಗಿ ಹೊರಗಿನಿಂದ ಬಂಡವಾಳ ವರ್ಗಾವಣೆಯಾದಂತೆ ಆಗಿದೆ. ಇದು ತೃಪ್ತಿಕರ ಪರಿಸ್ಥಿತಿಯಲ್ಲ. ಗ್ರಾಮಗಳ ವರಮಾನಗಳು ಹೆಚ್ಚಬೇಕು. ಇದರಿಂದ ಗ್ರಾಮೀಣ ಉಳಿತಾಯವೂ ಹೆಚ್ಚಿ ಕೃಷಿ ಅಭಿವೃದ್ಧಿಗೆ ಈ ಉಳಿತಾಯವೇ ಸಾಕಾಗುವಂತಾಗಬೇಕು. ಆದರೆ ಇದು ಕೃಷಿಯ ತೀವ್ರ ಅಭಿವೃದ್ಧಿಯನ್ನೇ ಅವಲಂಬಿಸಿದೆ ಎಂದರೆ ಇದು ಒಳಗೊಳುವ ವಿಷವರ್ತುಲ ಸ್ಪಷ್ಟವಾಗುವುದು.

ಗ್ರಾಮೀಣ ಉಳಿತಾಯಕ್ಕಿಂತಲೂ ಹೆಚ್ಚಾಗಿದೆ. ಅಂದಮೇಲೆ ಗ್ರಾಮಗಳಿಗೆ ಕೃಷಿ ಅಭಿವೃದ್ಧಿಗಾಗಿ ಹೊರಗಿನಿಂದ ಬಂಡವಾಳ ವರ್ಗಾವಣೆಯೂದಂತೆ ಆಗಿದೆ. ಇದು ತೃಪ್ತಿಕರ ಪರಿಸ್ಥಿತಿಯಲ್ಲ. ಗ್ರಾಮಗಳ ವರಮಾನಗಳು ಹೆಚ್ಚಬೇಕು. ಇದರಿಂದ ಗ್ರಾಮೀಣ ಉಳಿತಾಯವೂ ಹೆಚ್ಚಿ ಕೃಷಿ ಅಭಿವೃದ್ಧಿಗೆ ಈ ಉಳಿತಾಯವೇ ಸಾಕಾಗುವಂತಾಗಬೇಕು. ಆದರೆ ಇದು ಕೃಷಿಯ ತೀವ್ರ ಅಭಿವೃದ್ಧಿಯನ್ನೇ ಅವಲಂಬಿಸಿದೆ ಎಂದರೆ ಇದು ಒಳಗೊಳ್ಳುವ ವಿಷವರ್ತುಲ ಸ್ಪಷ್ಟವಾಗುವುದು.

ಅಧ್ಯಾಯ 4

ಕೃಷಿ ಅಭಿವೃದ್ಧಿಗಾಗಿ ಸಂಸ್ಥಾ ಅಡಿಪಾಯ ರಚನೆ ಯೋಜನೆ

ಭಾರತದ ಪುರಾತನ ಮಾದರಿ ಕೃಷಿಯನ್ನು ಆಧುನಿಕಗೊಳಿಸುವುದು ಅನೇಕ ವಿಧದ ಕಾರ್ಯಕ್ರಮಗಳನ್ನು ಒಳಗೊಂಡಿರುವ ಕಷ್ಟಸಾಧ್ಯವಾದ ಕೆಲಸ. ಭೂಸುಧಾರಣೆಗಳು, ಸಾಮುದಾಯಿಕ ಅಭಿವೃದ್ಧಿ; ಪಂಚಾಯಿತಿ ರಾಜ್, ಸಹಕಾರಿ ಸಂಸ್ಥೆಗಳು ಮತ್ತು ಕೃಷಿ ಸಂಶೋಧನಾ ಕೇಂದ್ರಗಳು, ಸಣ್ಣ ಕೃಷಿಕರ ಅಭಿವೃದ್ಧಿ ಏಜೆನ್ಸಿ ಇವೆಲ್ಲವೂ ಸಂಸ್ಥಾ ಅಡಿಪಾಯ ರಚನೆಗೆ ಸೇರುವ ಅತಿಮುಖ್ಯ ಅಭಿವೃದ್ಧಿ ಅವಶ್ಯಕತೆಗಳಾಗಿವೆ. ಯೋಜನೆಗಳ ಪ್ರಕಾರ ಇವುಗಳ ಬೆಳವಣಿಗೆಯ ಸ್ಥೂಲ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗುವುದು.

ಭೂಸುಧಾರಣೆಗಳು

ಭೂಒಡೆಯರು, ಗೇಣಿದಾರರು, ಕೃಷಿಕಾರ್ಮಿಕರು ಇವರುಗಳೊಳಗೆ ಇರತಕ್ಕ ಕಾನೂನಿನ ಆರ್ಥಿಕ ಹಾಗೂ ಸಾಮಾಜಿಕ ಸಂಬಂಧಗಳು ಕೃಷಿ ಉದ್ಯಮಕ್ಕೆ ತಳಹದಿ ರೂಪದ ಪ್ರಾಮುಖ್ಯತೆ ಹೊಂದಿವೆ. ಸಾಗುವಳಿ ಭೂಘಟಕದ ವಿಸ್ತೀರ್ಣವೂ ಇಂತಹ ಅಡಿಪಾಯ ರೂಪದ ಇನ್ನೊಂದು ಮುಖ್ಯಾಂಶವಾಗಿದೆ. ಭಾರತದ ಯೋಜನೆ ಆರಂಭ ಮಾದಾಗ ಈ ಎಲ್ಲವರ ಬಗ್ಗೆಯೂ ಅನೇಕ ಲೋಪದೋಷಗಳು ಐತಿಹಾಸಿಕ ಕಾರಣಗಳಿಂದ ಬೆಳೆದುಬಂದಿದ್ದು ಪರಿಸ್ಥಿತಿಯು ತೃಪ್ತಿಕರವಾಗಿರಲಿಲ್ಲ. ಆಧುನಿಕ ಕೃಷಿ ವಿಧಾನವನ್ನು ಅನುಸರಿಸಬೇಕಾದರೆ ಭೂ ಪದ್ಧತಿಯ ಈ ಲೋಪದೋಷಗಳೆಲ್ಲವನ್ನೂ ನಿರ್ಮೂಲ ಮಾಡಬೇಕಾದುದು ಆದ್ಯಕರ್ತವ್ಯವಾಗಿದೆ ಎಂದು ಪ್ರಥಮ ಯೋಜನೆಯೇ ಸಾರಿತು. ಕೃಷಿ ರಚನೆಯಿಂದ ಉದ್ಭವಿಸುವ ಅಡಚಣೆಗಳನ್ನು ತೊಡೆದು ಹಾಕುವುದು, ಕೃಷಿಕ ವ್ಯವಸ್ಥೆಯಲ್ಲಿರುವ ಶೋಷಣಾ ಮಾರ್ಗಗಳನ್ನು ಹಾಗೂ ಸಾಮಾಜಿಕ ಅನ್ಯಾಯಗಳನ್ನು ತಪ್ಪಿಸುವುದು, ಭೂಸಾಗುವಳಿದಾರನಿಗೆ ರಕ್ಷಣೆ ನೀಡುವುದು

ಮತ್ತು ಗ್ರಾಮೀಣ ಜನತೆಯ ಎಲ್ಲಾ ವಿಭಾಗದವರಿಗೂ ಸಮಾನ ಅಂತಸ್ತು ಹಾಗೂ ಸಮಾನಾವಕಾಶ ದೊರಕಿಸುವುದು ಭಾರತದ ಭೂಸುಧಾರಣೆಗಳ ಮುಖ್ಯ ಗುರಿಗಳಾಗಿವೆ[1] ಭೂ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳನ್ನು ನಿರ್ಮೂಲ ಮಾಡುವುದು, ಗೇಣಿದಾರರಿಗೆ ಸಲ್ಲಬೇಕಾದ ನ್ಯಾಯ ಗೇಣಿ ಭರವಸೆ, ಒಕ್ಕಲೆಬ್ಬಿಸುವಿಕೆಯನ್ನು ನಿರೋಧಿಸುವಿಕೆ, ಗೇಣಿದಾರರಿಗೆ ಭೂ ಒಡೆತನವನ್ನು ಕೊಡಿಸುವಿಕೆ, ಒಬ್ಬರು ಹೊಂದಬಹುದಾದ ಹಿಡುವಳಿಯ ವಿಸ್ತೀರ್ಣಕ್ಕೆ ಮೇಲ್ಮಿತಿ ವಿಧಿಸುವ ಮೂಲಕ ಭೂಒಡೆತನದಲ್ಲಿ ಅಂತರ ಕಡಮೆ ಮಾಡುವಿಕೆ, ಭೂರಹಿತ ಕಾರ್ಮಿಕರಿಗೆ ಭೂಮಿ ಕೊಡಿಸುವಿಕೆ ಮತ್ತು ಛಿದ್ರಹಿಡುವಳಿಗಳನ್ನು ಒಂದುಗೂಡಿಸಿ ಆರ್ಥಿಕ ಹಿಡುವಳಿಗಾಗಿ ಪರಿವರ್ತಿಸುವಿಕೆ— ಇವೆಲ್ಲವೂ ಭೂಸುಧಾರಣೆಗಳ ವ್ಯಾಪ್ತಿಗೆ ಸೇರಿರುವ ಅಂಶಗಳಾಗಿವೆ.

ಕೃಷಿಕರ ಶೋಷಣೆಗೆ ಮುಖ್ಯ ಕಾರಣವಾಗಿದ್ದ ಜಮೀನ್ದಾರಿ ಪದ್ಧತಿಯನ್ನು ಜಹಗೀರುಗಳು ಹಾಗೂ ಇನಾಂಭೂಮಿಗಳನ್ನು ರದ್ದುಗೊಳಿಸುವುದಕ್ಕೆ ಭಾರತದ ಯೋಜನೆಯಲ್ಲಿ ಆದ್ಯತೆ ನೀಡಿ 1963ಕ್ಕೆ ಇದನ್ನು ಯಶಸ್ವಿಗೊಳಿಸಿದುದು ಭೂಸುಧಾರಣೆಗಳ ಮುನ್ನಡೆಯಲ್ಲಿ ಪ್ರಥಮ ಮುಖ್ಯ ಸಾಧನೆಯಾಗಿದೆ. ಈ ಸಂಬಂಧದಲ್ಲಿ ಜಮೀನುದಾರರು, ಜಹಗೀರುದಾರರು ಮತ್ತು ಇನಾಂದಾರರುಗಳಿಗೆ ನೀಡಲಾದ ನಗದು ರೂಪದ ಮತ್ತು ಬಾಂಡುಗಳ ರೂಪದ ಪರಿಹಾರಧನದ ಒಟ್ಟು ಮೊತ್ತ 641 ಕೋಟಿ ರೂಪಾಯಿಗಳು.[2] ಈ ಹಣವನ್ನು ಪಡೆದವರು ಇದನ್ನು ಉತ್ಪನ್ನದಾಯಕ ಉದ್ಯಮಗಳಲ್ಲಿ ತೊಡಗಿಸಿರುವಷ್ಟು ಮಟ್ಟಿಗೆ ಇದು ಬಂಡವಾಳ ಸಂಚಯನಕ್ಕೂ ಸಹಾಯಕವಾಗಿದೆ ಎಂದು ಹೇಳಬಹುದು. ಈ ಭೂಸುಧಾರಣಾಕ್ರಮದ ನೇರ ಪರಿಣಾಮವಾಗಿ ಲಕ್ಷಾಂತರ ಗೇಣಿದಾರರು ಜಮೀನ್ದಾರರ ಹಿಡಿತದಿಂದ ವಿಮುಕ್ತಿಗೊಳಿಸಲ್ಪಟ್ಟು ಸರ್ಕಾರದೊಡನೆ ನೇರ ಸಂಬಂಧವುಳ್ಳ ಸ್ವತಂತ್ರರೈತರುಗಳಾಗಿ ಪರಿವರ್ತಿಸಲ್ಪಟ್ಟಿರುತ್ತಾರೆ. ಇದು ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಅತಿ ಮುಖ್ಯ ಸಾಧನೆಯಾಗಿದೆ. ಅಲ್ಲದೆ, ಗಣನೀಯ ಪ್ರಮಾಣದ ಸಾಗುವಳಿ ಯೋಗ್ಯವಾದ ಬಂಜರು ಭೂಮಿಯೂ ಖಾಸಗಿ ಒಡೆತನದಲ್ಲಿದ್ದ ಅರಣ್ಯ ಪ್ರದೇಶವೂ ಈ ಕ್ರಮದಿಂದ ಸರ್ಕಾರದ ವಶಕ್ಕೆ ಬಂದಿತು. ಜಮೀನ್ದಾರಿ ಪದ್ಧತಿಯ ರದ್ದತಿಯು ಐರೋಪ್ಯ ರಾಷ್ಟ್ರಗಳಲ್ಲಿ ಮಧ್ಯಯುಗದಲ್ಲಿದ್ದ ಊಳಿಗಮಾನ್ಯ ಪದ್ಧತಿಯನ್ನು ತೊಡೆದುಹಾಕಿದುದಕ್ಕೆ ಸಮಾನವಾಗಿದೆ ಎಂದು ಹೇಳಬಹುದು. ಈ ಕ್ರಮವು ಬಹುಮಟ್ಟಿಗೆ ಉತ್ತರ

1. G.O.I., Third Five Year Plan, p. 220
2. G.O.I., The Third Plan-Mid-term Appraisal,Nov. 1963,P.99.

ಪ್ರದೇಶ, ಬಿಹಾರ ಹಾಗೂ ಪಶ್ಚಿಮಬಂಗಾಳ ಪ್ರಾಂತ್ಯಗಳ ಕೃಷಿ ಭೂವ್ಯವಸ್ಥೆಯನ್ನು ಗಮನಾರ್ಹವಾಗಿ ಮಾರ್ಪಡಿಸಿ ಆಧುನಿಕ ಕೃಷಿ ವಿಧಾನಗಳ ಅನುಸರಣೆಗೆ ಮಾರ್ಗ ಮಾಡಿಕೊಟ್ಟಿತು.

ಜಮೀನ್ದಾರಿ ರದ್ದತಿ ಬಗ್ಗೆ ಸಾಧಿಸಲಾದ ಯಶಸ್ಸು ಹಿಂದೆ ಹೇಳಲಾದ ಭೂಸುಧಾರಣೆಗಳ ಇತರ ಅಂಶಗಳ ಬಗ್ಗೆ ಅಷ್ಟೊಂದಾಗಿ ಕಾಣಬರುವುದಿಲ್ಲ. ಗೇಣಿದಾರರಿಗೆ ಭೂ ಒಡೆತನದ ಹಕ್ಕನ್ನು ನೀಡುವುದು, ಒಬ್ಬನು ಹೊಂದಬಹುದಾದ ಜಮೀನಿಗೆ ಮೇಲ್ಮಿತಿ ವಿಧಿಸುವುದು: ಚಿಕ್ಕಪುಟ್ಟ ಹಾಗೂ ಛಿದ್ರ ಹಿಡುವಳಿಗಳನ್ನು ಒಂದುಗೂಡಿಸುವುದು ಇತ್ಯಾದಿ ಮುಖ್ಯ ಭೂಸುಧಾರಣಾ ಅಂಶಗಳು ವಿವಾದಕ್ಕೆ ಎಡೆಯಾಗಿ, ವಿವಿಧ ಗುಂಪುಗಳ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತಕ್ಕೆ ಒಳಗಾಗಿ ಹಾಗೂ ಜಮೀನುಗಳ ಹಕ್ಕುಭಾದ್ಯತೆ ದಾಖಲೆಗಳ ಅಸಮರ್ಪಕ ಪರಿಸ್ಥಿತಿಯಿಂದಾಗಿ ಇವು ಕಾರ್ಯಗತವಾಗುವುದರಲ್ಲಿ ಅತ್ಯಂತ ವಿಳಂಬವಾಗಿದೆ. ಕೃಷಿ ಉದ್ಯಮದ ಆಧುನಿಕ ಅಭಿವೃದ್ಧಿಗೆ ಅಡಚಣೆಯಾಗಿದೆ. ಭೂಸುಧಾರಣೆಗಳು ಎಲ್ಲಾ ಭಾಗದಲ್ಲಿಯೂ ಶೀಘ್ರವಾಗಿಯೂ, ಯಶಸ್ವಿಯಾಗಿಯೂ ನೆರವೇರಿಸಲ್ಪಟ್ಟಿದ್ದರೆ 1951ರಿಂದ ಯೋಜನೆಗಳ ಪ್ರಕಾರ ಕೃಷಿ ಮತ್ತು ನೀರಾವರಿ ಅಭಿವೃದ್ಧಿಗೆಂದು ಮಾಡಲಾದ ಕೋಟ್ಯಾಂತರ ರೂಪಾಯಿಗಳ (1951–52ರಿಂದ 1978–79ರ ವರೆಗಿನ ವೆಚ್ಚ 18. 329 ಕೋಟಿ ರೂಪಾಯಿಗಳು) ಬಂಡವಾಳ ವೆಚ್ಚವು ಈಗ ಆಗಿರುವುದಕ್ಕಿಂತಲೂ ಬಹುಪಾಲು ಹೆಚ್ಚು ಫಲಪ್ರದವಾಗುತ್ತಿದ್ದಿತೆಂದು ಹೇಳಬಹುದು. ಇತ್ತೀಚಿನ ವರ್ಷಗಳಲ್ಲಿ ಭೂಸುಧಾರಣೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರಲು ಎಲ್ಲಾ ರಾಜ್ಯ ಸರ್ಕಾರಗಳು ಪ್ರಯತ್ನಿಸುತ್ತವೆ. ಇದರ ಫಲವಾಗಿ ಕೃಷಿ ಭೂ ವ್ಯವಸ್ಥೆಯಲ್ಲಿ ಅರ್ಥಪೂರ್ಣವಾದ ತಳಹದಿ ಬದಲಾವಣೆಗಳು ಉಂಟಾಗುತ್ತಿವೆ. ಇದರಿಂದ ಪ್ರಸಕ್ತ ಆರನೆ ಯೋಜನೆ ಪ್ರಕಾರ ಕೈಗೊಳ್ಳಲಾಗುತ್ತಿರುವ ಕೃಷಿ ಅಭಿವೃದ್ಧಿ ವೆಚ್ಚವು ಹೆಚ್ಚು ಫಲದಾಯಕವಾಗಲು ಸಹಾಯಕವಾದ ವಾತಾವರಣ ಏರ್ಪಡುತ್ತಿದೆ.

ಸಾಮುದಾಯಿಕ ಅಭಿವೃದ್ಧಿ ವ್ಯವಸ್ಥೆ ಹಾಗೂ ಪಂಚಾಯಿತ ರಾಜ್ಯ ಸಂಸ್ಥೆಗಳು

ಒಂದು ಮೂಲಭೂತ ಸಂಸ್ಕಾರಚನೆಯಾದ ಸಾಮುದಾಯಿಕ ಅಭಿವೃದ್ಧಿ ಮತ್ತು ವಿಸ್ತರಣಾ ಸೇವೆಗಳ ವ್ಯವಸ್ಥೆಯು ಭಾರತದ ಗ್ರಾಮೀಣ ಯೋಜಿತ ಆರ್ಥಿಕಾಭಿವೃದ್ಧಿಗೆ

ಅವಶ್ಯಕ ಎಂಬ ಅಂಶವನ್ನು ಗ್ರಹಿಸಿ ಈ ವ್ಯವಸ್ಥೆಯನ್ನು ನಿರ್ಮಿಸಲು ಪ್ರಥಮ ಯೋಜನೆಯಲ್ಲಿಯೇ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಯಿತು. ರಾಷ್ಟ್ರದ ಅಭಿವೃದ್ಧಿಗಾಗಿ ರೂಪಿಸಲಾದ ಯೋಜಿತ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ಸರ್ಕಾರದ ಪ್ರಯತ್ನಗಳೊಡನೆ ಜನತೆಯ ಪ್ರಯತ್ನಗಳನ್ನು ಒಂದುಗೂಡಿಸುವುದೇ ಸಾಮುದಾಯಿಕ ಅಭಿವೃದ್ಧಿ ವ್ಯವಸ್ಥೆಯ ಉದ್ದೇಶವಾಗಿದೆ.[1] ಅಭಿವೃದ್ಧಿ ಹಾಗೂ ಪ್ರಜಾಸತ್ತೆ ಇವುಗಳ ದೃಷ್ಟಿಯಿಂದ ಜನತೆಗೆ ಅವಶ್ಯಕವಾದ ತಿಳಿವಳಿಕೆಯನ್ನು ಗ್ರಾಮೀಣ ಜನತೆಯಲ್ಲಿ ಹರಡಲು ರಾಷ್ಟ್ರೀಯ ವಿಸ್ತರಣಾ ಸೇವೆಗಳ ವ್ಯವಸ್ಥೆಯು ಸಾಮುದಾಯಿಕ ಅಭಿವೃದ್ಧಿಯ ಸಹವ್ಯವಸ್ಥೆಯಾಗಿ ರೂಪಿಸಲ್ಪಟ್ಟಿತು. ಈ ವ್ಯವಸ್ಥೆಯನ್ನು ನಿರ್ಮಿಸಲು ಆದ್ಯತೆ ನೀಡಿದುದರಿಂದ 1963ರ ಅಕ್ಟೋಬರ್ ವೇಳೆಗೆ ಸಾಮುದಾಯಿಕ ಅಭಿವೃದ್ಧಿ ವ್ಯವಸ್ಥೆಯು ದೇಶದ ಎಲ್ಲಾ ಭಾಗಗಳನ್ನೂ ಆವರಿಸಿತು. ಅನೇಕ ಗ್ರಾಮಗಳು ಕೂಡಿದಂತೆ ಬ್ಲಾಕುಗಳ ವಿಂಗಡಣೆಯಾಯಿತು. ಗ್ರಾಮದಿಂದ ಹಿಡಿದು ಮೇಲಿನ ಮಟ್ಟಗಳವರೆಗೆ ನೌಕರರನ್ನು, ಅಧಿಕಾರಿಗಳನ್ನು ನೇಮಿಸಲಾಯಿತು. ಕೇಂದ್ರ ಸರ್ಕಾರದಲ್ಲಿ ಸಾಮುದಾಯಿಕ ಅಭಿವೃದ್ಧಿಗೆಂದೇ ಪ್ರತ್ಯೇಕ ಸಚಿವ ಶಾಖೆಯೊಂದು ನಿರ್ಮಾಣವಾಯಿತು. ಅಲ್ಲದೆ ಸಾಮುದಾಯಿಕ ಅಭಿವೃದ್ಧಿ ಅಧ್ಯಯನ ಹಾಗೂ ಸಂಶೋಧನ ರಾಷ್ಟ್ರೀಯ ಮಂಡಳಿಯೊಂದು ಸ್ಥಾಪಿಸಲ್ಪಟ್ಟಿತು. ಹೀಗೆ ಸಾಮುದಾಯಿಕ ಅಭಿವೃದ್ಧಿ ವ್ಯವಸ್ಥೆಯು ಅಗಾಧವಾಗಿ ಬೆಳೆದು ತನ್ನ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತಿದೆ.

ಪಂಚಾಯಿತಿ ರಾಜ್ಯ ಸಂಸ್ಥೆಗಳ ಬೆಳವಣಿಗೆ ಇನ್ನೊಂದು ಅರ್ಥಪೂರ್ಣ ಬೆಳವಣಿಗೆಯಾಗಿದೆ. ಸ್ಥಳೀಯ ಮಟ್ಟಗಳಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಿರ್ಮಿಸುವುದೇ ಇದರ ಉದ್ದೇಶವಾಗಿದೆ. ಗ್ರಾಮ, ಬ್ಲಾಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಒಳಗೊಂಡಿರುವ ಪಂಚಾಯಿತಿ ರಾಜ್ಯ ಸ್ಥಾಪನೆಯ ಕಾರ್ಯಕ್ರಮವನ್ನು ರಾಜಾಸ್ಥಾನದಲ್ಲಿ 1959ರ ಅಕ್ಟೋಬರ್ 2ರಂದು–ಗಾಂಧೀಜಯಂತಿಯ ಶುಭದಿನದಂದು ಆರಂಭಿಸಲಾಯಿತು. ಆದರೆ ಇದರ ಮುನ್ನಡೆ ಬಹಳ ಮಂದಗತಿಯಿಂದ ಸಾಗಿದುದರಿಂದ ಈಗ ಅಂದರೆ 30 ವರ್ಷಗಳ ನಂತರ ಪೂರ್ಣಗೊಳ್ಳುವ ಹಂತದಲ್ಲಿದೆ.

ಸಾಮುದಾಯಿಕ ಅಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯ ಸಂಸ್ಥೆ ಬೆಳವಣಿಗೆಗಾಗಿ

---

1. G. O. I., **Evolution of Community Development Programme**, 1973, p. 98.

1951–52ರಿಂದ 1978–79ರ ಅವಧಿಯಲ್ಲಿ ಯೋಜನೆಗಳ ಪ್ರಕಾರ ಒಟ್ಟು 928 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಈ ವೆಚ್ಚದ ಫಲವಾಗಿ ಸಂಸ್ಥಾ ರಚನೆಯು ನಿರ್ಮಾಣವೇನೋ ಆದಂತಾಯಿತು. ಆದರೆ ಈ ಸಂಸ್ಥೆಗಳಿಂದ ನೆರವೇರಿರುವ ಕಾರ್ಯಗಳಾದ ಇವುಗಳು ನಿರ್ಮಿತವಾಗಿರುವ ಉದ್ದೇಶಗಳು ಹೆಚ್ಚಾಗಿ ಸಫಲವಾದಂತಾಗಿಲ್ಲ. ಯೋಜನಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗ್ರಾಮೀಣ ಜನತೆಯು ಭಾಗವಹಿಸುವಂತೆ ಮಾಡುವ ಅತಿಮುಖ್ಯ ಕಾರ್ಯದಲ್ಲಿ ಈ ಸಂಸ್ಥೆಗಳು ಯಶಸ್ವಿಯಾಗಿಲ್ಲವೆಂದು ಹೇಳಬಹುದು. ಈ ಸಂಸ್ಥೆಗಳ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯ ವಿಧಾನದ ಲೋಪದೋಷಗಳೇ ಅದಕ್ಕೆ ಮುಖ್ಯಕಾರಣಎಂದು ಹೇಳಬಹುದು. ಇತ್ತೀಚೆಗೆ ಈ ಲೋಪದೋಷಗಳನ್ನು ನಿವಾರಿಸುವ ಪ್ರಯತ್ನ ನಡೆಯುತ್ತಿದೆ. ನಿರ್ಮಿತವಾಗಿರುವ ಅತ್ಯಂತ ಉಪಯುಕ್ತವಾದ ಗ್ರಾಮೀಣ ಸಂಸ್ಥಾರಚನೆಯು ಇದರಿಂದ ಬರಲಿರುವ ವರ್ಷಗಳಲ್ಲಿ ಸಕ್ರಿಯವಾಗಿ ತಮ್ಮ ಪಾತ್ರವನ್ನು ನಿರ್ವಹಿಸಿ ಭಾರತದ ಗ್ರಾಮೀಣ ಅಭಿವೃದ್ಧಿಯನ್ನು ಶೀಘ್ರಗೊಳಿಸುವುದೆಂದು ನಿರೀಕ್ಷಿಸಬಹುದು.

ಗ್ರಾಮೀಣ ಸಹಕಾರ ಸಂಸ್ಥೆಗಳು

ಕೃಷಿ ಅಭಿವೃದ್ಧಿಗಾಗಿ ನೆರವಾಗುವ ವಿವಿಧ ಸಂಸ್ಥೆಗಳ ಆಂತರಿಕ ಸಹಕಾರಕ್ಕೆ ಭಾರತದ ಯೋಜನೆಯಲ್ಲಿ ವಿಶೇಷ ಮಾನ್ಯತೆ ನೀಡಲಾಗಿದೆ. ಸುಮಾರು ಎಂಟು ದಶಕಗಳ ಹಿಂದೆಯೇ ಆರಂಭವಾದ ಭಾರತದ ಸಹಕಾರ ಚಳುವಳಿ ಕೇವಲ ಕುಂಟು ನಡೆಯಿಂದಲೇ ಸಾಗಿ ಬರುತ್ತಿದ್ದುದು, ಯೋಜನಾಭಿವೃದ್ಧಿಯ ಫಲವಾಗಿ ಇತ್ತೀಚಿನ ಎರಡು ದಶಕಗಳಲ್ಲಿ ಹಿಂದಿಗಿಂತ ಹೆಚ್ಚು ವೇಗವಾಗಿ ಬೆಳೆದಿದೆ. ಜನರ ಸ್ವಯಂಪ್ರೇರಿತ ಸಂಘಶಕ್ತಿಯನ್ನು ರೂಢಿಸುವ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಹೊಂದಿಕೊಳ್ಳುವ ಸಹಕಾರಿ ಸಂಘಗಳ ಬೆಳವಣಿಗೆಗೆ 1950ರ ದಶಕದಿಂದೀಚೆಗೆ ಸರ್ಕಾರವು ವಿಶೇಷ ಸಹಾಯ ಹಾಗೂ ಪ್ರೋತ್ಸಾಹ ನೀಡುತ್ತಾ ಬಂದಿದೆ. ತಾತ್ಕಾಲಿಕವಾಗಿ ಸಹಕಾರ ಸಂಘಗಳ ಷೇರುಧನಕ್ಕೂ ಒಂದು ಪಾಲು ಹಣ ಹಾಕುವ ಮತ್ತು ಇತರ ಉತ್ತೇಜನಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಭಾರತದ ಸಹಕಾರದಲ್ಲಿ ಸರ್ಕಾರವು ಪರಿಣಾಮಕಾರಿಯಾದ ಪಾತ್ರವಹಿಸುತ್ತಿದೆ. ಕೃಷಿಗೆ ದೀರ್ಘಾವಧಿ ಹಾಗೂ ಅಲ್ಪಾವಧಿ ಸಾಲ ಒದಗಣೆ ಸಹಕಾರಿ ಸಂಸ್ಥೆಗಳು, ಸಹಕಾರಿ ಕೃಷಿ, ಸಹಕಾರಿ ಮಾರಾಟ ಸಂಸ್ಥೆಗಳು, ಸಹಕಾರಿ ಸೇವಾ ಸಂಸ್ಥೆಗಳು ಇತ್ಯಾದಿ ವಿವಿಧ ರೂಪದ ಸಹಕಾರ ಸಂಸ್ಥೆಗಳು ಬೆಳೆದು ಕೃಷಿ ಅಭಿವೃದ್ಧಿಗೆ ತಮ್ಮದೇ ಆದ ಬೆಂಬಲ ನೀಡುತ್ತಿವೆ.

ಸಹಕಾರ ಬೆಳವಣಿಗೆಗೆ ಯೋಜನೆಗಳನ್ನು ಮಾಡಲಾಗಿರುವ ಹಣ ಹೆಚ್ಚುತ್ತಾ ಬಂದಿದೆ. 1951–52 ರಿಂದ 1978-79ರ ಅವಧಿಯಲ್ಲಿ ಸಹಕಾರಾಭಿವೃದ್ಧಿಗಾಗಿ ಸರ್ಕಾರವು 810 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿತು. ಪ್ರಸಕ್ತ ಜರುಗುತ್ತಿರುವ 1979–84ರ ಯೋಜನೆಯಲ್ಲಿ ಈ ಬಾಬಿಗಾಗಿ 475 ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ. ಸರ್ಕಾರವು ಹೀಗೆ ನೇರವಾಗಿ ಕೈಗೊಂಡಿರುವ ವೆಚ್ಚದ ಜೊತೆಗೆ ಅದು ಸಹಕಾರ ಸಂಸ್ಥೆಗಳಿಗೆ ಭಾರತದ ರಿಸರ್ವ್‌ಬ್ಯಾಂಕ್, ಸ್ಟೇಟ್ ಬ್ಯಾಂಕ್, ವಾಣಿಜ್ಯ ಬ್ಯಾಂಕುಗಳು, ಕೃಷಿ ರಿಫೈನಾನ್ಸ್ ಕಾರ್ಪೊರೇಷನ್ ಇತ್ಯಾದಿ ಹಣಸಂಸ್ಥೆಗಳ ಮೂಲಕವೂ ಉದಾರವಾಗಿ ಧನ ಸಹಾಯ ಒದಗಿಸುವ ಏರ್ಪಾಡುಗಳನ್ನು ಮಾಡಿದೆ. ಈ ಉತ್ತೇಜಕ ಕ್ರಮಗಳ ಪ್ರಯೋಜನ ಪಡೆದು ಸಹಕಾರಿ ಕ್ಷೇತ್ರವು ಗಣನೀಯವಾಗಿ ವಿಸ್ತಾರಗೊಂಡಿದೆ.

1976ರ ವೇಳೆಗೆ 19 ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು, ಇವುಗಳಿಗೆ ಸೇರಿದಂತೆ 1707 ಶಾಖೆಗಳು ಹಾಗೂ ಪ್ರೈಮರಿ ಭೂ ಅಭಿವೃದ್ಧಿ ಬ್ಯಾಂಕುಗಳು, 25 ರಾಜ್ಯ ಸಹಕಾರಿ ಬ್ಯಾಂಕುಗಳು, 344 ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು 1.40 ಲಕ್ಷ ಪ್ರೈಮರಿ ಕೃಷಿ ಸಾಲ ಸೊಸೈಟಿಗಳು ಸೇರಿ ಕೃಷಿಕರಿಗೆ ದೀರ್ಘ ಹಾಗೂ ಅಲ್ಪಾವಧಿ ಸಾಲ ಹಣ ಸೌಲಭ್ಯವನ್ನು ಒದಗಿಸುತ್ತಿದ್ದವು. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಕಾರ್ಪೊರೇಷನ್, ರಾಷ್ಟ್ರೀಯ ಕೃಷಿ ಸಹಕಾರಿ ಮಾರಾಟ ಫೆಡರೇಷನ್, ಸಹಕಾರಿ ಸಕ್ಕರೆ ಗಿರಣಿಗಳ ರಾಷ್ಟ್ರೀಯ ಫೆಡರೇಷನ್, 22 ರಾಜ್ಯ ಸಹಕಾರಿ ಮಾರಾಟ ಫೆಡರೇಷನ್‌ಗಳು, ಹತ್ತಿ, ಕಬ್ಬು, ಹಣ್ಣು ಇತ್ಯಾದಿ ಸರಕುಗಳ ಬಗ್ಗೆ 7 ರಾಜ್ಯ ಸಹಕಾರಿ ಮಾರಾಟ ಫೆಡರೇಷನ್‌ಗಳು. 2 ಅಂತರ್‌ರಾಜ್ಯ ಮಾರಾಟ ಫೆಡರೇಷನ್‌ಗಳು, 362 ಜಿಲ್ಲಾ ಕೇಂದ್ರ ಸಹಕಾರಿ ಮಾರಾಟ ಸೊಸೈಟಿಗಳು ಮತ್ತು 3240 ಪ್ರೈಮರಿ ಸೊಸೈಟಿಗಳು ಇವೆಲ್ಲವೂ ಕೃಷಿ ಮಾರಾಟ ಸಹಕಾರಿ ರಚನೆಯು ಒಳಗೊಂಡಿರುವ ಮಾರಾಟಸಂಸ್ಥೆಗಳಾಗಿವೆ. ಇವೆಲ್ಲದರ ಜೊತೆಗೆ ಕೃಷಿ ಮಾರಾಟಕ್ಕೆ ಸಹಾಯವಾಗುವಂತೆ ಸರ್ಕಾರವು ರೆಗ್ಯುಲೇಟೆಡ್ ಮಾರುಕಟ್ಟೆಗಳನ್ನೂ, ಗೋದಾಮುಗಳನ್ನೂ ಸ್ಥಾಪಿಸಿದೆ. ಕೃಷಿ ಮಾರಾಟ ತಿಳಿವಳಿಕೆ ಪ್ರಸರಣಕ್ಕಾಗಿ ಅನೇಕ ಕ್ರಮಗಳನ್ನು ಅದು ಕೈಗೊಂಡಿದೆ. ಸಹಕಾರಿ ಸಂಸ್ಥೆಗಳಿಗೆ ನುರಿತ ಸಿಬ್ಬಂದಿ ಒದಗಿಸುವ ಸಲುವಾಗಿ ಸಹಕಾರಿ ಶಿಕ್ಷಣ ಕೇಂದ್ರಗಳನ್ನು ತೆರೆದಿದೆ. ಹೀಗೆ ಸರ್ಕಾರದ ಬೆಂಬಲ ಪಡೆದು ಕೃಷಿಗೆ ಸಹಾಯಕವಾದ ಅನೇಕ ವಿಧದ ಸಹಕಾರ ಸಂಸ್ಥೆಗಳು ಯೋಜನಾ ಯುಗದಲ್ಲಿ ತೀವ್ರವಾಗಿ ಬೆಳೆದಿವೆ.

ಮೇಲೆ ಹೇಳಿರುವಂತೆ ಭಾರತದ ಸಹಕಾರಿ ಸಂಸ್ಥಾರಚನೆಯು ವಿಸ್ತಾರವಾಗಿ ಬೆಳೆದಿರುವುದಾದರೂ ಇವುಗಳ ಕ್ರಿಯಾಸ್ವರೂಪದ ಲೋಪದೋಷಗಳಿಂದಾಗಿ ಕೃಷಿ ಅಭಿವೃದ್ಧಿಗೆ ಅವುಗಳಿಂದ ಆಗಬಹುದಾದಷ್ಟು ಪ್ರಯೋಜನ ದೊರಕಿಲ್ಲವೆಂದು ಹೇಳಬಹುದು. ಅಲ್ಲದೆ, ಸಹಕಾರಿ ಸಂಘಗಳ ಸಹಾಯ ಬಹುಮಟ್ಟಿಗೆ ದೊಡ್ಡ ಜಮೀನುದಾರರಿಗೆ ಸೀಮಿತವಾಗಿದ್ದು ಬಹು ಮಂದಿ ಸಣ್ಣ ಪುಟ್ಟ ಕೃಷಿಕರಿಗೆ ಇದು ಇನ್ನೂ ಲಭ್ಯವಾಗಿರುವುದಿಲ್ಲ. 1976-78ರಲ್ಲಿ ಸಹಕಾರ ಸಂಸ್ಥೆಗಳು ನೀಡಿದ ಒಟ್ಟು ಕೃಷಿ ಸಾಲ ಹಣದಲ್ಲಿ ಒಟ್ಟು ಹಿಡುವಳಿಗಳಲ್ಲಿ ಶೇಕಡಾ 70ಕ್ಕೂ ಹೆಚ್ಚು ಭಾಗ ಹಿಡುವಳಿಗಳನ್ನು ಹೊಂದಿರುವ ಸಣ್ಣ ಕೃಷಿಕರ- ಅಂದರೆ 5 ಹೆಕ್ಟೇರುಗಳಿಗೂ ಕಡಿಮೆ ಜಮೀನು ಹೊಂದಿರುವವರ ಭಾಗ ಕೇವಲ $\frac{1}{3}$ ಮಾತ್ರವಾಗಿದ್ದಿತೆಂದು ಹೇಳಲಾಗಿದೆ.[1] ನಾಲ್ಕನೆಯ ಯೋಜನೆಯಿಂದ ಈಚೆಗೆ ಈ ಸಣ್ಣ ಕೃಷಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಯೋಜನೆಗಳಲ್ಲಿ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದೆ ವಿವರಿಸಲಾಗುವ ಸಣ್ಣ ಕೃಷಿಕರ ಅಭಿವೃದ್ಧಿ ಏಜೆನ್ಸಿಗಳ ಸ್ಥಾಪನೆಯು ಇವುಗಳಲ್ಲಿ ಅತಿ ಮುಖ್ಯವಾಗಿದೆ.

ಸಹಕಾರಿ ಮಾರಾಟ ಸಂಸ್ಥೆಗಳ ಸಂಖ್ಯೆ, ಸದಸ್ಯತ್ವ, ಹಣಬಲಗಳು ಹೆಚ್ಚಿರುವುದಾದರೂ; ಕೃಷಿಉತ್ಪನ್ನ ಹೆಚ್ಚಳವನ್ನು ಕೃಷಿಕರಿಂದ ಸಂಗ್ರಹಿಸಿ ಮಾರಾಟ ಮಾಡುವ ಮುಖ್ಯ ಕಾರ್ಯದಲ್ಲಿ ಈ ಸಂಸ್ಥೆಗಳು ಇನ್ನೂ ಗಮನಾರ್ಹ ಯಶಸ್ಸನ್ನು ಸಾಧಿಸಿಲ್ಲ. ಕೃಷಿ ಉತ್ಪನ್ನ ಹೆಚ್ಚಳದಲ್ಲಿ ಸಹಕಾರ ಸಂಘಗಳ ಮೂಲಕ ಮಾರಾಟವಾಗುತ್ತಿರುವ ಭಾಗ ಕೇವಲ ಶೇಕಡಾ 8-19ರಷ್ಟು ಮಾತ್ರ ಎಂದು ಅಂದಾಜು ಮಾಡಲಾಗಿದೆ. ಕೃಷಿಕರ ಬೆಳೆಸುಗಳ ಮಾರಾಟಕ್ಕೆ ಶೋಷಣಾರಹಿತ ವ್ಯವಸ್ಥೆ ಏರ್ಪಾಡಾಗಲು ಈ ಮಾರಾಟ ಸಹಕಾರ ಸಂಘಗಳು ಇನ್ನೂ ಹೆಚ್ಚು ಪರಿಣಾಮಕಾರಿ ಪಾತ್ರವಹಿಸಬೇಕಾಗಿದೆ.

ಯೋಜನಾ ಯುಗದಲ್ಲಿ ಹೆಚ್ಚು ವ್ಯಾಪಕವಾಗಿ ಬೆಳೆದಿರುವ ಭಾರತದ ಗ್ರಾಮೀಣ ಸಹಕಾರವು, ಸರ್ಕಾರದ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು ರಾಜಕೀಯ ಪ್ರಭಾವಕ್ಕೆ ಒಳಗಾಗದಂತೆ ನಡೆದು ಕೊಂಡು 'ಪರಸ್ಪರ ಸಹಾಯದ ಮೂಲಕ ಸ್ವಸಹಾಯ' ಎಂಬ ಸಹಕಾರ ಧ್ಯೇಯವನ್ನು ಪಾಲಿಸಿಕೊಂಡು ಕೃಷಿ ಉದ್ಯಮದ ನವೀಕರಣಕ್ಕೂ ಇದರೊಡನೆ ಉಂಟಾಗುವ ಕೃಷಿಕರ ಜೀವನ ಮಟ್ಟ ಸುಧಾರಣೆಗೂ ನೆರವಾಗಬೇಕಾಗಿದೆ.

---

1. G. O I. Economic Survey, 1977-78, p.8.

ಕೃಷಿ ಸಂಶೋಧನಾ ಸಂಸ್ಥೆಗಳು

ಭಾರತದ ಸಾಂಪ್ರದಾಯಿಕ ಕೃಷಿ ವಿಧಾನವನ್ನು ಆಧುನಿಕಗೊಳಿಸುವ ಕಾರ್ಯಕ್ಕೆ ಸಂಶೋಧನೆ ಅವಶ್ಯಕ. ಈ ಸಂಶೋಧನಾ ಕಾರ್ಯದ ವ್ಯವಸ್ಥೆ ಮುಖ್ಯವಾಗಿ ಸರ್ಕಾರದ ಹೊಣೆಯಾಗಿದೆ. ಕೃಷಿ ಸಂಶೋಧನೆಗಾಗಿ ಯೋಜನೆಗಳಲ್ಲಿ ಪ್ರತ್ಯೇಕ ವೆಚ್ಚವನ್ನು ಕೈಗೊಳ್ಳಲಾಗಿದೆ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಮತ್ತು ಇದರ ವಿವಿಧ ಸಹಸಂಸ್ಥೆಗಳು, ಕೃಷಿ ವಿಶ್ವವಿದ್ಯಾನಿಲಯಗಳು (1978ರಲ್ಲಿ 21 ಕೃಷಿ ವಿದ್ಯಾನಿಲಯಗಳಿದ್ದವು), ಮಣ್ಣು ಸಮೀಕ್ಷಣೆ ಹಾಗೂ ಭೂ ಬಳಕೆ ಯೋಜನೆಗಾಗಿ ನಿರ್ಮಿತವಾಗಿರುವ ರಾಷ್ಟ್ರೀಯ ಬ್ಯೂರೊ, ಜೋಧಪುರದಲ್ಲಿರುವ ಕೇಂದ್ರೀಯ ಏರಿಡ್ ಜೋನ್ ಸಂಶೋಧನಾ ಸಂಸ್ಥೆ, ಹುಲ್ಲುಗಾವಲು ಮತ್ತು ಮೇವುಗಳ ಭಾರತೀಯ ಸಂಸ್ಥೆ, ಯೋಜನಾ ಆಯೋಗದ ಸಂಶೋಧನಾ ಕಾರ್ಯಕ್ರಮಗಳ ಸಮಿತಿ, ಕೃಷಿ ಅರ್ಥಶಾಸ್ತ್ರದ ಭಾರತೀಯ ಸೊಸೈಟಿ, ಕೇಂದ್ರೀಯ ಸಂಖ್ಯಾ ಶಾಸ್ತ್ರೀಯ ಸಂಸ್ಥೆ, ಭಾರತದ ರಿಸರ್ವ್‌ಬ್ಯಾಂಕ್, ಆಹಾರ ಹಾಗೂ ಕೃಷಿಸಂಸ್ಥೆ, ಫೋರ್ಡ್‌ಫೌಂಡೇಷನ್ ಮತ್ತು ಇನ್ನೂ ಅನೇಕ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಕೃಷಿ ಪರಿವರ್ತನೆಗೆ ಸಂಬಂಧಿಸಿದ ತಾಂತ್ರಿಕ, ಆರ್ಥಿಕ, ಅಂಕಿ ಅಂಶ ಹಾಗೂ ಸಾಮಾಜಿಕ ವಿಷಯಗಳನ್ನು ಕುರಿತ ಸಂಶೋಧನಾ ಕಾರ್ಯದಲ್ಲಿ ತೊಡಗಿವೆ. ಕೃಷಿ ಶಿಕ್ಷಣ ಹಾಗೂ ಸಂಶೋಧನಾ ಕಾರ್ಯಾಚರಣೆಗಳೆಲ್ಲವನ್ನೂ ಕ್ರೋಢೀಕರಿಸುವುದಕ್ಕಾಗಿ ಕೃಷಿ ಸಂಶೋಧನೆ ಹಾಗೂ ಶಿಕ್ಷಣ ಶಾಖೆಯೊಂದನ್ನು 1973ರ ಡಿಸೆಂಬರ್‌ನಲ್ಲಿ ಸರ್ಕಾರವು ಸ್ಥಾಪಿಸಿತು. ಹೀಗೆ ಕೃಷಿಗೆ ಸಂಬಂಧಿಸಿದ ಆವಿಷ್ಕಾರಗಳನ್ನೂ ಹೊಸ ಭಾವಗಳನ್ನೂ ಬೆಳೆಸಲು ವಿವಿಧ ಸಂಸ್ಥೆಗಳಿಂದ ಕೂಡಿರುವ ಸಂಸ್ಥಾ ಅಡಿಪಾಯ ರಚನೆ ವಿಕಾಸಗೊಂಡಿದೆ. ಜರುಗುತ್ತಿರುವ ಕೃಷಿ ಕ್ರಾಂತಿಗೆ ಈ ವ್ಯವಸ್ಥೆಯ ಕೊಡುಗೆ ಅರ್ಥಪೂರ್ಣವಾಗಿದೆ.

ದುರ್ಬಲ ಕೃಷಿಕರಿಗಾಗಿ ವಿಶೇಷ ಸಂಸ್ಥೆ

ಮೇಲೆ ವಿವರಿಸಿರುವ ವಿವಿಧ ಕೃಷಿ ಸಹಾಯಕ ಸಂಸ್ಥೆಗಳ ಜೊತೆಗೆ ದುರ್ಬಲ ಕೃಷಿಕರ ಹಿತಾಸಕ್ತಿಗಳನ್ನು ರಕ್ಷಿಸಲು ವಿಶೇಷ ಸಂಸ್ಥೆಗಳು ಏರ್ಪಾಡಾಗಿವೆ. ಯೋಜನಾ ಕಾರ್ಯಕ್ರಮಗಳ ಪ್ರಯೋಜನ ಬಹುಮಟ್ಟಿಗೆ ದೊಡ್ಡ ಕೃಷಿಕರಿಗೆ ಸೀಮಿತವಾಗಿದ್ದುದನ್ನು ಗಮನಿಸಿ ನಾಲ್ಕನೆಯ ಯೋಜನೆಯಿಂದೀಚೆಗೆ ಸಣ್ಣಪುಟ್ಟ ಕೃಷಿಕರ ಹಾಗೂ ಇತರ ಗ್ರಾಮೀಣ ದುರ್ಬಲ ವರ್ಗದವರ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಸಮುದ್ದೇಶದಿಂದ ವಿಶೇಷ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಒಂದೊಂದು ಪ್ರದೇಶದ

ಸಣ್ಣಪುಟ್ಟ ಕೃಷಿಕರನ್ನು ಗುರುತಿಸಿ ಅವರುಗಳಿಗೆ ಅವಶ್ಯಕವಾದ ಸಹಾಯವನ್ನು ದೊರಕಿಸಿ ಕೊಡುವ ಸಲುವಾಗಿ ಸಣ್ಣ ಕೃಷಿಕರ ಅಭಿವೃದ್ಧಿ ಏಜೆನ್ಸಿಗಳನ್ನೂ ದುರ್ಬಲ ಕೃಷಿಕರು ಹಾಗೂ ಕೃಷಿ ಕಾರ್ಮಿಕರ ಏಜೆನ್ಸಿಗಳನ್ನೂ ಸ್ಥಾಪಿಸಲಾಗಿದೆ. ಬುಡಕಟ್ಟು ಜನಾಂಗಗಳ ಹಿತಾಸಕ್ತಿಗಳನ್ನು ನೋಡಿಕೊಳ್ಳಲು ಚುನಾಯಿತ ಪ್ರದೇಶಗಳಲ್ಲಿ ಬುಡ ಕಟ್ಟು ಅಭಿವೃದ್ಧಿ ಏಜೆನ್ಸಿಗಳನ್ನು ಸ್ಥಾಪಿಸಲಾಗಿದೆ. ಈ ವಿವಿಧ ಕಾರ್ಯಕ್ರಮಗಳಿಗೆ ಸರ್ಕಾರವು ನಾಲ್ಕನೆಯ ಯೋಜನೆಯಲ್ಲಿ 112 ಕೋಟಿ ರೂಪಾಯಿಗಳನ್ನೂ, ಐದನೆ ಯೋಜನೆಯಲ್ಲಿ 987 ಕೋಟಿ ರೂಪಾಯಿಗಳನ್ನೂ ವೆಚ್ಚಮಾಡಿದೆ. ಪ್ರಾರಂಭದಲ್ಲಿ ಕೆಲವೇ ಜಿಲ್ಲೆಗಳಲ್ಲಿ ಸ್ಥಾಪಿಸಲಾದ ಮೇಲಿನ ಸಂಸ್ಥೆಗಳನ್ನು ಕ್ರಮಕ್ರಮವಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಸ್ಥಾಪಿಸಲಾಗುತ್ತಿದೆ. ಇವು ತುಂಬ ಉಪಯುಕ್ತವಾದ ಸಂಸ್ಥೆಗಳಾ ಗಿರುವುದಾದರೂ, ಕಾರ್ಯಾಚರಣೆಯಲ್ಲಿ ಕೆಲವು ದೋಷಗಳು ಕಂಡುಬಂದಿವೆ. ಉದಾ ಹರಣೆಗೆ ಸಣ್ಣಕೃಷಿಕರ ಅಭಿವೃದ್ಧಿ ಏಜೆನ್ಸಿಯು ದೊರಕಿಸುವ ಪ್ರಯೋಜನಗಳನ್ನು ಪಡೆಯಲೋಸುಗ ವಾಸ್ತವವಾಗಿಯೂ ಸಣ್ಣ ಕೃಷಿಕರಲ್ಲದವರ ದುರ್ಮಾರ್ಗಗಳಿಂದ ಸಣ್ಣ ಕೃಷಿಕರಾಗಿ ನೊಂದಾಯಿಸಿಕೊಂಡಿರುವುದು ಭಾರತದ ರಿಸರ್ವ್‌ಬ್ಯಾಂಕು ನಡೆಸಿರುವ ಒಂದು ಕ್ಷೇತ್ರದ ಅಧ್ಯಯನದಲ್ಲಿ ಕಂಡುಬಂದಿದೆ. ಅರು ಏಜೆನ್ಸಿಗಳು ತಯಾರಿಸಿದ ಸಣ್ಣ ಕೃಷಿಕರ ಪಟ್ಟಿಯಲ್ಲಿ ಅರ್ಧಕ್ಕೂ ಹೆಚ್ಚು ಸಂಖ್ಯೆ ಕೃಷಿಕರು ವಾಸ್ತವ ವಾಗಿಯೂ ಹೆಚ್ಚು ವರಮಾನವಿದ್ದ ಕೃಷಿಕರಾಗಿದ್ದಾರೆಂದು ಈ ಅಧ್ಯಯನದ ವರದಿಯು ತಿಳಿಸಿದೆ.[1] ಇಂತಹ ಪ್ರಸಂಗಗಳಿಂದಾಗಿ ಮೇಲಿನ ಕಾರ್ಯಕ್ರಮಗಳ ಪೂರ್ಣಫಲ ದುರ್ಬಲ ಕೃಷಿಕರಿಗೆ ಲಭಿಸಿದಂತಾಗಲಿಲ್ಲ. ಇವೆಲ್ಲವನ್ನೂ ಪುನರ್‌ವಿಮರ್ಶಿಸಿ ಆರನೆಯ ಯೋಜನೆಯಲ್ಲಿ ಹೊಸ ಯೋಜನೆಯೊಂದನ್ನು ಜಾರಿಗೆ ತರಲಾಯಿತು. ಇದನ್ನು ಈ ಮುಂದೆ ವಿವರಿಸಲಾಗಿದೆ:

ಸಣ್ಣ ಹಾಗೂ ದುರ್ಬಲ ಕೃಷಿಕರ ಏಳಿಗೆಗೆ ಹೊಸ ಯೋಜನೆ

ಹಿಂದೆ ವಿವರಿಸಲಾದ ಸಣ್ಣಕೃಷಿಕರ ಅಭಿವೃದ್ಧಿ ಸಂಸ್ಥೆ, ದುರ್ಬಲ ಕೃಷಿಕರ ಅಭಿವೃದ್ಧಿ ಸಂಸ್ಥೆ ಇತ್ಯಾದಿ ಕಾರ್ಯಕ್ರಮಗಳು ಸದುದ್ದೇಶದಿಂದಲೇ ರೂಪಿಸಲ್ಪಟ್ಟು ದೇಶದ ಅನೇಕ ಭಾಗಗಳಲ್ಲಿ ನಾಲ್ಕು ಮತ್ತು ಐದನೆ ಯೋಜನೆಗಳ ಅವಧಿಯಲ್ಲಿ ಜಾರಿಗೆ ತರಲ್ಪಟ್ಟವಾದರೂ ಇವುಗಳ ಪರಿಣಾಮಗಳ ಸಮೀಕ್ಷೆಯಿಂದ ಇವುಗಳ ಆಚರಣೆಯಲ್ಲಿನ ಲೋಪದೋಷಗಳು ಯೋಜನಾಕಾರರ ಗಮನಕ್ಕೆ ಬಂದು ಇವುಗಳ ಪ್ರತಿಯಾಗಿ

1. **Small Farmers Development Agencies-A Field Study, 1972-73** Reserve Bank of India, Bombay, 1975, pp. 199 and 210.

ಹೊಸ ಹಾಗೂ ಹೆಚ್ಚು ಸಮಗ್ರವಾದ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳುವುದು ಒಳ್ಳೆಯದೆಂದು ಅವರಿಗೆ ತೋರಿಬಂದಿತು. ಈ ಹಿಂದಿನ ಯೋಜನೆಗಳು ದೇಶದ ಎಲ್ಲಾ ಗ್ರಾಮಗಳನ್ನೂ ಇನ್ನೂ ಒಳಗೊಂಡಿರಲಿಲ್ಲ. ಒಂದೇ ಗುಂಪಿಗೆ ಸೇರಿದ ಕೃಷಿಕರಿಗೆ ನೆರವು ನೀಡಲು ಬೇರೆ ಬೇರೆ ಕಾರ್ಯಕ್ರಮಗಳು ಜಾರಿಯಲ್ಲಿದ್ದವು. ಈ ವಿವಿಧ ಕಾರ್ಯಕ್ರಮಗಳೊಳಗೆ ಹೊಂದಾಣಿಕೆ ಏರ್ಪಡಿಸುವುದು; ಹಣಕಾಸು ವಿಷಯಗಳ ಬಗ್ಗೆ ಲೆಕ್ಕಾಚಾರ ಹಾಕುವುದು ಕಷ್ಟವಾಗಿ ಪರಿಣಮಿಸಿತು. ಅಲ್ಲದೆ ಒಟ್ಟಿನಲ್ಲಿ ಒಂದೇ ಉದ್ದೇಶ ಹೊಂದಿದ್ದವಾದರೂ ವಿವಿಧ ಯೋಜನೆಗಳು ಹಾಕಿಕೊಂಡ ಉಪಉದ್ದೇಶಗಳೊಳಗೆ ಪರಸ್ಪರ ಹೊಂದಾಣಿಕೆ ಕಾಣಲಿಲ್ಲ. ಈ ಅನುಭವಗಳೆಲ್ಲವನ್ನೂ ಗಮನಿಸಿ ಈ ತರಹ ಅನೇಕ ಯೋಜನೆಗಳ ಬದಲಾಗಿ ಒಂದೇ ಸಮಗ್ರ ಯೋಜನೆಯನ್ನು ರೂಪಿಸಿ ಕಾರ್ಯಾಚರಣೆಗೆ ತರುವುದು ಉತ್ತಮ ಯೋಜನಾ ವಿಧಾನವಾಗುವುದೆಂದು ಪರಿಗಣಿಸಿ ಆರನೆ ಯೋಜನೆಯು 'ಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ' ವೊಂದನ್ನು ರಚಿಸಿದೆ.[1]

ದೇಶದಲ್ಲಿ ಬಡತನ ರೇಖೆಗೂ ಕೆಳಮಟ್ಟದಲ್ಲಿರುವ 350 ದಶಲಕ್ಷ ಜನರಲ್ಲಿ ಸುಮಾರು 300 ದಶಲಕ್ಷ ಜನರು ಗ್ರಾಮಗಳಲ್ಲಿರುವರೆಂದು ಅಂದಾಜು ಮಾಡಲಾಗಿದೆ.[2] ಗ್ರಾಮೀಣ ಕಾರ್ಮಿಕಬಲದ ಮೂರನೆ ಒಂದರಷ್ಟು ಆಗುವ ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲಕರ್ಮಿಗಳು, ಬೆಸ್ತರು ಇವರುಗಳೇ ಅತ್ಯಂತ ಬಡತನದಲ್ಲಿರುವ ಗ್ರಾಮೀಣ ಜನ ಭಾಗವಾಗಿದ್ದಾರೆ. ತಮ್ಮದೇ ಆದ ಯಾವ ತರಹದ ಆಸ್ತಿಯನ್ನೂ ಹೊಂದಿಲ್ಲದ ಇವರುಗಳು ಆಸ್ತಿಯನ್ನು ಹೊಂದುವಂತೆ ಮಾಡುವುದು, ಅವರಿಗೆ ಅನುಗುಣವಾದ ಕಾರ್ಯಕುಶಲತೆ ಬೆಳೆಸಿಕೊಳ್ಳಲು ಅನುಕೂಲ ಮಾಡಿಕೊಡುವುದು, ಉದ್ಯೋಗಾವಕಾಶ ಕಲ್ಪಿಸಿಕೊಡುವುದು ಹಾಗೂ ಅವರ ಆರ್ಥಿಕ ಕಾರ್ಯಗಳಿಗೆ ಅವಶ್ಯಕವಾದ ಸೇವೆಗಳನ್ನು ಒದಗಿಸುವುದು–ಇತ್ಯಾದಿಗಳ ಮೂಲಕ ಅವರ ಉತ್ಪನ್ನ ಸಾಮರ್ಥ್ಯ ಬೆಳೆಸುವಂತಹ ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡ ಇವರೆಲ್ಲರೂ ಬಡತನದ ರೇಖೆಯ ಮೇಲೆ ಏಳುವಂತೆ ಮಾಡುವುದರಿಂದ, ದೇಶದ ಸರಾಸರಿ ಆರ್ಥಿಕ ಮಟ್ಟ ಗಮನಾರ್ಹವಾಗಿ ಏರುವುದರಿಂದ ಈ ಕಾರ್ಯವು ಮುಖ್ಯವಾದ ಕೆಲಸವೆಂದು ಆರನೆಯ ಯೋಜನೆ ಹೇಳಿದೆ.

---

1. G.O.I., **Planning Commission**, Sixth Five Year Plan, 1980-85. pp. 170-172.
2. Ibid. p. 170

ಕೃಷಿ ಹಾಗೂ ಕೃಷಿ ಸಂಬಂಧಿ ಉದ್ಯಮಗಳ ಉತ್ಪನ್ನತೆ ಮತ್ತು ಉತ್ಪನ್ನ ಹೆಚ್ಚಿಸುವುದು, ಜೊತೆಗೆಯೇ ದೇಶದ ಎಲ್ಲಾ ಬ್ಲಾಕುಗಳಲ್ಲಿಯೂ ಇರುವ ಬಡವರ ಸಾಧನ ಸಂಪತ್ತನ್ನೂ ವರಮಾನವನ್ನೂ ಹೆಚ್ಚಿಸುವುದು ಸುಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಉದ್ದೇಶಗಳಾಗಿವೆ. ಬಡ ಕೃಷಿಕರು ಮತ್ತು ಕೃಷಿಕಾರ್ಮಿಕರ ಆಸ್ತಿ-ಭೂಮಿ, ಜಾನುವಾರು, ಉಪಕರಣಗಳು, ಮನೆ ಇತ್ಯಾದಿ ರೂಪಗಳ ಆಸ್ತಿ ಹೆಚ್ಚಿಸದೆ ಶಾಶ್ವತ ಅಭಿವೃದ್ಧಿಯಾವಂತಾಗುವುದಿಲ್ಲ. ಅವರು ಕೆಲಸ ಮಾಡುವ ಜಮೀನಿನ ಉತ್ಪಾದನೆ ಹೆಚ್ಚಿಸಬೇಕಾದರೆ ಅವರಿಗೆ ಅವಶ್ಯಕವಾದ ಎಲ್ಲಾ ವಿಧದ ಸಾಧನೆಗಳನ್ನೂ-ನೀರು, ಉತ್ತಮ ಬೀಜ, ರಸಗೊಬ್ಬರ, ಕ್ರಿಮಿಕೀಟನಾಶಕಗಳು ಇತ್ಯಾದಿ – ಒದಗಿಸಿಕೊಡಬೇಕು. ಹೈನುಗಾರಿಕೆ, ಅರಣ್ಯೋದ್ಯಮ, ಮೀನುಗಾರಿಕೆ, ರೇಷ್ಮೆ ವ್ಯವಸಾಯ ಇತ್ಯಾದಿಗಳ ಮೂಲಕ ಕೃಷಿ ವಲಯದ ಚಟುವಟಿಕೆಗಳನ್ನು ವೈವಿಧ ಗೊಳಿಸುವುದು ಈ ಹೊಸ ಕಾರ್ಯಕ್ರಮದ ಒಂದು ಮುಖ್ಯ ಅಂಗವಾಗಿದೆ. ಸ್ಥಳೀಯ ಸಂಪತ್ಸಾಧನೆಗಳಿಗೆ ಅನುಗುಣವಾದ ರೂಪಾಂತರ ಉದ್ಯಮಗಳನ್ನೂ ಕೈಗಾರಿಕೋದ್ಯಮಗಳನ್ನೂ ಗುರುತಿಸಿ ಇವುಗಳನ್ನು ಬೆಳೆಸಬೇಕು. ಕೃಷಿಕರು ಬೆಳೆದ ಬೆಳೆಸುಗಳು ಅವರಿಗೆ ತಕ್ಕಷ್ಟು ಲಾಭತರುವಂತೆಯೂ, ಅನುಭೋಗಿಗಳಿಗೆ ನ್ಯಾಯ ಸಮ್ಮತವಾದ ಬೆಲೆಗಳಲ್ಲಿ ಅವು ದೊರಕುವಂತೆಯೂ ಮಾಡುವಂತಹ ಉತ್ತಮ ವ್ಯವಸ್ಥೆ ಏರ್ಪಡಬೇಕು.

ಗ್ರಾಮೀಣ ಬಡಜನತೆಯ ಬಹುಭಾಗ ಭೂ ರಹಿತ ಕಾರ್ಮಿಕರಾಗಿರುವುದರಿಂದ, ಇವರುಗಳ ಪ್ರಯೋಜನಕ್ಕಾಗಿ ಭೂಮಿಯೇತರ ಆರ್ಥಿಕವಲಯದಲ್ಲಿ ಹೆಚ್ಚು ಕಾರ್ಯ ಕ್ರಮಗಳನ್ನು ರೂಪಿಸಬೇಕು. ಗ್ರಾಮೀಣ ಹಾಗೂ ಗೃಹಕೈಗಾರಿಕೆಗಳು ಮತ್ತು ವಿವಿಧ ಸೇವೆಗಳು ಈವರೆವಿಗೆ ಹೆಚ್ಚಾಗಿ ಅಭಿವೃದ್ಧಿಪಡಿಸದಿರುವ ಚಟುವಟಿಕೆಗಳಾಗಿವೆ. ಇವುಗಳ ಪ್ರಯೋಜನವನ್ನು ಪರಮಾವಧಿಯಾಗಿ ಬಳಸಿಕೊಳ್ಳುವುದು ಅವಶ್ಯಕ.

ಮೇಲೆ ಹೇಳಿರುವ ಅಂಶಗಳೆಲ್ಲವನ್ನೂ ಗಮನಿಸಿ 'ಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ' ದ (ಸಂ. ಗ್ರಾ. ಅ. ಕಾ.) ಕ್ರಿಯಾಸ್ವರೂಪವು ಒಳಗೊಳ್ಳುವ ಕೆಳಗಿನ 9 ಅಂಶಗಳನ್ನು ಆರನೇ ಯೋಜನೆಯು ವಿವರಿಸಿದೆ:

1. ಪ್ರತಿ ಜಿಲ್ಲೆಗೂ ಒಂದೊಂದು ಪಂಚವಾರ್ಷಿಕ ಕಾರ್ಯಕ್ರಮವನ್ನು ರೂಪಿಸಲಾಗುವುದು. ಸ್ಥಳೀಯ ಸ್ಥಿತಿಗತಿಗಳ, ಸಾಧನಗಳ ಪರಿಶೀಲನೆಯ ಆಧಾರದ ಮೇಲೆ ರಚಿತವಾಗಿರುವ ಜಿಲ್ಲಾ ಯೋಜನೆಯು ಜಿಲ್ಲೆಯ ಪ್ರತಿಯೊಂದು

ಬ್ಲಾಕಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನೂ ಸೂಕ್ಷ್ಮವಾಗಿ ವಿವರಿಸಬೇಕು. ವ್ಯವಸಾಯಕ್ಕೆ ಬೇಕಾಗುವ ಜಲಮೂಲದ ಪರಮಾವಧಿ ಅಭಿವೃದ್ಧಿ, ಹೈನುಗಾರಿಕೆ, ಮೀನುಗಾರಿಕೆ, ಅರಣ್ಯೋದ್ಯಮ, ಗೋಬರ್ ಅನಿಲ ಇವುಗಳ ಕಾರ್ಯಕ್ರಮಗಳು ಈ ಜಿಲ್ಲಾಯೋಜನೆಯ ಮುಖ್ಯ ಭಾಗವಾಗಿವೆ.

2. ಕೃಷಿ ವಿಸ್ತರಣಾ ಸೇವೆಗಳು ಎಲ್ಲಾ ಕೃಷಿಕರಿಗೂ ದೊರೆಯುವಂತೆ ಮಾಡುವುದು ಇಂದಿನ ಉದ್ದೇಶವಾಗಿರುವುದಾದರೂ, ಸಣ್ಣಕೃಷಿಕರಿಗೂ ದುರ್ಬಲ ಕೃಷಿಕರಿಗೂ ಈ ಸೇವೆಗಳ ಪ್ರಯೋಜನ ಲಭಿಸುತ್ತಿದೆ ಎಂಬುದನ್ನು ಖಚಿತಗೊಳಿಸಿಕೊಳ್ಳುವ ವಿಶೇಷ ಕಾರ್ಯಕ್ರಮವನ್ನು ' ಸಂ.ಗ್ರಾ.ಅ.ಕಾ. ' ವು ಒಳಗೊಳ್ಳುವುದು.

3. ಗ್ರಾಮದ ಅತ್ಯಂತ ಬಡಕುಟುಂಬಗಳನ್ನು ಗ್ರಾಮ ಸಭೆಗಳ ಸಹಾಯದ ಮೂಲಕ ಗುರುತಿಸಿ ಈ ಕುಟುಂಬಗಳ ಆರ್ಥಿಕಮಟ್ಟ ಏರಿಸಲು ವಿಶೇಷ ಸಹಾಯ ನೀಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುವುದು. ಈ ಕುಟುಂಬಗಳಲ್ಲಿ ಇರುವ ಕೆಲಸ ಮಾಡಬಲ್ಲ ಎಲ್ಲಾ ವ್ಯಕ್ತಿಗಳಿಗೂ ಹೆಂಗಸರೂ, ಸೇರಿದಂತೆ ಅವರವರಿಗೆ ಸೂಕ್ತವಾದ ಉದ್ಯೋಗ ಒದಗಿಸಿ ಅದನ್ನು ಕೈಗೊಳ್ಳಲು ಸಹಾಯ ಮಾಡುವುದೇ ಈ ವಿಶೇಷ ಕಾರ್ಯಕ್ರಮದ ಉದ್ದೇಶವಾಗಿದೆ.

4. ಮಾಧ್ಯಮಿಕ ಹಾಗೂ ಸೇವಾ ಆರ್ಥಿಕ ವಲಯಗಳಲ್ಲಿ ಪ್ರತಿಬ್ಲಾಕಿನಲ್ಲಿಯೂ ಇರಬಹುದಾದ ಅಭಿವೃದ್ಧಿ ಅವಕಾಶಗಳನ್ನೂ ಇವುಗಳಿಗೆ ಅವಶ್ಯಕವಾದ ತರಬೇತಿ ಕಾರ್ಯಕ್ರಮಗಳನ್ನೂ ಇವುಗಳ ಉತ್ಪನ್ನಗಳ ಮಾರಾಟ ವ್ಯವಸ್ಥೆಯನ್ನೂ ಪರಿಶೀಲಿಸಿ ಈ ವರದಿಯ ಆಧಾರದ ಮೇಲೆ ಬಡಕೃಷಿಕ ಕುಟುಂಬಗಳಿಗೆ ಈ ವಲಯಗಳಲ್ಲಿ ಉದ್ಯಮ ಕೈಕೊಳ್ಳಲು ಸಹಾಯ ಮಾಡಲಾಗುವುದು.

5. ಗುರುತಿಸಲಾದ ಬಡ ಕುಟುಂಬಗಳ ಹಾಗೂ ಇವರಿಗಾಗಿ ರಚಿಸಲಾಗುವ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳನ್ನು ಒಳಗೊಂಡ ಗ್ರಾಮೀಣ ಯೋಜನೆಯ ರಿಜಿಸ್ಟರು ಒಂದನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಇಟ್ಟಿರಬೇಕು. ಜಿಲ್ಲೆ, ಬ್ಲಾಕು ಹಾಗೂ ಗ್ರಾಮ ಮಟ್ಟಗಳಲ್ಲಿ ಯೋಜಿತ ಕಾರ್ಯಕ್ರಮಗಳನ್ನು ಕಾರ್ಯಗತಮಾಡಲು ಇರುವ ವ್ಯವಸ್ಥೆಯಲ್ಲಿ ಬಡವರ್ಗದವರ ಪ್ರತಿನಿಧಿಗಳು ಪಾಲುಗೊಳ್ಳುವ ಅವಕಾಶವಿರಬೇಕು.

---

1. G.OI., Sixth Five Year Plan, 1980-85, pp. 170-171.

6. ಜಿಲ್ಲೆ ಹಾಗೂ ಬ್ಲಾಕಿಗೆ ಸಂಬಂಧಿಸಿದ 'ಸಾಲಯೋಜನೆ' ಯನ್ನು ಸಿದ್ಧಪಡಿಸು ವಾಗ ಬಡವರ್ಗದವರಿಗಾಗಿ ಇರುವ ಸಾಲ ನೀಡಿಕೆ ಕಾರ್ಯಕ್ರಮವನ್ನು ನಿರ್ದಿಷ್ಟ ವಾಗಿ ಸೂಚಿಸಬೇಕು. ಅಲ್ಲದೆ, ಈ ವರ್ಗದವರ ಅವಶ್ಯಕತೆಗಳ ಪೂರೈಕೆಗೆ ಪ್ರಥಮ ಆದ್ಯತೆ ನೀಡಬೇಕು.

7. 'ಸಂ.ಗ್ರಾ.ಅ.ಕಾ.' ವನ್ನು ರೂಪಿಸಲೂ ಜಾರಿಗೆ ತರಲೂ ವಿವಿಧ ತಜ್ಞರನ್ನು ಒಳಗೊಂಡಂತೆ ಒಂದೊಂದು ಜಿಲ್ಲೆಗೂ ಒಂದೇ ಏಜನ್ಸಿ ಇರುವುದು. ಕಾರ್ಯಕ್ರಮಗಳನ್ನು ರೂಪುಗೊಳಿಸಲೂ, ಜಾರಿಗೆ ತರಲೂ ಇವುಗಳಿಗೆ ಸಾಕಷ್ಟು ಸ್ವಾತಂತ್ರ್ಯವಿರುವುದು. ಸರ್ಕಾರದ ವಿವಿಧ ಇಲಾಖೆಗಳಿಂದ ಈ ಏಜೆನ್ಸಿಗೆ ಅವಶ್ಯಕವಾದ ಬೆಂಬಲ ಸರಿಯಾಗಿ, ಸಕಾಲದಲ್ಲಿ ದೊರಕುವಂತೆ ಮಾಡುವ ಏರ್ಪಾಡುಗಳನ್ನು ಮಾಡಲಾಗುವುದು.

8. 'ಸಂ.ಗ್ರಾ.ಅ.ಕಾ.' ದ ಪರಿಣಾಮಕಾರಿ ನಿರ್ವಹಣೆಯು ಜಮೀನು ಹಾಗೂ ಕೃಷಿಕರ ನೇರ ಸಂಪರ್ಕ ಹೊಂದಿರುವ ಅಧಿಕಾರಿಗಳು ಮತ್ತು ಕಾರ್ಯಕರ್ತರ ದಕ್ಷತೆಯನ್ನು ಅವಲಂಬಿಸಿದೆ. ಈ ದೃಷ್ಟಿಯಿಂದ ಬ್ಲಾಕು ಸಿಬ್ಬಂದಿಯನ್ನು ಬಲಗೊಳಿಸಲಾಗುವುದು.

9. 'ಸಂ.ಗ್ರಾ.ಅ.ಕಾ.' ವನ್ನು ಮುಖ್ಯವಾಗಿ ಬಡತನ ನಿರ್ಮೂಲನ ಕಾರ್ಯಕ್ರಮ ವಾಗಿ ರೂಪಿಸಲಾಗಿದೆ. ಈ ಉದ್ದೇಶದ ಸಫಲತೆಗೆ ಮೇಲೆ ಹೇಳಿರುವಂತೆ ಪ್ರತಿಗ್ರಾಮದಲ್ಲೂ ಗುರುತಿಸಲಾದ ಬಡಕುಟುಂಬದ ಜನರಿಗೆ ಉತ್ಪಾದನಾ ಸಂಪತ್ತನ್ನು ಹೊಂದಲೂ, ಅವರು ಸೂಕ್ತ ಉದ್ಯಮಗಳನ್ನು ಕೈಗೊಳ್ಳಲೂ ಅವರಿಗೆ ತಾಂತ್ರಿಕ ತರಬೇತಿ ಪಡೆಯಲೂ ಅವಕಾಶ ಮಾಡುವುದರ ಜೊತೆಗೆಯೇ ಅವರಿಗೆ ಆರೋಗ್ಯ, ವಿದ್ಯಾಭ್ಯಾಸ, ವಸತಿ, ಕುಟುಂಬ ಯೋಗಕ್ಷೇಮ ಇತ್ಯಾದಿ ಸಾಮಾಜಿಕ ಸೇವೆಗಳ ಕಾರ್ಯಕ್ರಮಗಳ ಜವಾಬ್ದಾರಿ ಹೊಂದಿರುವ ವಿವಿಧ ಇಲಾಖೆಗಳಿಗೆ ಗುರುತಿಸಲಾದ ಬಡಕುಟುಂಬ ವರ್ಗಗಳ ಪಟ್ಟಿಗಳನ್ನು ಜಿಲ್ಲಾ ಏಜೆನ್ಸಿಯು ಒದಗಿಸಬೇಕು. ತಮ್ಮ ತಮ್ಮ ಇಲಾಖೆಗಳು ಕಾರ್ಯಗತ ಮಾಡುವ ಕಾರ್ಯಕ್ರಮಗಳ ಫಲಗಳು ಈ ಕುಟುಂಬಗಳಿಗೆ ಲಭಿಸುವಂತೆ ಈ ಇಲಾಖೆಗಳು ನೋಡಿಕೊಳ್ಳಬೇಕು. ಈ ಬಗ್ಗೆ ಮೇಲ್ವಿಚಾರಣೆ ಹೊಣೆ ಜಿಲ್ಲಾ ಏಜೆನ್ಸಿಗೆ ಸೇರಿದೆ.

ಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಅನುಸರಣೆಯಲ್ಲಿ ಹಂತಗಳು

ಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ಆರನೆ ಯೋಜನೆಯು ಈ ರೀತಿ ಅಂದಾಜು ಮಾಡಿದೆ. ಸರಾಸರಿ ಲೆಕ್ಕದಲ್ಲಿ ಒಂದು ಬ್ಲಾಕಿನಲ್ಲಿ ಇರುವುದು 20,000 ಕುಟುಂಬಗಳು. ಇವುಗಳಲ್ಲಿ ಸರಾಸರಿ ಸುಮಾರು 10,000-12,000 ಕುಟುಂಬಗಳು ಬಡತನ ರೇಖೆಗೂ ಕೆಳಮಟ್ಟದಲ್ಲಿ ಇರುವವು, ಇದು ಕೇವಲ ಸಮಗ್ರ ಸರಾಸರಿ ನೋಟ; ವಿವಿಧ ಪ್ರದೇಶಗಳಲ್ಲಿ ಹೀಗೆ ಬಡತನರೇಖೆಯ ಕೆಳಗೆ ಇರುವ ಕುಟುಂಬಗಳ ಸಂಖ್ಯೆಯಲ್ಲಿ ಸಹಜವಾಗಿಯೇ ವ್ಯತ್ಯಾಸವಿರುವುದು. ಹೀಗೆ ಇರುವ ಸರಾಸರಿ 10,000-12,000 ಕುಟುಂಬಗಳಲ್ಲಿ ಆರನೆ ಯೋಜನೆಯು ಅವಧಿಯಲ್ಲಿ ಸರಾಸರಿ 3,000 ಕುಟುಂಬಗಳನ್ನು ಸಂಘಟಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಒಳಪಡಿಸುವ ಗುರಿ ಇಟ್ಟುಕೊಂಡಿತು. ಹೀಗೆ ಚುನಾಯಿಸಲಾಗುವ ಈ 3,000 ಕುಟುಂಬಗಳು ಗ್ರಾಮದ ಒಟ್ಟು ಬಡಕುಟುಂಬಗಳ ಪಟ್ಟಿಯಲ್ಲಿ ಕೆಳಭಾಗದ 3,000 ಆಗಿರಬೇಕು. ಒಂದೊಂದು ಬ್ಲಾಕಿನಲ್ಲೂ ಈ 3,000 ಕುಟುಂಬಗಳ ಜನರ ಆರ್ಥಿಕ, ಸಾಮಾಜಿಕ, ಆರೋಗ್ಯ, ವಿದ್ಯಾಭ್ಯಾಸ ಮಟ್ಟಗಳನ್ನು ಏರಿಸಲು ಆರನೆ ಯೋಜನೆಯ ಅವಧಿಯಲ್ಲಿ ಪ್ರತಿ ಬ್ಲಾಕಿಗೂ ಮೊದಲ ವರ್ಷದಲ್ಲಿ ರೂ. 5 ಲಕ್ಷದಂತೆಯೂ, ಎರಡನೆ ವರ್ಷ ರೂ. 6 ಲಕ್ಷದಂತೆಯೂ ಮುಂದಿನ ಮೂರು ವರ್ಷಗಳು ವರ್ಷಕ್ಕೆ ರೂ. 8 ಲಕ್ಷದಂತೆಯೂ ಹಣ ಸಹಾಯವನ್ನು ನಿಗದಿ ಮಾಡಲಾಗಿದ್ದಿತು.

ಅಧ್ಯಾಯ 5

ನೀರಾವರಿ ಅಭಿವೃದ್ಧಿ ಯೋಜನೆ

ನೀರಾವರಿಯ ಪ್ರಾಮುಖ್ಯತೆ

ಕೃಷಿ ಉದ್ಯಮವನ್ನು ಅತ್ಯಂತ ಯಶಸ್ವಿಯಾಗಿ–ಅಂದರೆ ಹೆಕ್ಟೇರು ಒಂದರ ಇಳುವರಿಯನ್ನು ಪರಮಾವಧಿಗೊಳಿಸುವಂತೆ-ನಿರ್ವಹಿಸಬೇಕಾದರೆ ಸಕಾಲದಲ್ಲಿ ಸಾಕಷ್ಟು ನೀರನ್ನು ಭೂಮಿಗೆ ಹಾಯಿಸುವುದು ಒಂದು ಅತಿ ಮುಖ್ಯ ಅವಶ್ಯಕತೆಯಾಗಿದೆ. 'ಭಾರತದ ಕೃಷಿ, ಮಳೆಗಾಲದೊಡನೆ ಆಡುವ ಒಂದು ಜೂಜು' ಎಂಬ ನಾಣ್ಣುಡಿ ಇದೆ. 'ಕಾಲೇ ವರ್ಷತು ಪರ್ಜನ್ಯ' ಎಂದು ನಾವು ಸ್ತೋತ್ರಮಾಡುತ್ತಿರುತ್ತೇವೆ. ಆದರೆ ಮಳೆಗಾಲವನ್ನು ನೆಚ್ಚುವಂತಿಲ್ಲ. ಎಲ್ಲೆಲ್ಲಿ ನದಿ, ಕೆರೆ, ಬಾವಿಗಳಿಂದ ನೀರಾವರಿ ಸೌಕರ್ಯ ಒದಗಣೆ ಸಾಧ್ಯವೋ ಅಲ್ಲಲ್ಲಿ ಅವೆಲ್ಲವನ್ನೂ ಅಭಿವೃದ್ಧಿ ಪಡಿಸಿಕೊಂಡು ಸಾಧ್ಯವಾದಷ್ಟು ಕೃಷಿ ಭೂಮಿ ಭಾಗಕ್ಕೆ ನೀರಿನ ಬಗ್ಗೆ ಆತಂಕವಿಲ್ಲದ ಪರಿಸ್ಥಿತಿಯನ್ನು ಏರ್ಪಡಿಸಿಕೊಳ್ಳಬೇಕು. ನೀರಾವರಿಯ ಪ್ರಯೋಜನಗಳು ಹಲವಾರು. ಅದು ಮಳೆಗಾಲದ ಅನಿಶ್ಚಯತೆಯಿಂದ ಕೃಷಿಕರನ್ನು ಪಾರುಮಾಡಿ ಅದರ ಉದ್ಯಮಕ್ಕೆ ನೀರು ಸರಬರಾಯಿ ಬಗ್ಗೆ ಅವರನ್ನು ನಿರಾತಂಕವಾಗಿರುವಂತೆ ಮಾಡುತ್ತವೆ. ಸಾಂಪ್ರದಾಯಿಕ ಕೃಷಿ ವಿಧಾನ ಅನುಸರಿಸುವ ಸಂದರ್ಭದಲ್ಲಿಯೂ ಸಾಗುವಳಿಗೆ ಹಾಕುವ ಇತರ ಉತ್ಪಾದನಾಂಗಗಳ ಉತ್ಪನ್ನತೆಯನ್ನೂ ಹೆಚ್ಚಿಸುತ್ತವೆ. ನೀರಾವರಿಯಿಲ್ಲದ ಜಮೀನುಗಳ ಹೆಕ್ಟೇರು ಒಂದರ ಉತ್ಪನ್ನತೆಯೊಡನೆ ಹೋಲಿಸಿದರೆ ನೀರಾವರಿಯಿರುವ ಜಮೀನುಗಳ ಉತ್ಪನ್ನತೆ ಇದಕ್ಕೆ ಎರಡರಷ್ಟು ಅಥವಾ ಇನ್ನೂ ಹೆಚ್ಚಾಗಿ ಇರುತ್ತದೆ ಎಂದು ಯೋಜನಾ ಆಯೋಗವು ಅಂದಾಜು ಮಾಡಿದೆ.[1] ಆಧುನಿಕ ಕೃಷಿಯಲ್ಲಿ ಬಳಸಲಾಗುವ ರಾಸಾಯನಿಕ ಗೊಬ್ಬರ, ಶಕ್ತಿವಾನ್ ಬೀಜಗಳು ಇತ್ಯಾದಿ ಉತ್ಪಾದನಾ ಉಪಕರಣಗಳನ್ನು ಉಪಯೋಗಿಸಲು ತೃಪ್ತಿಕರವಾದ ನೀರಾವರಿ ಸೌಕರ್ಯ ಅತ್ಯಗತ

---

1. Planning Commission, Note on Rate of Growth during the Fourth Plan, April 1967, Quoted in Yojana, May 28, 1967.

ನೀರಾವರಿ ಇರುವ ಕಡೆಗಳಲ್ಲಿ ವರ್ಷಕ್ಕೆ 2–3 ಬೆಳೆಗಳನ್ನು ತೆಗೆಯುವ ಸಾಧ್ಯತೆ ಇರುವುದು. ನೀರಾವರಿಯ ಈ ವಿವಿಧ ಪ್ರಾಮುಖ್ಯವನ್ನು ಗಮನಿಸಿ ಭಾರತದ ಯೋಜನೆಗಳಲ್ಲಿ ನೀರಾವರಿಗೆ ವಿಶೇಷ ಸ್ಥಾನ ನೀಡಿದೆ.

ನೀರಾವರಿ ಕಾರ್ಯಕ್ರಮಗಳ ವಿಂಗಡಣೆ

ಯೋಜನೆಗಳಲ್ಲಿ ನೀರಾವರಿ ಕಾಮಗಾರಿಗಳನ್ನು ಭಾರಿ, ಮಧ್ಯಮ ಹಾಗೂ ಸಣ್ಣ ಕಾಮಗಾರಿಗಳಾಗಿ ವಿಂಗಡಿಸಲಾಗಿದೆ. 5 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟ ವೆಚ್ಚ ಒಳಗೊಳ್ಳುವ ಕಾಮಗಾರಿಗಳನ್ನು ಭಾರಿ ನೀರಾವರಿ ಕಾಮಗಾರಿಗಳೆಂದೂ, 25 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಆದರೆ 5 ಕೋಟಿಗೂ ಕಡಮೆ ವೆಚ್ಚದ ಕಾಮಗಾರಿಗಳನ್ನು ಮಧ್ಯಮ ನೀರಾವರಿಕಾಮಗಾರಿಗಳೆಂದೂ, 25 ಲಕ್ಷ ರೂಪಾಯಿಗಳ ವರೆಗೆ ತಗಲುವ ವೆಚ್ಚದ ಕಾರ್ಯಕ್ರಮಗಳನ್ನು ಸಣ್ಣ ನೀರಾವರಿ ಕಾಮಗಾರಿಗಳೆಂದೂ (ಬೆಟ್ಟಗಾಡು ಪ್ರದೇಶದಲ್ಲಿ ಈ ಮಿತಿ 30 ಲಕ್ಷ ರೂಪಾಯಿಗಳು) ಪರಿಗಣಿಸಲಾಗಿದೆ.[1] 1970ರ ಏಪ್ರಿಲ್‌ವರೆಗೆ 15 ಲಕ್ಷರೂಪಾಯಿಗಳ ವೆಚ್ಚದವರೆಗಿನ ಕಾಮಗಾರಿಗಳನ್ನು ಸಣ್ಣನೀರಾವರಿ ಕಾಮಗಾರಿಗಳೆಂದು ಹೇಳಲಾಗಿದ್ದಿತು.[2] ದೇಶದ ವಿವಿಧ ಕೃಷಿ ವಲಯಗಳಲ್ಲಿ ಈ ಮೂರು ವರ್ಗಗಳ ಕಾಮಗಾರಿಗಳಲ್ಲಿ ಯಾವ ತರಹದ ನೀರಾವರಿ ಕಾರ್ಯಕ್ಕೆ ಅವಕಾಶವಿದೆ ಎಂಬುದನ್ನು ಗುರುತಿಸಿ ಇದಕ್ಕೆ ಅನುಗುಣವಾಗಿ ನೀರಾವರಿ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಮೊದಲನೆ ಯೋಜನೆಯಲ್ಲಿ ಸ್ಪಷ್ಟಪಡಿಸಿರುವಂತೆ[3] ಭಾರಿ, ಮಧ್ಯಮ ಹಾಗೂ ಸಣ್ಣ ನೀರಾವರಿ ಕಾರ್ಯಕ್ರಮಗಳು ಪರಸ್ಪರ ಪೂರಕವಾಗಿದ್ದು ಒಟ್ಟಿನಲ್ಲಿ ಆಯಾ ಪ್ರದೇಶಗಳ ನೀರಾವರಿ ಅವಶ್ಯಕತೆಗಳನ್ನು ಪೂರೈಸುವುವೆಂದು ತಿಳಿಯಬಹುದು. 1978ರ ಏಪ್ರಿಲ್‌ನಿಂದ ವೆಚ್ಚ ಆಧಾರಿತ ವಿಂಗಡಣೆಗೆ ಬದಲಾಗಿ ಒಂದು ನೀರಾವರಿ ಪ್ರಯೋಜನ ಎಷ್ಟು ಹೆಕ್ಟೇರುಗಳಿಗೆ ನೀರಾವರಿ ಒದಗಿಸುವುದು ಎಂಬುದರ ಆಧಾರದ ಮೇಲೆ ಹೊಸ ವಿಂಗಡಣೆಯನ್ನು ಮಾಡಲಾಗಿದೆ. ಇದರಂತೆ 10,000 ಹೆಕ್ಟೇರುಗಳಿಗೂ ಹೆಚ್ಚು ಭೂಮಿಗೆ ನೀರಾವರಿ ಒದಗಿಸುವ ಪ್ರಯೋಜನೆಯನ್ನು ಭಾರಿ ನೀರಾವರಿ ಪ್ರಯೋಜನೆ ಎಂದು, 2,000

1. G. O. I., **Draft Fifth Five Year Plan**, Vol. II. p. 105.
2. G. O. I., **Fourth Five Year Plan**, p. 253.
3. G. O. I., **First Five Year Plan**, p. 364

ಹೆಕ್ಟೇರುಗಳಿಂದ 10,000 ಹೆಕ್ಟೇರುಗಳವರೆಗೆ ನೀರಾವರಿ ಒದಗಿಸುವ ಪ್ರಾಯೋಜನೆಯನ್ನು ಮಧ್ಯಮ ಪ್ರಾಯೋಜನೆ ಎಂದು 2,000 ಹೆಕ್ಟೇರುಗಳಿಗೂ ಕಡಮೆ ಭೂಮಿಗೆ ನೀರಾವರಿ ಒದಗಿಸುವುದನ್ನು ಸಣ್ಣ ಪ್ರಾಯೋಜನೆಗಳೆಂದು ಪರಿಗಣಿಸಲಾಗಿದೆ.[1]

ಸರ್ಕಾರಿ ನಾಲೆಗಳು, ಖಾಸಗಿ ನಾಲೆಗಳು, ಕೆರೆಗಳು, ಬಾವಿಗಳು ಮತ್ತು ಇತರೆ ಎಂಬ ಇನ್ನೊಂದು ವಿಂಗಡಣೆಯನ್ನೂ ಮಾಡಲಾಗಿದೆ. ನೀರಾವರಿ ಯೋಜನೆಗಳಲ್ಲಿ ಈ ವಿಂಗಡಣೆಯ ಪ್ರಕಾರ ಸಂಗ್ರಹಿಸುತ್ತಿರುವ ಅಂಕಿ ಅಂಶಗಳೂ ತಮ್ಮದೇ ಆದ ಉಪಯೋಗ ಹೊಂದಿವೆ.

ನೀರಾವರಿ ಯೋಜನೆಗೆ ನಿರ್ದೇಶಕ ಸೂತ್ರಗಳು

ನೀರಾವರಿ ಕಾಮಗಾರಿಗಳಿಗೆ ಹಾಗೂ ವಿದ್ಯುಚ್ಛಕ್ತಿ ಪ್ರಾಯೋಜನೆಗಳಿಗೆ ಆದ್ಯತೆ ನೀಡುವಾಗ ಮುಂದೆ ಹೇಳಿರುವ ಸೂತ್ರಗಳನ್ನು ಗಮನಿಸಬೇಕೆಂದು ಪ್ರಥಮ ಯೋಜನೆಯಲ್ಲಿಯೇ ನಮೂದಿಸಲಾಯಿತು.[2]

(1) ನದಿಗಳ ನೀರನ್ನು ಉಪಯೋಗಿಸುವ ಪ್ರಾಯೋಜನೆಗಳಲ್ಲಿ ಯಾವುದು ದೇಶದ ಉತ್ಪಾದನೆ ಹೆಚ್ಚಿಸಲು ಸಹಾಯಕವಾಗುವುದೋ ಅದಕ್ಕೆ ಇತರ ಉಪಯೋಗಗಳಿಗಿಂತ ಹೆಚ್ಚು ಆದ್ಯತೆ ನೀಡಬೇಕು. (2) ಯಾವ ಪ್ರಾಯೋಜನೆಗಳು ಶೀಘ್ರವಾಗಿ ಪ್ರತಿಫಲನೀಡುವುವೋ ಮತ್ತು ಜನಾಂಗಕ್ಕೆ ಒಟ್ಟು ಹೆಚ್ಚು ಪ್ರಯೋಜನ ನೀಡುವುವೋ ಅಂತಹ ಪ್ರಾಯೋಜನೆಗಳಿಗೆ ಆದ್ಯತೆ ಸಲ್ಲಬೇಕು. (3) ಪ್ರಾದೇಶಿಕ ಆಹಾರ ಬೇಡಿಕೆಯನ್ನೂ, ಹಿಂದುಳಿದ ಪ್ರದೇಶಗಳ ಅವಶ್ಯಕತೆಗಳನ್ನೂ ಗಮನಿಸಬೇಕು.

ಒಟ್ಟಿನಲ್ಲಿ 'ಸಾಮಾಜಿಕ ವೆಚ್ಚ–ಪ್ರತಿಫಲ' ನಿಯಮದ ಅನುಸರಣೆಯನ್ನು ಮೇಲಿನ ಸೂತ್ರಗಳು ಸೂಚಿಸುವುವು. ತಾತ್ವಿಕವಾಗಿ ಒಪ್ಪತಕ್ಕ ಈ ಧೋರಣೆಯನ್ನು ಭಾರತದ ನೀರಾವರಿ ಯೋಜನೆಗಳನ್ನು ರೂಪಿಸುವಾಗಲೂ, ಅನುಷ್ಠಾನಕ್ಕೆ ತರುವಾಗಲೂ ಪಾಲಿಸಲು ಅವಶ್ಯಕವಾದ ಅನೇಕ ವಿಧದ ಅಧ್ಯಯನಗಳನ್ನು ಕ್ರಮವಾಗಿ, ಮೊದಲಿನಿಂದಲೇ ನಡೆಸಿಲ್ಲವಾದುದರಿಂದ ಕಾರ್ಯತಃ ನೀರಾವರಿ ಯೋಜನೆಗಳು ಮೇಲಿನ ನಿಯಮಕ್ಕೆ ಅನುಸಾರವಾಗಿ ಮಾಡಲ್ಪಟ್ಟಿವೆ ಎಂದು ಹೇಳಲಾಗುವುದಿಲ್ಲ.

---

1. G. O. I., Sixth Five Year p. 147
2. G. O. I., First Five Year Plan, pp. 365-366.

ನೀರಾವರಿ ವಿಸ್ತೀರ್ಣದ ಅಂತಿಮ ಮಿತಿ

ನದಿ, ಕೆರೆ, ಬಾವಿ ಇತ್ಯಾದಿ ಎಲ್ಲಾ ಮೂಲಗಳಿಂದಲೂ ಪಡೆಯಬಹುದಾದ ನೀರಾವರಿ ಸೌಕರ್ಯದ ಅಂತಿಮ ಮಿತಿಯನ್ನು 107ದಶಲಕ್ಷ ಹೆಕ್ಟೇರುಗಳೆಂದು ಯೋಜನಾ ಆಯೋಗವು ಅಂದಾಜು ಮಾಡಿದೆ.[1] ಇದರ ವಿವರಗಳು ಹೀಗಿವೆ:

ಕೋಷ್ಟಕ 4. ನೀರಾವರಿ ಸೌಕರ್ಯದ ವಿವರ

ಬಾಬು	ಅಂತಿಮ ಮಿತಿ (ದಶಲಕ್ಷ ಹೆಕ್ಟೇರುಗಳಲ್ಲಿ)
1. ಮೇಲೆ ಕಾಣುವ ನೀರು	
(ಅ) ಭಾರಿ ಹಾಗೂ ಮಧ್ಯಮ ನೀರಾವರಿ ಕಾಮಗಾರಿಗಳು	57
(ಆ) ಸಣ್ಣ ನೀರಾವರಿ ಕಾಮಗಾರಿಗಳು	15
2. ಭೂಮಿಯೊಳಗೆ ಹುದುಗಿರುವ ನೀರು	35
ಒಟ್ಟು	107

ಮೂಲ : G. O. I., **Draft Fifth Five Year Plan**, Vol.II,p.106.

ಈಗಿನ ಅಂದಾಜು ಪ್ರಕಾರ ದೇಶದಲ್ಲಿ ಒಟ್ಟು ಸಾಗುವಳಿ ಜಮೀನಿನ ವಿಸ್ತೀರ್ಣ 175 ದಶಲಕ್ಷ ಹೆಕ್ಟೇರುಗಳೆಂಬುದನ್ನು ಗಮನಿಸಿದರೆ ಮೇಲೆ ತೋರಿಸಿರುವಂತೆ ಎಲ್ಲಾ ಮೂಲಗಳಿಂದಲೂ ನೀರಾವರಿ ಸೌಕರ್ಯವನ್ನು ರೂಢಿಸಿಕೊಂಡರೆ ಇನ್ನೂ ಸುಮಾರು 68ದಶಲಕ್ಷ ಹೆಕ್ಟೇರುಗಳಿಗೆ ನೀರಾವರಿ ಸೌಕರ್ಯ ಲಭ್ಯವಿಲ್ಲ. ಈ ಜಮೀನುಗಳು ಮಳೆಯನ್ನೇ ಆಶ್ರಯಿಸಿಕೊಂಡಿರಬೇಕಾಗುವುದು. ಯೋಜನೆಗಳಲ್ಲಿ ಈ ಭೂಭಾಗದ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಪ್ರತ್ಯೇಕ ಉಪಾಯಗಳನ್ನು ಅನುಸರಿಸಲಾಗಿದೆ.

1. G. O. I., **First Five Year Plan**, p. 364.

ಅಂತರರಾಜ್ಯ ನದಿಗಳ ನೀರಾವರಿ ಯೋಜನೆ

ಅನೇಕ ನದಿಗಳು ಅಂತರರರಾಜ್ಯ ನದಿಗಳಾಗಿವೆ. ಆದುದರಿಂದ ಇವುಗಳಿಗೆ ಸಂಬಂಧಿಸಿದ ನೀರಾವರಿ ಪ್ರಾಯೋಜನೆಗಳನ್ನು ರೂಪಿಸುವುದರಲ್ಲಿ ವಿಶೇಷ ಸಮಸ್ಯೆಗಳು ಉದ್ಭವಿಸಿವೆ. 2–3 ರಾಜ್ಯಗಳೊಳಗೆ ನೀರಿನ ಹಂಚಿಕೆ ಬಗ್ಗೆ ವಿವಾದಗಳೂ ಎದ್ದಿವೆ. ಇಂತಹ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಬೆಂಬಲದೊಡನೆ ಸಂಬಂಧಪಟ್ಟ ರಾಜ ಸರ್ಕಾರಗಳು ಸಂಧಾನ ನಡೆಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಂಪ್ರದಾಯ ಬೆಳೆದು ಬಂದಿದೆ. ಕೆಲವು ವಿವಾದಗಳು ಹೀಗೆ ಯಶಸ್ವಿಯಾಗಿ ಬಗೆಹರಿಸಲ್ಪಟ್ಟಿವೆ. ಸಂಧಾನಗಳ ಮೂಲಕ ಬಗೆಹರಿಯದ ವಿವಾದಗಳ ತೀರ್ಮಾನಕ್ಕಾಗಿ 1926ರ ಅಂತರರಾಜ್ಯ ಜಲವಿವಾದ ಮಸೂದೆಯ ಪ್ರಕಾರ ಸ್ಥಾಪಿಸಲಾದ ಜಲವಿವಾದ ಟ್ರಿಬ್ಯುನಲ್‌ಗೆ ಒಪ್ಪಿಸಲಾಗುವುದು. ಕೃಷ್ಣಾ, ನರ್ಮದ ಮತ್ತು ಗೋದಾವರಿ ನದಿಗಳಿಗೆ ಸಂಬಂಧಪಟ್ಟ ವಿವಾದಗಳು ಹೀಗೆ ಟ್ರಿಬುನಲ್‌ಗಳ ಮೂಲಕ ಇತ್ಯರ್ಥವಾಗಿವೆ. ಕಾವೇರಿ ಜಲ ಸಂಪತ್ತಿನ ಉಪಯೋಗದ ಬಗ್ಗೆ ಇರುವ ವಿವಾದ ನಿರ್ಣಯಕ್ಕಾಗಿ ಕಾವೇರಿ ಕಣಿವೆ ಅಥಾರಿಟಿ ಎಂಬ ಅಂತರರಾಜ್ಯ ಸಂಸ್ಥೆಯ ಸ್ಥಾಪನೆಯ ಸಲಹೆ ಮಾಡಲಾಗಿದೆ. ಅಂತರ ರಾಜ್ಯ ನದಿಗಳ ಉಪಯೋಗದ ಬಗ್ಗೆ ಹೀಗೆ ವಿಶೇಷ ಏರ್ಪಾಡುಗಳನ್ನು ಮಾಡಲಾಗಿದೆ. ಈ ಏರ್ಪಾಡುಗಳು ಇದ್ದಾಗ್ಯೂ ಅಂತರ ರಾಜ್ಯ ವಿವಾದಗಳು ಒಟ್ಟಿನಲ್ಲಿ ನೀರಾವರಿ ಕಾರ್ಯಕ್ರಮಗಳ ಶೀಘ್ರ ಅನುಷ್ಠಾನಕ್ಕೆ ಅಡ್ಡಿಯಾಗಿವೆ ಎಂದು ಹೇಳಬಹುದು. ಅಂತರ ರಾಜ್ಯ ಪ್ರದೇಶಗಳ ಅಭಿವೃದ್ಧಿ ಸಮಸ್ಯೆಗಳ ಪರಿಹಾರಕ್ಕಾಗಿ 'ಕಮ್ಯಾಂಡ್ ಏರಿಯಾ' ಅಥಾರಿಟಿಗಳನ್ನು ಸೃಜಿಸಲಾಗಿದೆ.

ಜಲಸಂಪತ್ತಿನ ಬಗ್ಗೆ ವಿವಾದಗಳು ಒಂದೇ ರಾಜ್ಯದ ವಿವಿಧ ಪ್ರದೇಶಗಳೊಳಗೂ ಇರುವುದು ಗಮನಾರ್ಹ ವಿಷಯವಾಗಿದೆ. ಉದಾಹರಣೆಗೆ: ಕರ್ನಾಟಕ ರಾಜ್ಯದಲ್ಲಿ ವರುಣನಾಲೆ ಯೋಜನೆ ಬಗ್ಗೆ ಮಂಡ್ಯ ಹಾಗೂ ಮೈಸೂರು ತಾಲ್ಲೂಕುಗಳ ಜನರೊಳಗೆ ಭಿನ್ನಾಭಿಪ್ರಾಯ ಉಂಟಾಗಿ ನೀರಾವರಿ ಕಾಮಗಾರಿಗಳೇ ಬಹುಕಾಲದ ವರೆಗೆ ಮುಂದುವರೆಯದಾಯಿತು. ಇಂತಹ ವಿವಾದಗಳು ಅನೇಕ ವೇಳೆ ರಾಜಕೀಯ ಕಾರಣಗಳಿಂದಲೂ ಹುಟ್ಟಿವೆ. ಯೋಜನೆಯ ಸುಗಮ ಸಾಗಣೆ ದೃಷ್ಟಿಯಿಂದ ಇಂತಹ ವಿವಾದಗಳನ್ನು ತಪ್ಪಿಸಬೇಕಾದುದು ಅವಶ್ಯಕ.

ನೀರಾವರಿ ಹಾಗೂ ಪ್ರವಾಹ ಹತೋಟಿಗೆ ಯೋಜನಾ ವೆಚ್ಚ

ನೀರಾವರಿ ಅಭಿವೃದ್ಧಿಯು ರಾಜ್ಯಕ್ಕೆ ಸೇರಿದ ವಿಷಯವಾದುದರಿಂದ ಇದರ ಬಗ್ಗೆ ತಗಲುವ ವೆಚ್ಚವು ರಾಜ್ಯಗಳ ಯೋಜನೆಗಳಲ್ಲಿ ಸೇರುತ್ತದೆ. ಕೇಂದ್ರವು ಅನೇಕ ಪ್ರಾಯೋಜನೆ ಸಹಾಯಧನ ನೀಡುವುದರಿಂದ ಈ ನೀರಾವರಿ ವೆಚ್ಚ ವಿತರಣೆಯ ಮೇಲೆ ಕೇಂದ್ರವು ಸ್ವಲ್ಪಮಟ್ಟಿಗೆ ಪ್ರಭಾವ ಹೊಂದಿದೆ. ನೀರಾವರಿ ಹಾಗೂ ಪ್ರವಾಹ ಹತೋಟಿಗೆ ವಿವಿಧ ಯೋಜನೆಗಳಲ್ಲಿ ಮಾಡಲಾದ ವೆಚ್ಚ ಹಾಗೂ ಇವರಿಂದ ಸೃಜಿತವಾದ ನೀರಾವರಿ ಸೌಕರ್ಯದ ಅಂಕಿ ಅಂಶಗಳನ್ನು ಕೋಷ್ಟಕ 5 ರಲ್ಲಿ ಕಾಣಬಹುದು.

ಕೋಷ್ಟಕ 5. ವಿವಿಧ ನೀರಾವರಿ ಹಾಗೂ ಪ್ರವಾಹ ಹತೋಟಿ ಯೋಜನೆಗಳ ವಿವರ

ಯೋಜನಾ ಅವಧಿ	ಸರ್ಕಾರಿ ವಲಯದ ಒಟ್ಟು ಯೋಜಿತ ವೆಚ್ಚ (ಕೋಟಿ ರೂ.ಗಳು)	ನೀರಾವರಿ ಹಾಗೂ ಪ್ರವಾಹ ಹತೋಟಿ ವೆಚ್ಚ (ಕೋಟಿ ರೂ. ಗಳು)	2ರಲ್ಲಿ 3ರ ಶೇಕಡಾ ಭಾಗ	ದೊರೆತ ನೀರಾವರಿ ಸೌಕರ್ಯದ ಹೆಚ್ಚುವರಿ (ದಶಲಕ್ಷ ಹೆಕ್ಟೇರುಗಳಲ್ಲಿ)
ಯೋಜನೆಗೆ ಮುಂಚೆ	—	—	—	9.7
ಮೊದಲನೆ ಯೋಜನೆ	1,960	434	22.2	2.5
ಎರಡನೆ ಯೋಜನೆ	4,672	430	9.2	2.1
ಮೂರನೆ ಯೋಜನೆ	8,577	665	7.8	2.3
ಮೂರು ವಾರ್ಷಿಕ ಯೋಜನೆಗಳು (1966–69)	6,604	471	7.1	1.5
ನಾಲ್ಕನೆ ಯೋಜನೆ	15,912	1,354	8.6	2.5
ಐದನೆ ಯೋಜನೆ	39,426	3,876	8.8	13.1
ಒಟ್ಟು 1951-52 ರಿಂದ 1978-79	77,151	7,230	9.3	
ಆರನೆ ಯೋಜನೆ	97,500	10,981	10.0	

ಮೂಲ : G.O.I. Economic Survey, 1975-76 1976-77 1981-82 and 1984-85.

1951–52ರಿಂದ 1978–79ರ ಅವಧಿಯಲ್ಲಿ ಸರ್ಕಾರವು ಕೈಗೊಂಡ, 77,151 ಕೋಟಿ ರೂಪಾಯಿಗಳ ಒಟ್ಟು ಯೋಜನಾ ವೆಚ್ಚದಲ್ಲಿ ನೀರಾವರಿ ಹಾಗೂ ಪ್ರವಾಹ ಹತೋಟಿ ಕಾರ್ಯಕ್ರಮಗಳಿಗೆ ಮಾಡಿದ ವೆಚ್ಚ 7230 ಕೋಟಿ ರೂಪಾಯಿಗಳು. ಅಂದರೆ ಒಟ್ಟು ವೆಚ್ಚದ ಶೇಕಡಾ 9.3 ಆಗಿದ್ದಿತೆಂಬುದನ್ನು ಮೇಲಿನ ಕೋಷ್ಟಕವು ತೋರಿಸುತ್ತದೆ. ಈ ಮುಖ್ಯ ಕೃಷಿ ಅಭಿವೃದ್ಧಿ ಸಹಾಯಕ ಕಾರ್ಯಕ್ರಮಗಳಿಗೆ ಮೊದಲನ ಯೋಜನೆಯಲ್ಲಿ ಒಟ್ಟು ವೆಚ್ಚದ ಶೇಕಡಾ 22ರಷ್ಟನ್ನು ವೆಚ್ಚ ಮಾಡಿ ತರುವಾಯ ಕೈಗೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಶೇಕಡಾ ಭಾಗವನ್ನು ಕೇವಲ 8–9ಕ್ಕೆ ಇಳಿಸಿದುದು ಆಶ್ಚರ್ಯಕರವಾಗಿದೆ. ವೆಚ್ಚಮಾಡಲಾದ ಮೊತ್ತವನ್ನು ಪರಿಗಣಿಸಿದರೆ ಐದನೆಯ ಹಾಗೂ ಆರನೆಯ ಯೋಜನೆಗಳಲ್ಲಿ ಗಮನಾರ್ಹ ಹೆಚ್ಚುವರಿ ಮಾಡಲಾಗಿದೆ. ಐದನೆಯ ಯೋಜನೆಯಲ್ಲಿ ಮಾಡಲಾದ 3876ಕೋಟಿ ರೂಪಾಯಿಗಳ ವೆಚ್ಚ ಹಿಂದಿನ ಎಲ್ಲಾ ಯೋಜನೆಗಳ ಒಟ್ಟು ಮೊತ್ತವಾದ 3354ಕೋಟಿ ರೂಪಾಯಿಗಳಿಗೂ ಹೆಚ್ಚಾಗಿದೆ. ಹೀಗೆಯೇ ಆರನೆಯ ಯೋಜನೆಯಲ್ಲಿ ನೀರಾವರಿ ಹಾಗೂ ಪ್ರವಾಹ ಹತೋಟಿಗೆ ನಿಗದಿಮಾಡಲಾಗಿರುವ 9493ಕೋಟಿ ರೂಪಾಯಿಗಳ ವೆಚ್ಚವು ಐದನೆಯ ಯೋಜನೆಯ ವೆಚ್ಚದ ಎರಡರಷ್ಟಕ್ಕೆ ಹೆಚ್ಚಾಗಿದೆ. ಹೀಗೆ ಹೆಚ್ಚು ಹಣವನ್ನು ಇತ್ತೀಚಿನ ಯೋಜನೆಗಳಲ್ಲಿ ಒದಗಿಸಿರುವುದಾದರೂ ತೀವ್ರ ಬೆಲೆ ಏರಿಕೆಯನ್ನು ಗಣನೆಗೆ ತೆಗೆದುಕೊಂಡರೆ ಈ ಹೆಚ್ಚುವರಿಯು ಅಷ್ಟು ಗಮನಾರ್ಹವಾಗುವುದಿಲ್ಲವೆಂದು ಹೇಳಬಹುದು. ವಾಸ್ತವ ಹೆಚ್ಚುವರಿ ಎಷ್ಟು ಎಂಬುದನ್ನು ತಿಳಿಯಲು ಏಕರೀತಿಯ ಬೆಲೆಗಳ ಆಧಾರದ ಮೇಲೆ ಗಣಿಸಿದ ಅಂಕಿ ಅಂಶಗಳನ್ನು ಉಪಯೋಗಿಸಬೇಕಾಗುವುದು. ಇದು ಲಭ್ಯವಿಲ್ಲ. ಎರಡನೆಯೋಜನೆಯಿಂದ ಮೂರನೆ ಯೋಜನೆಯಲ್ಲಿ ಮಾಡಲಾದ ಹೆಚ್ಚುವರಿಯನ್ನು ಅಳೆಯಲು ಸ್ಟ್ರೀಟನ್ ಮತ್ತು ಲಿಪ್ಟನ್ ಅವರು ಇಂತಹ ಏಕರೀತಿಯ ಬೆಲೆಗಳ ಆಧಾರದ ಮೇಲೆ ಗಣಿಸಿರುತ್ತಾರೆ. ಇದರ ಪ್ರಕಾರ ನೀರಾವರಿ ಅಭಿವೃದ್ಧಿಗೆ ಎರಡನೆಯೋಜನೆಯಿಂದ ಮೂರನೆಯ ಯೋಜನೆಯಲ್ಲಿ ಕೈಗೊಳ್ಳಲಾಗಿರುವ 232ಕೋಟಿ ರೂಪಾಯಿಗಳ ಹೆಚ್ಚುವರಿ ವೆಚ್ಚವು ವಾಸ್ತವವಾಗಿ ಅಂದರೆ ಬೆಲೆಗಳ ಹೆಚ್ಚುವರಿಯನ್ನು ಪರಿಗಣಿಸಿದರೆ, ಕೇವಲ 9 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಮಾತ್ರ ಆಗಿದ್ದಿತು.[1] ಅಂದಮೇಲೆ, ಕೇವಲ ಹಣಗತಿವೆಚ್ಚದ ಅಂಕಿ ಅಂಶಗಳು ಅಭಿವೃದ್ಧಿ ವೆಚ್ಚ ಹೆಚ್ಚುವ ಬಗ್ಗೆ ವಸ್ತುಸ್ಥಿತಿಯನ್ನು ಸರಿಯಾಗಿ ತೋರಿಸಲಾರವು ಎಂದು ತಿಳಿಯಬೇಕು. ನೀರಾವರಿ ಅಭಿವೃದ್ಧಿಗೆ ಕೋಷ್ಟಕ 5ರಲ್ಲಿ ತೋರಿಸಿರುವ ಪ್ರಮಾಣದ ವೆಚ್ಚವು ಸಾಕೇ ಎಂದು ಮುಖ್ಯ ಪ್ರಶ್ನೆ. ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯಗಳ ಪರಿಶೀಲನೆಯನ್ನು ಈ ಮುಂದೆ ಮಾಡಲಾಗುವುದು.

---

1. Paul Streeten and Michael Lipton, **The Crisis of Indian Planning**, p.391.

ನೀರಾವರಿ ಪ್ರಗತಿ

ಯೋಜನೆಗಳಲ್ಲಿ ನೀರಾವರಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೇಲೆ ಹೇಳಿದಂತೆ 1951–52 ರಿಂದ 1978-79 ರ ಅವಧಿಯಲ್ಲಿ ಮಾಡಲಾದ 7230 ಕೋಟಿ ರೂಪಾಯಿಗಳ ವೆಚ್ಚದ ಫಲವಾಗಿ ಎಷ್ಟು ವಿಸ್ತೀರ್ಣ ಹೆಚ್ಚು ಭೂಮಿಗೆ ನೀರಾವರಿ ಸೌಕರ್ಯ ಒದಗಿದೆ ಎಂಬುದನ್ನು ಕೋಷ್ಟಕ 6 ತೋರಿಸುವುದು.

ಕೋಷ್ಟಕ 6. ನೀರಾವರಿ ಯೋಜನೆಗಳ ವೆಚ್ಚದ ಹಾಗೂ ಸೌಕರ್ಯಗಳ ವಿವರ

ವರ್ಷ	ಸಾಗುವಳಿಯಾದ ಜಮೀನಿನ ಒಟ್ಟು ವಿಸ್ತೀರ್ಣ (ದಶಲಕ್ಷ ಹೆಕ್ಟೇರುಗಳಲ್ಲಿ)	ನೀರಾವರಿ ಇದ್ದ ಜಮೀನಿನ ವಿಸ್ತೀರ್ಣ (ದಶಲಕ್ಷ ಹೆಕ್ಟೇರುಗಳಲ್ಲಿ)	2ರಲ್ಲಿ 3ರ ಶೇಕಡಾ ಭಾಗ
1950–51	131·9	22·6	17·0
1955–56	147·3	25·6	17·4
1960-61	152·0	28·0	18·4
1965–66	155·3	30·9	19·9
1970–71	167·4	38·5	23·0
1977–78	170·0	50·0	29·4
1979–80	–	52·2	–
1980–81	–	54·1	–
1983–84	–	60·5	–

ಮೂಲ : G.O.I., Indian Agriculture in Brief, 14th Edition pp. 30–31

G.O.I., Dept. of Irrigation. Report 1976-77 p.1.

G.O.I., Draft Fifth Five Year Plan, Vol. II, p.7 & p. 105.

G.O.I., Economic Survey, 1977-78, p.6, 1981-82 p.7 & 1984-85 p.11

ನೀರಾವರಿ ಸಹಾಯದಿಂದ ಸಾಗುವಳಿಯಾಗುತ್ತಿರುವ ಜಮೀನಿನ ವಿಸ್ತೀರ್ಣ ಮೂರು ದಶಕಗಳ ಯೋಜನೆಯ ಫಲವಾಗಿ 22.6 ದಶಲಕ್ಷ ಹೆಕ್ಟೇರುಗಳಿಂದ 55.02 ದಶಲಕ್ಷ ಹೆಕ್ಟೇರುಗಳಿಗೆ ಹೆಚ್ಚಿರುವುದನ್ನು ಕೋಷ್ಟಕ 6 ತೋರಿಸುವುದು. ಇದೇ ಅವಧಿಯಲ್ಲಿ ಸಾಗುವಳಿಗೆ ತಂದ ಜಮೀನಿನ ವಿಸ್ತೀರ್ಣವೂ ಹೆಚ್ಚಿರುವುದರಿಂದ ಸಾಗುವಳಿಯಾದ ಭೂ ವಿಸ್ತೀರ್ಣದ ಶೇಕಡಾ ಭಾಗವಾಗಿ ನೀರಾವರಿ ಜಮೀನಿನ ಭಾಗ ಎಷ್ಟಿದೆ ಎಂಬುದು ಪ್ರಗತಿಯನ್ನು ಸೂಚಿಸುವ ಅಂಶವಾಗಿ ಪರಿಗಣಿಸಬಹುದು. ಈ ದೃಷ್ಟಿಯಿಂದ ನೋಡಿದರೆ 1950–51ರಲ್ಲಿ ಶೇಕಡಾ 17 ರಷ್ಟು ಭೂಮಿಗೆ ನೀರಾವರಿ ಇದ್ದರೆ ನೀರಾವರಿಯಿದ್ದ ಈ ಭೂಭಾಗ 1965–66ರಲ್ಲಿ ಶೇಕಡಾ 19.9ರಷ್ಟು, 1977–78ರಲ್ಲಿ ಶೇಕಡಾ 29.4ರಷ್ಟು ಇದ್ದಿತು. ಇದು ನೀರಾವರಿ ಅಭಿವೃದ್ಧಿಯ ಪ್ರಗತಿಯನ್ನು ಸೂಚಿಸುವುದು. ಆದರೆ ಹಿಂದೆ ಹೇಳಿದಂತೆ ದೇಶದಲ್ಲಿ 107 ದಶಲಕ್ಷ ಹೆಕ್ಟೇರುಗಳಷ್ಟು ಜಮೀನಿಗೆ ನೀರಾವರಿ ಒದಗಿಸುವ ಸಾಧ್ಯತೆ ಇರುವುದನ್ನು ಗಮನಿಸಿದರೆ ಈ ಮೂರು ದಶಕಗಳ ನೀರಾವರಿ ಅಭಿವೃದ್ಧಿಯನ್ನು ತೃಪ್ತಿಕರವೆಂದು ಹೇಳಲಾಗುವುದಿಲ್ಲ.

ನೀರಾವರಿಯ ವಿವಿಧ ಮೂಲಗಳ ಬೆಳವಣಿಗೆ

ನೀರಾವರಿ ಯೋಜನೆಯು ಆಯಾ ಪ್ರದೇಶದ ಸಾಧ್ಯತೆಗಳ ಪರಿಶೀಲನೆಯ ಆಧಾರದ ಮೇಲೆ ವಿವಿಧ ಜಲಮೂಲಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದೆ. ಯೋಜಿತ ಪ್ರಯತ್ನದ ಫಲವಾಗಿ ವಿವಿಧ ಮೂಲಗಳಿಂದ ನೀರಾವರಿ ಪಡೆಯುತ್ತಿರುವ ಜಮೀನಿನ ವಿಸ್ತೀರ್ಣ ಹೇಗೆ ಬದಲಾಯಿಸುತ್ತಾ ಬಂದಿದೆ ಎಂಬುದನ್ನು ಕೋಷ್ಟಕ 7 ತೋರಿಸುತ್ತದೆ.

ಕೋಷ್ಟಕ 7. ವಿವಿಧ ಮೂಲಗಳಿಂದ ನೀರಾವರಿ ಸೌಕರ್ಯ ಪಡೆದ ಶೇಕಡಾ ಭಾಗ

	1950-51	1955-56	1960-61	1965-66	1971-72
1. ಸರ್ಕಾರಿ ನಾಲೆಗಳು	34.3	35.3	37.2	37.1	37.7
2. ಖಾಸಗಿ ನಾಲೆಗಳು	5.5	6.0	4.9	4.3	2.8
3. ಕೆರೆಗಳು	17.3	19.4	18.5	16.6	13.1
4. ಬಾವಿಗಳು	28.7	29.6	28.5	32.5	38.1
5. ಇತರೆ	14 2	9.7	9.9	9.5	8.3

ಮೂಲ : Indian Agriculture in Brief, Fourteenth Edition, p. 30

ಸರ್ಕಾರಿ ನಾಲೆಗಳು ಮತ್ತು ಬಾವಿಗಳು ಇವೆರಡೂ ಸೇರಿ ಒಟ್ಟು ನೀರಾವರಿ ಪಡೆವ ಜಮೀನಿನ ಮುಕ್ಕಾಲು ಭಾಗಕ್ಕೂ ಹೆಚ್ಚು ಭಾಗಕ್ಕೆ ನೀರನ್ನು ಒದಗಿಸುತ್ತಿರುವುದು ಮೇಲಿನ ಅಂಕಿ - ಅಂಶಗಳಿಂದ ವ್ಯಕ್ತವಾಗುವುವು. ನೀರಾವರಿ ಒದಗಣೆಯಲ್ಲಿ ಕೆರೆಗಳು ಹಾಗೂ ಖಾಸಗಿ ನಾಲೆಗಳ ಭಾಗ ಸಾಪೇಕ್ಷವಾಗಿ ಕಡಮೆಯಾಗಿರುವುದೂ ಕಾಣಬಹುದು.

ಯೋಜನೆಗಳಲ್ಲಿ ಭಾರಿ ನೀರಾವರಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ನೀರಾವರಿ ಕಾಮಗಾರಿಗಳನ್ನು ಉಪೇಕ್ಷೆ ಮಾಡಲಾಗಿದೆ ಎಂದು ಅನೇಕರು ಆಪಾದಿಸಿದ್ದಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶವಿದೆ. ಏಕೆಂದರೆ, 1966ರವರೆಗೆ ರಾಜ್ಯ ಸರ್ಕಾರಗಳು ತಮ್ಮ ಕೃಷಿ ಇಲಾಖೆಯ ಮೂಲಕ ಖಾಸಗಿ ಕೃಷಿಕರಿಗೆ ಬಾವಿ ತೋಡಿ ಪಂಪು ಸೆಟ್ಟುಗಳನ್ನು ಹಾಕಿಸಲು ಸಹಾಯಧನವನ್ನೂ, ಸಾಲ ಹಣವನ್ನೂ ಕೊಡುತ್ತಿದ್ದ ಅಭ್ಯಾಸವನ್ನು ಕೈಬಿಟ್ಟಿತು. ಈ ಬಗ್ಗೆ ಸಾಲಹಣವನ್ನು ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ಬಿಡಲಾಯಿತು. 1969-70ರಿಂದ ಸ್ಥಾಪಿಸಲಾದ ಸಣ್ಣ ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೂ 8ಕೊಳವೆ ಬಾವಿಗಳಿಗೆ ಸಹಾಯ ನೀಡುವ ಕಾರ್ಯವಹಿಸಲಾಗಿದೆ. ಈ ಏರ್ಪಾಡುಗಳು ಸಣ್ಣ ನೀರಾವರಿ ಕಾಮಗಾರಿಗಳ ಅಭಿವೃದ್ಧಿಗೆ ಸಾಕಷ್ಟು ತೃಪ್ತಿಕರವಾಗಿಲ್ಲವೆಂದು ಹೇಳಬಹುದು; ಕೊಳವೆ ಬಾವಿಗಳ ಅಭಿವೃದ್ಧಿಗೆ ವಿದ್ಯುಚ್ಛಕ್ತಿಯ ಅವಶ್ಯಕತೆಯೂ ಇರುವುದರಿಂದ ಇದು ಗ್ರಾಮೀಣ ವಿದ್ಯುಚ್ಛಕ್ತಿ ಪ್ರಸರಣವನ್ನೂ ಅವಲಂಬಿಸಿದೆ. ಅಲ್ಲದೆ, ಭೂಗರ್ಭಜಲ ಪರಿಶೋಧನೆ, ಕೊಳವೆ ಬಾವಿಗಳನ್ನು ತೋಡಿ ಪಂಪು ಸೆಟ್ಟುಗಳನ್ನು ನಿರ್ಮಿಸಲು ಬೇಕಾಗುವ ನುರಿತ ಸಿಬ್ಬಂದಿಯ ಸರಬರಾಯಿ ಇಂತಹ ಕಾರ್ಯಗಳೂ ಸಾವಧಾನವಾಗಿ ಜರುಗಿವೆ. ಕೇಂದ್ರದಲ್ಲಿ ಕೊಳವೆಬಾವಿಗಳ ಪರಿಶೋಧನಾ ಸಂಸ್ಥೆಯೊಂದು 1954ರಲ್ಲಿಯೇ ಸ್ಥಾಪನೆಯಾಯಿತಾದರೂ, ಭೂಗರ್ಭಜಲ ಶೋಧನೆಗೆ ಸಂಬಂಧಪಟ್ಟ ಕಾರ್ಯಾಚರಣೆಗಳೆಲ್ಲವನ್ನೂ ರಾಷ್ಟ್ರೀಯ ಮಟ್ಟದಲ್ಲಿ ಕ್ರೋಢೀಕರಿಸಲು 'ಕೇಂದ್ರೀಯ ಭೂಗರ್ಭಜಲ ಬೋರ್ಡ್' ಒಂದನ್ನು 1970ರಲ್ಲಿ ಸ್ಥಾಪಿಸಲಾಯಿತು. ಭೂಗರ್ಭಜಲಶೋಧನೆ ಕಾರ್ಯ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರ ಮುಖ್ಯವಾದುದು. ಇದಕ್ಕೆ ಪ್ರಥಮ ಯೋಜನೆಯಿಂದಲೇ ಹೆಚ್ಚು ಆದ್ಯತೆ ನೀಡಿ ಸಾಕಷ್ಟು ಹಣ ಒದಗಿಸಬಹುದಾಗಿದ್ದಿತೆಂದು ಹೇಳಬಹುದು. ನೀರಾವರಿಗಾಗಿ ಕೆರೆಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮಗಳಿಗೆ ಸಾಕಷ್ಟು ಗಮನ ನೀಡಿಲ್ಲದಿರುವುದು ನೀರಾವರಿ ಯೋಜನೆಯ ಒಂದು ಲೋಪವಾಗಿದೆ.

ಐದನೆಯ ಯೋಜನೆಯಿಂದ ಈಚೆಗೆ ಸಣ್ಣ ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಪ್ರಯತ್ನ ಮಾಡಲಾಗಿದೆ. ನೀರಾವರಿಗೆ ನಿಗದಿ ಮಾಡಲಾದ

3095ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ 761 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಇದರಿಂದ ಸಣ್ಣ ನೀರಾವರಿ ಕಾರ್ಯದಲ್ಲಿ ಪಾತ್ರ ಹೊಂದಿರುವ ಖಾಸಗಿ ವ್ಯಕ್ತಿಗಳ ಪ್ರಯತ್ನಕ್ಕೂ ಹೆಚ್ಚಿನ ಬೆಂಬಲ ದೊರೆತಂತಾಗಿದೆ. ಪ್ರಸಕ್ತ ಆರನೆಯ ಯೋಜನೆಯಲ್ಲಿಯೂ ಸಣ್ಣ ನೀರಾವರಿಗೆ ಆದ್ಯತೆ ನೀಡಲಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಬಹುಭಾಗಕ್ಕೆ ವಿದ್ಯುಚ್ಛಕ್ತಿ ಒದಗಿಸಿರುವುದರಿಂದ ಪಂಪುಸೆಟ್ಟುಗಳ ನಿರ್ಮಾಣಕ್ಕೆ ಹೆಚ್ಚು ಅವಕಾಶವಿದೆ.

ವಿವಿಧ ರಾಜ್ಯಗಳಲ್ಲಿ ನೀರಾವರಿ ಅಭಿವೃದ್ಧಿ

ಮೂರು ದಶಕಗಳ ನೀರಾವರಿ ಅಭಿವೃದ್ಧಿಯು ತೃಪ್ತಿಕರವಾಗಿದೆ ಎಂದು ಹೇಳಲಾಗುವುದಿಲ್ಲವೆಂದು ಹಿಂದೆಯೇ ಹೇಳಲಾಯಿತು. ವಿವಿಧ ರಾಜ್ಯಗಳಲ್ಲಿ ಈ ಅಭಿವೃದ್ಧಿಯು ಹಂಚಲ್ಪಟ್ಟಿರುವುದು ಇನ್ನೂ ಹೆಚ್ಚು ಅತೃಪ್ತಿಕರ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆಯಾ ರಾಜ್ಯದ ಅಂತಿಮ ನೀರಾವರಿ ಸಾಧ್ಯತೆಯಲ್ಲಿ ಈಗ ಆಗಿರುವ ಅಭಿವೃದ್ಧಿಯಿಂದ ಎಷ್ಟು ಭಾಗ ಜಮೀನು ನೀರಾವರಿ ಪಡೆಯುತ್ತಿದೆ ಎಂಬುದನ್ನು ಕೋಷ್ಟಕ 8 ಸೂಚಿಸುತ್ತದೆ:

ಕೋಷ್ಟಕ 8. ವಿವಿಧ ರಾಜ್ಯಗಳಲ್ಲಿ ನೀರಾವರಿ ಸೌಕರ್ಯದ ಹಂಚಿಕೆ

ರಾಜ್ಯದ ಹೆಸರು	ಅಂತಿಮ ಸಾಧ್ಯತೆಯಲ್ಲಿ ನೀರಾವರಿ ಪಡೆಯುತ್ತಿರುವ ಜಮೀನಿನ ಶೇಕಡಾ ಭಾಗ
1	2
ಆಂಧ್ರಪ್ರದೇಶ	40.5
ಅಸ್ಸಾಂ	3.9
ಬಿಹಾರ	21.7
ಗುಜರಾತ್	33.6
ಹರಿಯಾನ	5.0
ಜಮ್ಮು ಮತ್ತು ಕಾಶ್ಮೀರ	59.3
ಕರ್ನಾಟಕ	46.3
ಕೇರಳ	40.0
ಮಧ್ಯಪ್ರದೇಶ	17.7

(ಮುಂದುವರಿದಿದೆ)

(ಕೋಷ್ಟಕ 8 ಮುಂದುವರಿದಿದೆ)

1	2
ಮಹಾರಾಷ್ಟ್ರ	39.2
ಒರಿಸ್ಸಾ	36.8
ಪಂಜಾಬ್	72.26
ರಾಜಾಸ್ತಾನ್	36.8
ತಮಿಳುನಾಡು	70.0
ಉತ್ತರಪ್ರದೇಶ	36.6
ಪಶ್ಚಿಮ ಬಂಗಾಳ	60.2

ಮೂಲ : **G.O I. Draft Fifth Five Year Plan, Vol. II. pp. 115 & 116.**

ಅಂತಿಮ ಸಾಧ್ಯತೆಯ ಶೇಕಡಾ 70 ರಷ್ಟು ನೀರಾವರಿ ಅಭಿವೃದ್ಧಿ ಸಾಧಿಸಿರುವ ಪಂಜಾಬು ಮತ್ತು ತಮಿಳುನಾಡು ಒಂದು ಕಡೆ ಇದ್ದರೆ ಕೇವಲ ಶೇಕಡಾ 3.9 ರಷ್ಟು ಇರುವ ಅಸ್ಸಾಂ ಮತ್ತು ಕೇವಲ ಶೇಕಡಾ 5ರಷ್ಟು ಇರುವ ಹರಿಯಾನ ರಾಜ್ಯಗಳು ಇನ್ನೊಂದು ತುದಿಯಲ್ಲಿವೆ. ವಿವಿಧ ರಾಜ್ಯಗಳ ನೀರಾವರಿ ಅಭಿವೃದ್ಧಿಯಲ್ಲಿ ತುಂಬ ಅಂತರ ಇರುವುದನ್ನು ಮೇಲಿನ ಅಂಕಿ ಅಂಶಗಳು ತೋರಿಸುತ್ತವೆ. ಅಂದಮೇಲೆ, ನೀರಾವರಿ ಅಭಿವೃದ್ಧಿ ಯೋಜನೆಯಲ್ಲಿ ಪ್ರಾದೇಶಿಕ ಆರ್ಥಿಕ ಸಮಾನತೆ ಕಡೆಗೆ ಸಾಕಷ್ಟು ಗಮನ ನೀಡಿಲ್ಲವೆಂದು ಹೇಳಬಹುದು. ಹಿಂದುಳಿದಿರುವ ರಾಜ್ಯಗಳ ನೀರಾವರಿ ಅಭಿವೃದ್ಧಿಗೆ ಮುಂದಿನ ಯೋಜನೆಗಳಲ್ಲಿ ಹೆಚ್ಚು ಹಣ ಹೂಡಬೇಕಾದುದರ ಅವಶ್ಯಕತೆಯನ್ನು ಸೂಚಿಸುವುದು.

ವಿವಿಧ ಬೆಳೆಗಳಿಗೆ ನೀರಾವರಿ

ನೀರಾವರಿ ಅಭಿವೃದ್ಧಿಯ ಪ್ರಯೋಜನವು ಎಲ್ಲಾ ಬೆಳೆಗಳಿಗೂ ಅಂದರೆ ಎಲ್ಲಾ ದವಸಧಾನ್ಯಗಳ ಬೆಳೆಗೂ ಸಮಾನವಾಗಿ ಲಭಿಸಿಲ್ಲ. ನೀರಾವರಿ ಸೌಕರ್ಯದ ಮುಕ್ಕಾಲು ಭಾಗ ಬತ್ತ ಮತ್ತು ಗೋಧಿ ಬೆಳೆಗೆ ಲಭಿಸಿದೆ. ಜೋಳ, ಹತ್ತಿ, ಕಬ್ಬು, ಹಣ್ಣುಗಳು ಇತ್ಯಾದಿಗಳಿಗೆ ಹೆಚ್ಚಿನ ನೀರಾವರಿ ಒದಗಿರುವುದಾದರೆ ದ್ವಿದಳ ಧಾನ್ಯಗಳ ಬೆಳೆಗಳಿಗೆ ಉಪಯೋಗಿಸಲಾದ ಜಮೀನಿನಲ್ಲಿ ನೀರಾವರಿ ಇದ್ದ ಜಮೀನು ಭಾಗ 1951–52 ಮತ್ತು 1971–72ರ ಎರಡು ದಶಕಗಳ ಅವಧಿಯಲ್ಲಿ ಸುಮಾರು 19.4 ಲಕ್ಷ ಹೆಕ್ಟೇರುಗಳಷ್ಟೇ ಆಗಿದ್ದುದು ಈ ಬೆಳೆಗಳಿಗೆ ನೀರಾವರಿ ಒದಗಿಸುವ ಬಗ್ಗೆ ಯೋಜನೆಯ ಉಪೇಕ್ಷೆಯನ್ನು ಸೂಚಿಸುವುದೆಂದು ತಿಳಿಯಬಹುದು. ದೇಶದಲ್ಲಿ ದ್ವಿದಳ ಧಾನ್ಯಗಳ ಅಭಾವ ಹಾಗೂ ಅತ್ಯಂತ ಹೆಚ್ಚಿದ ಬೆಲೆ ಇವುಗಳು ಈ ಉಪೇಕ್ಷೆಯ ದುಷ್ಪರಿಣಾಮಗಳಾಗಿವೆ.

ವಿವಿಧ ಬೆಳೆಗಳ ಸಾಗುವಳಿ ಭೂಮಿಯಲ್ಲಿ ನೀರಾವರಿ ಭೂಮಿಯ ಶೇಕಡಾ ಭಾಗ

ಮೇಲೆ ಹೇಳಿರುವಂತೆ ಬತ್ತ ಹಾಗೂ ಗೋಧಿ ಬೆಳೆಗಳು ಒಟ್ಟು ನೀರಾವರಿ ಸೌಕರ್ಯದ ಮುಕ್ಕಾಲು ಭಾಗದಷ್ಟನ್ನು ಹೊಂದಿರುವುದಾದರೂ ಈ ಬೆಳೆಗಳ ಇನ್ನೂ ಬಹು ಭಾಗ ಜಮೀನಿಗೆ ನೀರಾವರಿ ಇಲ್ಲದಿರುವುದು ಗಮನಾರ್ಹವಾಗಿದೆ. 1980-81 ರಲ್ಲಿ ಬತ್ತದ ಜಮೀನುಗಳ ಒಟ್ಟು ವಿಸ್ತೀರ್ಣದ ಕೇವಲ ಶೇಕಡಾ 40ರಷ್ಟಕ್ಕೆ ಮಾತ್ರ ನೀರಾವರಿ ಇದ್ದಿತು. ಅದೇ ವರ್ಷದಲ್ಲಿ ಗೋಧಿ ಜಮೀನುಗಳ ಒಟ್ಟು ವಿಸ್ತೀರ್ಣದ ಶೇಕಡಾ 70ರಷ್ಟು ಭಾಗಕ್ಕೆ ಹಾಗೂ ಕಬ್ಬಿನ ಬೆಳೆಯ ಶೇಕಡಾ 81ರಷ್ಟು ಭಾಗಕ್ಕೆ ನೀರಾವರಿ ಲಭ್ಯವಾಗಿದ್ದಿತು.[1] ಇತರ ಬೆಳೆಗಳ ಬಗ್ಗೆ ನೀರಾವರಿ ಹೊಂದಿರುವ ಜಮೀನುಭಾಗ ಅಲ್ಪವೇ ಆಗಿದೆ. ಇವು ಪ್ರಸಕ್ತ ಹಾಗೂ ಮುಂದಿನ ನೀರಾವರಿ ಯೋಜನೆಗಳು ನಿರ್ವಹಿಸಬೇಕಾದ ಕಾರ್ಯವಾಗಿವೆ.

ನೀರಾವರಿ ಸೌಲಭ್ಯದ ಅಪೂರ್ಣ ಉಪಯೋಗದ ಸಮಸ್ಯೆ

ಭಾರಿ ನೀರಾವರಿ ಪ್ರಾಯೋಜನೆಗಳಿಂದಲೂ ಮತ್ತು ಕೆಲವು ಇತರ ನೀರಾವರಿ ಪ್ರಾಜೆಕ್ಟುಗಳಿಂದಲೂ ದೊರಕಿಸಲಾದ ನೀರಾವರಿ ಸಾಧ್ಯತೆಗಳು ವಾಸ್ತವವಾಗಿ ಸಾಗುವಳಿಯಾಗುತ್ತಿರುವ ಭೂಮಿಗೆ ತಲುಪಲು ತುಂಬ ಕಾಲಾವಕಾಶ ಬೇಕಾಗಿರುವುದು ಭಾರತದ ನೀರಾವರಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕಂಡುಬಂದಿರುವ ಒಂದು ದೋಷವಾಗಿದೆ. 1955-56ರಲ್ಲಿ ಮೊದಲನೆ ಯೋಜನೆಯಲ್ಲಿ ದೊರಕಿಸಲಾಗಿದ್ದ ನೀರಾವರಿ ಸಾಧ್ಯತೆಯ ಕೇವಲ ಶೇಕಡಾ 48ರಷ್ಟನ್ನು ಮಾತ್ರ ಉಪಯೋಗಿಸಲಾಗುತ್ತಿದ್ದಿತು. ಈ ಶೇಕಡಾ ಭಾಗ 1960-61ರಲ್ಲಿ 76ರಷ್ಟು ಆಗಿದ್ದಿತೆಂದು ಯೋಜನಾ ಆಯೋಗವು ಅಂದಾಜು ಮಾಡಿತು.[2] ಭಾರಿ ಹಾಗೂ ಮಧ್ಯಮ ನೀರಾವರಿ ಪ್ರಾಯೋಜನೆಗಳಿಂದ ದೊರಕುವ ನೀರಾವರಿ ಸೌಲಭ್ಯವು ರೈತರ ಜಮೀನುವರೆಗೆ ಹೋಗಲು ಸಾಧಾರಣವಾಗಿ 5-6 ವರ್ಷಗಳಾಗುತ್ತವೆ ಎಂದೂ ಈ ಯೋಜನಾ ಆಯೋಗವು ಹೇಳಿದೆ.[3] ನಿರ್ಮಿಸಲಾಗುವ ದೊಡ್ಡ ನಾಲೆಗಳು ಆಯಾ ಪ್ರದೇಶದ ಜಮೀನುಗಳನ್ನು ಸಂಪರ್ಕಿಸಬೇಕಾದ ಸಣ್ಣ ನಾಲೆಗಳ ನಿರ್ಮಾಣಕಾರ್ಯ ತಡವಾಗುವುದೇ ಇದಕ್ಕೆ ಮುಖ್ಯ ಕಾರಣ ಎಂದು

1 G. O. I., Economic Survey, 1984-85, Table No.1.12, p. 105

2. G.O.I., Third Five Year Plan, p. 382.

3. G.O.I., Fourth Five Year Plan, Draft, p. 187.

ಹೇಳಲಾಗಿದೆ. ಆಂದಮೇಲೆ ಈ ಮುಖ್ಯ ಕಾರ್ಯವು ಭಾರಿನಾಲೆ ನಿರ್ಮಾಣದ ಕಾಲದಲ್ಲಿಯೇ ಏಕೆ ನಡೆಯಲಿಲ್ಲ ಎಂಬ ಪ್ರಶ್ನೆ ಏಳುವುದು. ಭಾರಿ ನೀರಾವರಿ ಪ್ರಾಜೆಕ್ಟುಗಳನ್ನು ಯೋಜಿಸುವಾಗ ಇವುಗಳು ದೊರಕಿಸುವ ನೀರಾವರಿ ಸೌಲಭ್ಯವು ರೈತರ ಜಮೀನನನ್ನು ಶೀಘ್ರವಾಗಿ ತಲುಪುವಂತೆ ಮಾಡಲು ಬೇಕಾಗುವ ಎಲ್ಲಾ ಕಾರ್ಯಾಚರಣೆಗಳನ್ನೂ ಈ ಪ್ರಾಯೋಜನೆಗಳ ಯೋಜನೆಯು ಒಳಗೊಳ್ಳುವಂತೆ ಮಾಡಬೇಕೆಂಬುದೇ ಈ ಅನುಭವದ ಪಾಠವಾಗಿದೆ.

ನೀರಾವರಿ ವಿಸ್ತರಿಸುವ ಯೋಜನೆಯೊಡನೆ ಕೃಷಿ ಅಭ್ಯಾಸಗಳ ಸುಧಾರಣೆಯ ಸಮಸ್ಯೆಯೂ ಹೆಣೆದುಕೊಂಡಿರುವುದನ್ನು ಮುಖ್ಯವಾಗಿ ಗಮನಿಸಬೇಕು. ಕೇವಲ ನೀರಾವರಿ ಪ್ರಯೋಜನಪಡೆದು ರೈತರು ತಮ್ಮ ಸಾಂಪ್ರದಾಯಿಕ ಸಾಗುವಳಿಯನ್ನೇ ನಡೆಸುವುದು ಉಚಿತವಾಗುವುದಿಲ್ಲ. ಅವರು ನೀರಾವರಿ ಬಂದೊಡನೆ ಬದಲಿ ಬೆಳೆಗಳಿಗಾಗಿ ರಸಗೊಬ್ಬರ, ಉತ್ತಮ ಬೀಜ, ಕ್ರಿಮಿಕೀಟನಾಶಕಗಳು ಇತ್ಯಾದಿಗಳೆಲ್ಲದರ ಬಳಕೆಯನ್ನೂ ಹೊಸದಾಗಿ ಕಲಿಯಬೇಕಾಗುವುದು. ಕೃಷಿ ಯೋಜನೆಯ ಈ ವಿವಿಧ ಅಂಗಗಳೂ ಪರಸ್ಪರ ಸಂಬಂಧ ಹೊಂದಿರುವುದರಿಂದ ನೀರಾವರಿ ಯೋಜನೆಯನ್ನು ರೂಪಿಸುವಾಗ ಈ ವಿಷಯಗಳನ್ನೂ ಗಮನಿಸಬೇಕಾಗುವುದು.

ಈಚಿನ ವರ್ಷಗಳಲ್ಲಿ ಸ್ಥಾಪಿಸಲಾಗುತ್ತಿರುವ ಆಕರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳು ಸುಸಂಘಟಿತ ಕೃಷಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸಹಾಯಕವಾಗಿವೆ. ಯಾವುದೇ ನೀರಾವರಿ ಪ್ರಾಯೋಜನೆಯ ವ್ಯಾಪ್ತಿಗೆ ಸೇರುವ ನೀರಾವರಿ ಆಕರ ಪ್ರದೇಶವನ್ನು ಹೊಸ ನೀರಾವರಿ ಸೌಕರ್ಯದ ಪೂರ್ಣ ಪ್ರಯೋಜನ ಪಡೆಯುವಂತೆ ಸಿದ್ಧಗೊಳಿಸುವುದೇ ಈ ಆಕರ ಪ್ರದೇಶ ಅಭಿವೃದ್ಧಿ ಅಧಿಕಾರ ಸಂಸ್ಥೆಗಳ ಕರ್ತವ್ಯವಾಗಿದೆ. ನೀರಾವರಿಯ ಮುಖ್ಯ ನಾಲೆಗಳನ್ನು ನಿರ್ಮಾಣಗೊಳಿಸುವುದರ ಜೊತೆಗೆಯೇ ಈ ನಾಲೆಗಳನ್ನು ಜಮೀನುಗಳಿಗೆ ಸಂಪರ್ಕಿಸುವ ಉಪನಾಲೆಗಳ ಹಾಗೂ ಜಮೀನು ಕಾಲುವೆಗಳ ನಿರ್ಮಾಣ, ಅವಶ್ಯಕವಿದ್ದೆಡೆಗಳಲ್ಲಿ ಹಿಡುವಳಿಗಳನ್ನು ಒಂದುಗೂಡಿಸುವುದು, ಭೂಮಿಯನ್ನು ಮಟ್ಟಸಗೊಳಿಸುವುದು ನೀರಾವರಿಗೆ ಹೊಂದಿಕೊಳ್ಳುವ ಬೆಳೆಗಳ ಮಿಶ್ರಣದ ನಮೂನೆಯನ್ನು ಸಿದ್ಧಪಡಿಸುವುದು, ಸಕಾಲಕ್ಕೆ ಸೂಕ್ತ ಪ್ರಮಾಣದಲ್ಲಿ ಜಮೀನುಗಳಿಗೆ ನೀರು ಬಿಡುವ ವ್ಯವಸ್ಥೆ, ಕೃಷಿ ಉತ್ಪನ್ನ ಸಾಧನಗಳ-ರಸಗೊಬ್ಬರ, ಶಕ್ತಿಮಾನ್ ಸುಧಾರಿತ ಬೀಜ, ನವೀನ ಉಪಕರಣಗಳು ಇತ್ಯಾದಿ ಮತ್ತು ಸಾಲಹಣ ಸರಬರಾಯಿಗೆ ಏರ್ಪಾಡು, ಕೃಷಿ ಉತ್ಪನ್ನವನ್ನು ಮಾರುಕಟ್ಟೆಗೆ ಸಾಗಿಸಲು ಉತ್ತಮವಾದ ರಸ್ತೆ ಮತ್ತು ಇತರ ಸಾರಿಗೆ ಸೌಲಭ್ಯಗಳ ನಿರ್ಮಾಣ,

ರೈತರಿಗೆ ಹೊಸ ಕೃಷಿ ವಿಧಾನ ಕುರಿತ ಜ್ಞಾನ ಪ್ರಸಾರಕ್ಕೆ ವ್ಯವಸ್ಥೆ ಇತ್ಯಾದಿಗಳೆಲ್ಲವೂ ನೀರಾವರಿ ಆಕರ ಪ್ರದೇಶವನ್ನು ಹೊಸ ನೀರಾವರಿ ಸೌಕರ್ಯದ ಪೂರ್ಣ ಪ್ರಯೋಜನ ಪಡೆಯುವಂತೆ ಸಿದ್ಧಗೊಳಿಸುವ ಕಾರ್ಯಕ್ರಮಗಳಿಗೆ ಸೇರುವುವು. ಈ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುವುದು ಆಕರ ಪ್ರದೇಶ ಅಭಿವೃದ್ಧಿ ಸಂಸ್ಥೆಗಳ ಕರ್ತವ್ಯವಾಗಿದೆ. ನೀರಾವರಿ ಸೌಕರ್ಯ ದೊರಕಿಸುವುದಕ್ಕೂ ಈ ಸೌಕರ್ಯದ ಪ್ರಯೋಜನ ಪಡೆಯುವುದಕ್ಕೂ ಈವರೆಗೆ ಇದ್ದ ಕಾಲ ವಿಳಂಬವನ್ನು ಈ ಕಾರ್ಯಕ್ರಮಗಳು ತಪ್ಪಿಸುವುವಲ್ಲದೆ ಹೊಸ ನೀರಾವರಿಯ ಪೂರ್ಣ ಪ್ರಯೋಜನವನ್ನೂ ಪಡೆಯಲು ಸಹಾಯಕವಾಗುವುವು.

ಐದನೆಯ ಯೋಜನೆಯ ಅವಧಿಯಲ್ಲಿ (1974-78) 13 ರಾಜ್ಯಗಳ 108 ಜಿಲ್ಲೆಗಳಲ್ಲಿ 50 ನೀರಾವರಿ ಪ್ರಾಯೋಜನೆಗಳ 12.4 ದಶಲಕ್ಷ ಹೆಕ್ಟೇರುಗಳಷ್ಟು ವಿಸ್ತಾರದ ಆಕರ ಪ್ರದೇಶಗಳಿಗೆ ಸಂಬಂಧಿಸಿದಂತೆ 38 ಆಕರ ಪ್ರದೇಶ ಅಭಿವೃದ್ಧಿ ಅಧಿಕಾರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. 1980ರ ಮಾರ್ಚಿ ವೇಳೆಗೆ 16 ರಾಜ್ಯಗಳಲ್ಲಿ 15.3 ಹೆಕ್ಟೇರುಗಳಷ್ಟು ಆಕರ ಪ್ರದೇಶಗಳನ್ನು ಹೊಂದಿದ್ದ 76 ನೀರಾವರಿ ಪ್ರಾಯೋಜನೆಗಳಿಗೆ ಸಂಬಂಧಿಸಿದಂತೆ 43 ಆಕರ ಪ್ರದೇಶ ಅಭಿವೃದ್ಧಿ ಅಧಿಕಾರ ಸಂಸ್ಥೆಗಳಿದ್ದವು. ಪ್ರಸಕ್ತ ಆರನೆಯ ಯೋಜನೆಯಲ್ಲಿ ಇನ್ನೂ ಹೆಚ್ಚು ನೀರಾವರಿ ಆಕರ ಪ್ರದೇಶಗಳನ್ನು ಈ ಸಂಸ್ಥೆಗಳ ವ್ಯಾಪ್ತಿಗೆ ಒಳಪಡಿಸುವ ಕಾರ್ಯಕ್ರಮಗಳಿವೆ.

ನೀರಾವರಿ ಅಭಿವೃದ್ಧಿಯ ವೆಚ್ಚ

ಯೋಜನೆಗಳಲ್ಲಿ ನೀರಾವರಿಗಾಗಿ ಹಾಕಲಾದ ಬಂಡವಾಳ ವೆಚ್ಚವನ್ನೂ ಈ ವೆಚ್ಚದಿಂದ ದೊರಕಿದ ನೀರಾವರಿ ಸೌಕರ್ಯವನ್ನೂ (ನೀರಾವರಿ ಪಡೆಯುವ ಭೂ ವಿಸ್ತಾರವನ್ನೂ) ಪರಿಗಣಿಸಿ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಹೆಕ್ಟೇರು ಒಂದಕ್ಕೆ ನೀರಾವರಿ ಒದಗಿಸಲು ಆಗಿರುವ ವೆಚ್ಚವನ್ನು ಕೋಷ್ಟಕ 9ರಲ್ಲಿ ತೋರಿಸಲಾಗಿದೆ.

ನೀರಾವರಿಗೆ ಹಾಕಲಾದ ಬಂಡವಾಳವು ಒಂದು ಯೋಜನೆಯಿಂದ ಇನ್ನೊಂದು ಯೋಜನೆಯಲ್ಲಿ ಹೆಚ್ಚಿರುವುದಾದರೂ ದೊರಕಿಸಲಾದ ನೀರಾವರಿ ಸಾಮರ್ಥ್ಯವು ಏಕರೀತಿಯೇ ಇರುವುದನ್ನು ಮೇಲಿನ ಅಂಕಿ-ಅಂಶಗಳು ತೋರಿಸುವುವು. ಇವರಿಂದ ಹೆಕ್ಟೇರು ಒಂದಕ್ಕೆ ನೀರಾವರಿ ಹಾಯಿಸಲು ತಗುಲಿದ ವೆಚ್ಚ ಮೊದಲನೆ ಯೋಜನೆಯಲ್ಲಿ 1504ರೂಪಾಯಿಗಳಿದ್ದುದು ನಾಲ್ಕನೆಯ ಯೋಜನೆಯಲ್ಲಿ 5012ರೂಪಾಯಿಗಳಷ್ಟು ಹೆಚ್ಚಿದೆ. ಈ ಹೆಚ್ಚುವರಿಗೆ ಹಣ ಬಾಹುಳ್ಯ ಹಾಗೂ ಸಾಮಾನ್ಯ ಬೆಲೆ ಏರಿಕೆ ಒಂದು ಕಾರಣವಿರಬಹುದೆಂದು ಹೇಳಬಹುದಾದರೂ ಈ ವೆಚ್ಚ ಹೆಚ್ಚುವರಿಗೆ ಇತರ ಕಾರಣ

ಗಳೇನು ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಇದರ ಆಧಾರದ ಮೇಲೆ ಮಿತವ್ಯಯ ಕ್ರಮಗಳನ್ನೂ ತೆಗೆದು ಕೊಳ್ಳುವುದು ಉಪಯುಕ್ತವಾಗುವುದು.

ಕೋಷ್ಟಕ 9. ನೀರಾವರಿ ಅಭಿವೃದ್ಧಿಯ ವೆಚ್ಚ

ಬಾಬು	ಮೊದಲನೆ ಯೋಜನೆ	ಎರಡನೆ ಯೋಜನೆ	ಮೂರನೆ ಯೋಜನೆ	3ವಾರ್ಷಿಕ ಯೋಜನೆಗಳು	ನಾಲ್ಕನೆ ಯೋಜನೆ
ನೀರಾವರಿಗೆ ಹಾಕಿರುವ ಬಂಡವಾಳ ಹೂಡಿಕೆ (ಕೋಟಿ ರೂಪಾಯಿಗಳಲ್ಲಿ)	376	380	576	435	1253
ದೊರಕಿಸಲಾದ ನೀರಾವರಿ ಸಾಮರ್ಥ್ಯ (ದಶಲಕ್ಷ ಹೆಕ್ಟೇರುಗಳಲ್ಲಿ)	2.5	2.1	2.3	1.5	2.5
ಹೆಕ್ಟೇರು ಒಂದಕ್ಕೆ ನೀರಾವರಿ ಹಾಯಿಸಲು ತಗುಲಿದ ವೆಚ್ಚ (ರೂಪಾಯಿಗಳಲ್ಲಿ)	1504	1809	2504	2900	5012

ನೀರಾವರಿ ಹೂಡಿಕೆಗೆ ಪ್ರತಿಫಲ

ಸರ್ಕಾರವು ಭಾರಿ ಹಾಗೂ ಮಧ್ಯಮ ನೀರಾವರಿ ಪ್ರಾಯೋಜನೆಗಳಿಗೆ ಹೂಡುವ ಬಂಡವಾಳಕ್ಕೆ ಪ್ರತಿಫಲ ಪಡೆಯಲು ನೀರಿನ ದರ, ನೀರಾವರಿ ಸೆಸ್ಸು ಮತ್ತು ಉತ್ತಮಗೊಳಿಸಿದುದಕ್ಕೆ ತೆರ ಇತ್ಯಾದಿ ರೂಪದ ತೆರಿಗೆಗಳನ್ನು ವಿಧಿಸಿದೆ. ನೀರಾವರಿ ಸೌಕರ್ಯದ ಪ್ರಯೋಜನ ಪಡೆಯುವುದರಿಂದ ಸರ್ಕಾರವು ಇವುಗಳನ್ನು ವಸೂಲು ಮಾಡುತ್ತದೆ. ಆದರೆ ಈ ಆದಾಯವು ಸರ್ಕಾರವು ವಹಿಸುತ್ತಿರುವ ಚಾಲತಿ ವೆಚ್ಚ ಹಾಗೂ ಬಂಡವಾಳ ಹಣದ ಮೇಲಿನ ಬಡ್ಡಿ ಇವುಗಳ ಮೊತ್ತಕ್ಕಿಂತ ಕಡಮೆಯಾಗಿರುವುದರಿಂದ ಸಾಮಾನ್ಯವಾಗಿ ನೀರಾವರಿ ಯೋಜನೆಗಳಿಂದ ಸರ್ಕಾರ ನಷ್ಟ ಅನುಭವಿಸುತ್ತಿದೆ. ಕೆಲವು ವರ್ಷಗಳಲ್ಲಿ ಈ ನಷ್ಟ ತುಂಬ ಹೆಚ್ಚಾಗಿದೆ. ಉದಾಹರಣೆಗೆ 1968–69ರಲ್ಲಿ 78.65 ಕೋಟಿರೂಪಾಯಿಗಳಷ್ಟು,[1] 1971–72ರಲ್ಲಿ 130 ಕೋಟಿ ರೂಪಾಯಿಗಳಷ್ಟು[2]

1. G. O. I. Fourth Five Year Plan, Annexure IV,p.264.
2. G. O. I. Draft Fifth Five Year Plan, Vol, I, p. 60.

ನಷ್ಟವುಂಟಾಯಿತು. ತರುವಾಯದ ವರ್ಷಗಳಲ್ಲಿಯೂ ಅನೇಕ ನೀರಾವರಿ ಪ್ರಾಯೋಜನೆಗಳಿಂದ ಸರ್ಕಾರಕ್ಕೆ ನಷ್ಟ ಉಂಟಾಗುತ್ತಿದೆಯೆಂದು ಹೇಳಲಾಗಿದೆ.[1] ನೀರಾವರಿ ಪ್ರಾಯೋಜನೆಗಳ ನಿರ್ಮಾಣಕ್ಕೆ ಅಧಿಕ ವೆಚ್ಚ ದೊರಕಿಸಲಾದ ನೀರಾವರಿ ಸಾಮರ್ಥ್ಯದ ಅಪೂರ್ಣ ಬಳಕೆ ಮತ್ತು ವಿಧಿಸಲಾದ ವಿವಿಧ ರೂಪದ ನೀರಾವರಿ ತೆರಿಗೆಗಳ ದರ ಕಡಿಮೆಯಾಗಿರುವುದೇ ಈ ನಷ್ಟಕ್ಕೆ ಕಾರಣವೆಂದು ಹೇಳಲಾಗಿದೆ. ಈ ಕಾರಣಗಳಿಗೆ ಸೂಕ್ತವಾದ ಉಪಾಯಗಳನ್ನು ಹುಡುಕಿಕೊಂಡು ನೀರಾವರಿ ಕಾರ್ಯದಿಂದ ನಷ್ಟವಾಗದಂತೆ ನೋಡಿಕೊಳ್ಳುವುದೂ ನೀರಾವರಿ ಯೋಜನೆಯು ಬಿಡಿಸಬೇಕಾದ ಒಂದು ಸಮಸ್ಯೆಯಾಗಿದೆ.

ಸಮಾಪ್ತಿ

ಭಾರತದ ನೀರಾವರಿ ಯೋಜನೆ ಕುರಿತ ಮೇಲಿನ ಅವಲೋಕನವು ಈವರೆಗೆ ಸಾಧಿಸಲಾದ ಪ್ರಗತಿಯನ್ನೂ ಲೋಪದೋಷಗಳನ್ನೂ ಸ್ಪಷ್ಟಪಡಿಸಿದೆ. 1950–51 ರಿಂದ 1965–66ರ ಅವಧಿಯಲ್ಲಿ ನೀರಾವರಿ ಪಡೆದಿರುವ ಜಮೀನಿನ ಭಾಗ ಕೇವಲ ಶೇಕಡಾ 3ರಷ್ಟು ಹೆಚ್ಚಿರುವುದು 1965–66ರಿಂದ 1977–78ರ ಅವಧಿಯಲ್ಲಿ ಸುಮಾರು ಶೇಕಡಾ 9ರಷ್ಟು ಹೆಚ್ಚಿರುವುದನ್ನು ಸಮರ್ಪಕ ಅಭಿವೃದ್ಧಿ ಎಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ, ಒಟ್ಟಿನಲ್ಲಿ ಸಾಗುವಳಿಯಾದ ಒಟ್ಟು ಜಮೀನಿನ ಶೇಕಡಾ 29ರಷ್ಟು ಭಾಗಕ್ಕೆ ಮಾತ್ರ ಈ ಸೌಕರ್ಯ ಉಂಟಾದಂತಾಗಿದೆ. ಈ ದೃಷ್ಟಿಯಿಂದ ನೋಡಿದರೆ ಒಟ್ಟಿನಲ್ಲಿ ಸರ್ಕಾರಿ ವಲಯದ ಯೋಜನಾ ವೆಚ್ಚದ ಕೇವಲ ಶೇಕಡಾ 9ರಷ್ಟನ್ನು ಮಾತ್ರ ನೀರಾವರಿಗೆ ಉಪಯೋಗಿಸಿರುವುದು ಕಡಿಮೆಯಾಯಿತೆಂದು ಹೇಳಬಹುದು. ನೀರಾವರಿ ಸೌಕರ್ಯ ದೊರಕಿಸುವುದಕ್ಕೂ ಈ ಸೌಕರ್ಯದ ಪ್ರಯೋಜನವನ್ನು ರೈತರು ವಾಸ್ತವವಾಗಿ ತಮ್ಮ ಜಮೀನಿಗೆ ಪಡೆಯುವುದಕ್ಕೂ ಕೆಲವು ವರ್ಷಗಳಷ್ಟು ಅಂತರವಿರುವುದನ್ನು ತಪ್ಪಿಸುವುದು ಉತ್ತಮ ಯೋಜನೆಯ ಲಕ್ಷಣವಾಗಿದೆ. ವಿವಿಧ ರಾಜ್ಯಗಳ ನೀರಾವರಿ ಅಭಿವೃದ್ಧಿಯಲ್ಲಿ ಇರುವ ಅಂತರವೂ ಕಡಿಮೆಯಾಗಬೇಕಾಗಿದೆ. ಅಲ್ಲದೆ ನೀರಾವರಿ ಸೌಕರ್ಯದ ಪ್ರಯೋಜನವು ಎಲ್ಲಾ ಬೆಳೆಗಳಿಗೂ ಮುಖ್ಯವಾಗಿ ದ್ವಿದಳಧಾನ್ಯಗಳಿಗೆ ಲಭಿಸುವಂತಾಗಬೇಕು. ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ಇತ್ತೀಚಿನ ಯೋಜನೆಗಳಲ್ಲಿ ಹೆಚ್ಚು ಆದ್ಯತೆ ನೀಡುತ್ತಿರುವುದು ಉಚಿತವಾಗಿದೆ. ಸರ್ಕಾರವು ನೀರಾವರಿ ಸೌಕರ್ಯ ನಿರ್ಮಾಣಕ್ಕಾಗಿ ವೆಚ್ಚ ಮಾಡುತ್ತಿರುವ ಬಂಡವಾಳಕ್ಕೆ ಸೂಕ್ತ ಪ್ರತಿಫಲ ಪಡೆಯುವಂತಹ ಏರ್ಪಾಡುಗಳನ್ನು ಮಾಡುವುದು ಮುಂದಿನ ಬಂಡವಾ

---

1. G. O. I. Department of Irrigation, **Report 1976-77.**

ಳದ ಸಂಚಯನ ಸೌಲಭ್ಯ ದೃಷ್ಟಿಯಿಂದ ಅವಶ್ಯಕ. ನೀರಾವರಿ ಪ್ರಾಯೋಜನೆಗಳಿಗೆ ತಗಲುತ್ತಿರುವ ವೆಚ್ಚದಲ್ಲಿ ಹೆಚ್ಚಿನ ಮಿತವ್ಯಯ ಸಾಧ್ಯತೆ ಎಂಬುದರ ಪರಿಶೀಲನೆಯೂ ನೀರಾವರಿ ಯೋಜನೆಯ ಅಂಗವಾಗಿರಬೇಕು. ಪ್ರಸಕ್ತ ಆರನೆಯ ಯೋಜನೆ ರಚಿಸುವಲ್ಲಿ ಈ ವಿವಿಧ ಲೋಪದೋಷಗಳನ್ನು ಯೋಜನಾಕಾರರು ಗಮನಿಸಿರುತ್ತಾರೆ. ನೀರಾವರಿ ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1992–93ರ ವೇಳೆಗೆ ಸಾಗುವಳಿಯಾಗುವ ಒಟ್ಟು ಜಮೀನಿನ ಶೇಕಡಾ 61ರಷ್ಟು ಭಾಗಕ್ಕೆ ನೀರಾವರಿ ಸೌಕರ್ಯ ದೊರಕಿಸುವ ಗುರಿಯನ್ನು ಯೋಜನಾಕಾರರು ಹಾಕಿಕೊಂಡಿರುತ್ತಾರೆ.[1]

---

1. G. O. I., **Economic Survey**, 1977-78 ,p.6.

ಅಧ್ಯಾಯ 6

ಆಧುನಿಕ ಕೃಷಿ ಸಾಧನಗಳ ಬಳಕೆ

ನವೀನ ಮಾದರಿಯ ಕೃಷಿ ವಿಧಾನವನ್ನು ಜಾರಿಗೆ ತರಲು ಭಾರತೀಯ ಯೋಜನೆಗಳು ಪ್ರಯತ್ನಿಸಿವೆ. ರಸಗೊಬ್ಬರ, ಶಕ್ತಿಮಾನ್ ಬೀಜಗಳು, ಕ್ರಿಮಿಕೀಟನಾಶಕಗಳು ಕೃಷಿಯಂತ್ರ ಹಾಗೂ ಯಂತ್ರೋಪಕರಣಗಳು ಇತ್ಯಾದಿಗಳನ್ನು ಕೃಷಿಕರು ಉಪಯೋಗಿಸುವುದರಿಂದ ಕೃಷಿ ಉತ್ಪನ್ನ ಹೆಚ್ಚುವುದು. ಈ ಕಾರ್ಯನಿರ್ವಹಣೆಯು ಖಾಸಗಿ ವಲಯಕ್ಕೆ ಅಂದರೆ ಕೃಷಿಕರಿಗೆ ಸೇರಿದುದಾದರೂ ಈ ವಿವಿಧ ಕೃಷಿ ಉತ್ಪಾದನಾ ಸಾಧನಗಳ ಲಭ್ಯತೆ ಹಾಗೂ ಬಳಕೆಗೆ ಸಂಬಂಧಿಸಿದ ಸಾಂಸ್ಥಿಕ ರಚನಾ ಕಾರ್ಯಗಳನ್ನು ಸರ್ಕಾರವು ವಹಿಸಿದೆ. ಸರ್ಕಾರವು ಹೀಗೆ ನೀಡುತ್ತಿರುವ ಸಹಾಯದಿಂದ ಕೃಷಿಕರು ಎಷ್ಟರಮಟ್ಟಿಗೆ ಆಧುನಿಕ ಉತ್ಪಾದನಾ ಸಾಧನಗಳನ್ನು ಬಳಸುವುದರ ಮೂಲಕ ಉತ್ಪಾದನೆಯನ್ನು ಹೆಚ್ಚಿಸುತ್ತಾರೆ ಎಂಬುದರ ಸ್ಥೂಲ ವಿವರಣೆಯೇ ಈ ಅಧ್ಯಾಯದ ಉದ್ದೇಶವಾಗಿದೆ,

ರಾಸಾಯನಿಕ ಗೊಬ್ಬರಗಳ ಲಭ್ಯತೆ ಯೋಜನೆ ಆರಂಭವಾದ ನಂತರ ಹೇಗೆ ಹೆಚ್ಚುತ್ತಾಬಂದಿದೆ ಎಂಬುದನ್ನು ಕೋಷ್ಟಕ 10ರಲ್ಲಿ ತೋರಿಸಲಾಗಿದೆ. ಯೋಜನೆ ಆರಂಭವಾದನಂತರ ರಾಸಾಯನಿಕ ಗೊಬ್ಬರದ ಸರಬರಾಯಿ ಗಣನೀಯ ಪ್ರಮಾಣದಲ್ಲಿ ಏರುತ್ತಾ ಬಂದಿರುವುದನ್ನು ಈ ಕೋಷ್ಟಕವು ತೋರಿಸುತ್ತಿದೆ. 1951-52ರಿಂದ 1979-80ರ ಅವಧಿಯಲ್ಲಿ ನೈಟ್ರೋಜಿನಸ್ ಗೊಬ್ಬರದ ಸರಬರಾಯಿ 45,000 ಟನ್ನುಗಳಿಂದ 3,52,000 ಟನ್ನುಗಳಿಗೂ, ಫಾಸ್‌ಫಾಟಿಕ್ ಗೊಬ್ಬರವು ಕೇವಲ 11,000 ಟನ್ನುಗಳಿದ್ದುದು 9,94,000 ಟನ್ನುಗಳಿಗೂ. ಪೊಟಾಸಿಕ್ ಗೊಬ್ಬರವು 8,000 ಟನ್ನುಗಳಿಂದ 4,73,000 ಟನ್ನುಗಳಿಗೂ ಹೆಚ್ಚಿವೆ. ಪೊಟಾಸಿಕ್ ಗೊಬ್ಬರವು ದೇಶದಲ್ಲಿ ತಯಾರಾಗುತ್ತಿಲ್ಲವಾದರೂ ನೈಟ್ರೋಜಿನಸ್ ಹಾಗೂ ಫಾಸ್‌ಫಾಟಿಕ್ ಗೊಬ್ಬರಗಳ ಕಾರ್ಖಾನೆಗಳು ಸ್ಥಾಪನೆಯಾಗಿ ಇವುಗಳ ಒಟ್ಟು ಸರಬರಾಯಿನ ಅರ್ಧಕ್ಕೂ ಹೆಚ್ಚು ಭಾಗದಷ್ಟನ್ನು ಒದಗಿಸುತ್ತಿವೆ. ಆದರೆ ಇವುಗಳ ಆಮದಿನ ಮೇಲೆ ಅವಲಂಬನೆ

ಕೋಷ್ಟಕ 10. ರಾಸಾಯನಿಕ ಗೊಬ್ಬರದ ಒದಗುವಿಕೆ (ಪೌಷ್ಟಿಕತೆಯು ಸಾವಿರ ಟನ್ನುಗಳಲ್ಲಿ)

ವರ್ಷ	ನೈಟ್ರೋಜಿನಸ್			ಫಾಸ್‌ಫಾಟಿಕ್		ಪೊಟಾಸಿಕ್	
	ಉತ್ಪಾದನೆ	ಆಮದು	ಒಟ್ಟು	ಉತ್ಪಾದನೆ	ಆಮದು	ಒಟ್ಟು	ಆದಮು
1951–52	16	29	45	11	–	11	8
1955–56	80	53	133	12	–	12	10
1960–61	98	399	497	52	–	52	20
1965–66	233	326	559	111	14	125	73
1968–69	543	844	1387	210	138	348	213
1973–74	1060	659	1719	323	213	536	370
1975–76	1535	950	2485	320	361	681	278
1979–80	2226	1295	3521	757	237	994	473
1983–84	–	–	5660	–	–	1880	860

ಈ ಗೊಬ್ಬರ ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿಲ್ಲ.

ಮೂಲ: G.O.I., Economic Survey 1977-78, Table 1.12, p. 71;
G.O.I., *Economic Survey*. 1981-82, Table 1.14, p. 87
G.O.I., Indian Agriculture in Brief, 14th Edition, pp. 189-190
G.O.I. Economic Survey, 1984-85 p. 9.

ಕಡಮೆಯಾಗಿಲ್ಲ; ವಾಸ್ತವವಾಗಿ ಹೆಚ್ಚುತ್ತಲೇ ಬಂದಿರುವುದನ್ನು ಮೇಲಿನ ಅಂಕಿ ಅಂಶಗಳು ತೋರಿಸುತ್ತವೆ. 1979–80ರಲ್ಲಿಯೂ ಒಟ್ಟು 3,521,000 ಟನ್ನುಗಳ ನೈಟ್ರೊಜಿನಸ್ ಗೊಬ್ಬರದಲ್ಲಿ 1,295,000 ಟನ್ನುಗಳನ್ನೂ 9,94,000 ಟನ್ನುಗಳ ಫಾಸ್‌ಫಾಟಿಕ್ ಗೊಬ್ಬರದಲ್ಲಿ 2,37,000 ಟನ್ನುಗಳನ್ನೂ ಆಮದು ಮಾಡಿಕೊಳ್ಳಲಾಯಿತು. ರಾಸಾಯನಿಕ ಗೊಬ್ಬರದ ವಿತರಣೆಗೂ, ಇದನ್ನು ಉಪಯೋಗಿಸುವ ವಿಧಾನ ಕುರಿತ ತಿಳಿವಳಿಕೆಯನ್ನು ಕೃಷಿಕರಿಗೆ ನೀಡುವುದಕ್ಕೆ ಸರ್ಕಾರವು ಸೂಕ್ತವಾದ ಏರ್ಪಾಡುಗಳನ್ನು ಮಾಡಿದೆ. ಮೇಲೆ ಹೇಳಿದಂತೆ ರಾಸಾಯನಿಕ ಗೊಬ್ಬರದ ಸರಬರಾಯಿ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವುದಾದರೂ ಒಟ್ಟಿನಲ್ಲಿ ಹೇಳುವುದಾದರೆ ದೇಶದಲ್ಲಿ ಇದರ ಬಳಕೆಯು ಇನ್ನೂ ಅತ್ಯಲ್ಪ ಪ್ರಮಾಣದ್ದಾಗಿದೆ. ಸರಾಸರಿ ಲೆಕ್ಕದಲ್ಲಿ 1968 ರಲ್ಲಿ ಪ್ರಪಂಚದ ಕೃಷಿಕರು ಉಪಯೋಗಿಸುತ್ತಿದ್ದ ರಾಸಾಯನಿಕ ಗೊಬ್ಬರವು ಹೆಕ್ಟೇರು ಒಂದಕ್ಕೆ 24.11 ಕಿ. ಗ್ರಾ. ಜಪಾನೀ ಕೃಷಿಕರು ಉಪಯೋಗಿಸುತ್ತಿದ್ದುದು 197·68 ಕಿ. ಗ್ರಾ. ಗಳು ಆಗಿದ್ದಿತಾದರೂ ಭಾರತದಲ್ಲಿ ಹೆಕ್ಟೇರು ಒಂದಕ್ಕೆ ಕೇವಲ 3.46 ಕಿ. ಗ್ರಾ. ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಲಾಗುತ್ತಿದ್ದಿತು.[1] ಆದರೆ ನೀರಾವರಿ ಹರಡಿದಂತೆ ರಾಸಾಯನಿಕ ಗೊಬ್ಬರದ ಉಪಯೋಗವೂ ಹೆಚ್ಚುತ್ತಾ ಬಂದಿದೆ. 1980ರಿಂದ ಈಚಿನ ವರ್ಷಗಳಲ್ಲಿ ಇದು ಹೆಕ್ಟೇರು ಒಂದಕ್ಕೆ 33 ಕಿ. ಗ್ರಾ. ಗಳಷ್ಟಿದೆ.

ಕೇವಲ ರಾಸಾಯನಿಕ ಗೊಬ್ಬರದ ಬಳಕೆಯನ್ನು ವಿಸ್ತರಿಸುವುದೇ ಭಾರತದ ಯೋಜನೆಗಳ ಗುರಿ ಆಗಿಲ್ಲ. ನಾಡಗೊಬ್ಬರದ ಪ್ರಯೋಜನವನ್ನೂ ಅರಿತು ಇದರ ಸೂಕ್ತ ಬಳಕೆಗೆ ಕಾರ್ಯಕ್ರಮಗಳನ್ನೂ ಅವು ರಚಿಸಿವೆ. ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ನಾಡ ಗೊಬ್ಬರ ತಯಾರಿಕೆಗೆ ಇರುವ ಅವಕಾಶಗಳನ್ನು ಉಪಯೋಗಿಸುವ ಕಾರ್ಯಕ್ರಮಗಳನ್ನು ರೂಪಿಸಿವೆ. ರಾಸಾಯನಿಕ ಗೊಬ್ಬರ ಉಪಯೋಗಿಸುವ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ಇಲ್ಲಿ ಗಮನಿಸಬಹುದು. ರಾಸಾಯನಿಕ ಗೊಬ್ಬರದಿಂದ ದೀರ್ಘ ಕಾಲಾವಧಿಯಲ್ಲಿ ಭೂಮಿಯ ಸ್ವಾಭಾವಿಕ ಫಲವತ್ತತೆ ಇಂಗುವುದೆಂಬ ಅಭಿಪ್ರಾಯವನ್ನು ಕೆಲವರು ಮಂಡಿಸಿರುತ್ತಾರೆ. ಇದರಿಂದ ಈ ವಿಧದ ಗೊಬ್ಬರ ಉಪಯೋಗಿಸುವುದನ್ನು ಅವರು ವಿರೋಧಿಸಿರುತ್ತಾರೆ. ನಾಡಗೊಬ್ಬರದ ಬಳಕೆಯು

1. Surinder P.S. Prathi, "Stress on Private Enterpreneurship" in Vadilal Dagli, Foundations of Indian Agriculture Vora & Co., 1968, p. 207.

ದಲೇ ಉತ್ತಮ ಫಸಲನ್ನು ಪಡೆಯುವುದು ಸಾಧ್ಯ ಎಂಬುದನ್ನು **ಷುಮೇಕರ್** ಎಂಬ ಪ್ರಸಿದ್ಧ ತಜ್ಞನು ಹೇಳಿರುತ್ತಾನೆ. ಅವನು ಹೇಳಿರುವಂತೆ "ರಾಸಾಯನಿಕ ಗೊಬ್ಬರವನ್ನು ಉಪಯೋಗಿಸದೆ ಹಾಗೂ ಇವರ ಬಳಕೆಯಿಂದ ಭೂಮಿಯ ಸಾರಕ್ಕೆ ಹಾನಿ ಇರುವ ಬಗ್ಗೆ ಶಂಕೆಗೆ ಅವಕಾಶ ಕೊಡದೆ ಅತ್ಯುತ್ತಮ ಇಳುವರಿಯನ್ನು ಪಡೆದಿರುವ ಅತ್ಯಂತ ಯಶಸ್ವಿ ಕೃಷಿಕರು ಅನೇಕ ದೇಶಗಳಲ್ಲಿ ಇರುತ್ತಾರೆ.[1] ರಾಸಾಯನಿಕ ಗೊಬ್ಬರ ಪರ ವಾದಿಸಿರುವವರು ಅನೇಕ ಪಾಶ್ಚಾತ್ಯ ರಾಷ್ಟ್ರಗಳ ಹಾಗೂ ಜಪಾನಿನ ಅನುಭವಗಳನ್ನು ಉದ್ಧರಿಸಿರುತ್ತಾರೆ. ಈ ರಾಷ್ಟ್ರಗಳು ಅನೇಕ ದಶಕಗಳಿಂದ ರಾಸಾಯನಿಕ ಗೊಬ್ಬರ ಉಪಯೋಗಿಸುತ್ತಿವೆ; ಇದರಿಂದ ಉತ್ಪನ್ನತೆ ಗಣನೀಯವಾಗಿ ಹೆಚ್ಚಿದೆ ಮತ್ತು ಭೂಸಾರಕ್ಕೆ ಯಾವ ಹಾನಿಕರ ಪರಿಣಾಮವೂ ಗೋಚರಿಸಲ್ಪಟ್ಟಿಲ್ಲ ಎಂಬುದೇ ಇವರ ವಾದವಾಗಿದೆ. ಈ ಚರ್ಚೆಯ ವಿವರ ಇಲ್ಲಿ ಅಪ್ರಕೃತ. ಭಾರತದ ಯೋಜನೆಗಳು ರಾಸಾಯನಿಕ ಹಾಗೂ ನಾಡ ಗೊಬ್ಬರಗಳೆರಡರ ಬಳಕೆಯನ್ನೂ ಹೆಚ್ಚಿಸುವ ನೀತಿಯನ್ನು ಅನುಸರಿಸಿವೆ ಎಂಬುದೇ ನಾವು ಗಮನಿಸಬೇಕಾದ ವಿಷಯವಾಗಿದೆ. ಇವೆರಡು ಗೊಬ್ಬರಗಳನ್ನು ಎಲ್ಲೆಲ್ಲಿ ಯಾವ ಯಾವ ಬೆಳೆಗಳಿಗೆ ಉಪಯೋಗಿಸಿದರೆ ಅತ್ಯುತ್ತಮ ಫಲ ಹಾಗೂ ಪರಿಣಾಮ ದೊರಕುವುದು ಎಂಬ ತಾಂತ್ರಿಕ ಆಯ್ಕೆಯ ಸಮಸ್ಯೆ ಬಗ್ಗೆ ಸೂಕ್ಷ್ಮ ಅಧ್ಯಯನ ನಡೆಯಬೇಕಾಗಿದೆ.

ಕೃಷಿ ಕಾರ್ಯ ನಿರ್ವಹಣೆಯ ನವೀಕರಣವಲ್ಲಿ 'ಶಕ್ತಿಮಾನ್ ಬೀಜ'ದ ಉಪಯೋಗಿಸುವಿಕೆಗೆ ಭಾರತದ ಯೋಜನೆಗಳಲ್ಲಿ ಪ್ರಾಶಸ್ತ್ಯ ನೀಡಲಾಗಿದೆ. ಕೃಷಿಗೆ ನಿಗದಿಮಾಡಲಾದ ಯೋಜನಾ ವೆಚ್ಚದ ಒಂದು ಭಾಗವನ್ನು ಶಕ್ತಿಮಾನ್ ಬೀಜಗಳ ಸಂಶೋಧನೆಗೂ, ತೀರ್ಮಾನಿಸಲಾದ ವಿವಿಧ ಶಕ್ತಿಮಾನ್ ಬೀಜಗಳನ್ನು ಉತ್ಪಾದಿಸಲು ಕೆಲವು ಕೇಂದ್ರ ಜಮೀನುಗಳಿಗೂ ಮತ್ತು ವಿವಿಧ ಸ್ಥಳಗಳಲ್ಲಿ ಇದೇ ವಿವಿಧ ಬೀಜಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸಲೂ ವೆಚ್ಚ ಮಾಡಲಾಗಿದೆ. ರಾಷ್ಟ್ರೀಯ ಬೀಜಗಳ ನಿಗಮವೊಂದನ್ನು 1963 ರಲ್ಲಿ ಸ್ಥಾಪಿಸಲಾಯಿತು. ಶಕ್ತಿಮಾನ್ ಬೀಜಗಳ ಉತ್ಪಾದನೆ ಈ ಸಂಸ್ಥೆಯ ಹೊಣೆಯಾಗಿದೆ. ಭಾರತೀಯ ಕೃಷಿ ಸಂಶೋಧನೆಯ ಸಂಸ್ಥೆ ಹಾಗೂ ಅನೇಕ ಕೃಷಿ ಸಂಶೋಧನಾ ಸಂಸ್ಥೆಗಳು ಶಕ್ತಿಮಾನ್ ಬೀಜಗಳ ಸಂಶೋಧನಾ ಕಾರ್ಯದಲ್ಲಿ ತೊಡಗಿವೆ. ಕೃಷಿಕರಿಗೆ ಉತ್ತಮವಾದ ಬೀಜಗಳನ್ನು ಒದಗಿಸುವ ಕಾರ್ಯವನ್ನು ಬಿರುಸುಗೊಳಿಸುವ ಉದ್ದೇಶದಿಂದ 'ರಾಷ್ಟ್ರೀಯ ಬೀಜಗಳ ಪ್ರಾಯೋಜನೆಗಳು' ಎಂಬ ಹೊಸ ಕಾರ್ಯಕ್ರಮವನ್ನು ಐದನೆ ಯೋಜನೆ

1. Schumacher, E. F., **"Small is Beautiful"** p. 147.

ಯಲ್ಲಿ ರೂಪಿಸಲಾಯಿತು. ಇದರ ಪ್ರಕಾರ ಅನೇಕ ಸಂಸ್ಥಾನಗಳಲ್ಲಿ 'ರಾಜ್ಯ ಬೀಜಗಳ ನಿಗಮ' ಗಳನ್ನು ಸ್ಥಾಪಿಸಲಾಯಿತು. ಹನ್ನೆರಡು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ 'ಬೀಜ ತಾಂತ್ರಿಕತೆ ಘಟಕ' ಗಳನ್ನು ಸ್ಥಾಪಿಸಲಾಯಿತು. ಶಕ್ತಿಮಾನ್ ಬೀಜದ ವಿಷಯದಲ್ಲಿ ಹಿಂದುಳಿದಿದ್ದ ದ್ವಿದಳ ಧಾನ್ಯಗಳು ಮತ್ತು ತೈಲಬೀಜಗಳ ಬೆಳೆಗಳಿಗೆ ಹೆಚ್ಚು ಗಮನ ಕೊಡಲಾಗುತ್ತಿದೆ.

1979-80 ರ ವೇಳೆಗೆ 35.2 ದಶಲಕ್ಷ ಹೆಕ್ಟೇರುಗಳಲ್ಲಿ ಶಕ್ತಿಮಾನ್ ಬೀಜಗಳನ್ನು ಉಪಯೋಗಿಸಲಾಗುತ್ತಿತ್ತು. ಇನ್ನೂ 20.8 ದಶಲಕ್ಷ ಹೆಚ್ಚು ಹೆಕ್ಟೇರುಗಳನ್ನು ಶಕ್ತಿಮಾನ್ ಬೀಜದ ವ್ಯಾಪ್ತಿಗೆ ತರಲು ಪ್ರಸಕ್ತ ಆರನೆಯ ಯೋಜನೆಯು ಉದ್ದೇಶಿಸಿದೆ.[1] ಇವೆರಡರ ಒಟ್ಟು 56 ದಶಲಕ್ಷ ಹೆಕ್ಟೇರುಗಳಪೈಕಿ 25 ದಶಲಕ್ಷ ಹೆಕ್ಟೇರುಗಳಲ್ಲಿ ಬತ್ತ, 19 ದಶಲಕ್ಷ ಹೆಕ್ಟೇರುಗಳಲ್ಲಿ ಗೋಧಿ, 2 ದಶಲಕ್ಷ ಹೆಕ್ಟೇರುಗಳಲ್ಲಿ ಮುಸುಕಿನಜೋಳ, 5 ದಶಲಕ್ಷ ಹೆಕ್ಟೇರುಗಳಲ್ಲಿ ಜೋಳ ಮತ್ತು 5 ದಶಲಕ್ಷ ಹೆಕ್ಟೇರುಗಳಲ್ಲಿ ಸಜ್ಜೆ ಇವು ಸೇರಿವೆ.

ಬೆಳೆ ರಕ್ಷಣೆ

ಜಮೀನುಗಳಲ್ಲಿ ಬೆಳೆಯುವ ವಿವಿಧ ಬೆಳೆಗಳು ಕ್ರಿಮಿಕೀಟಗಳ ಬಾಧೆಗೆ ಒಳಗಾಗಿ ಕೊನೆಯಲ್ಲಿ ಪ್ರತಿ ಹೆಕ್ಟೇರು ಇಳುವರಿ ಕಡಮೆಯಾಗುವುದು ಭಾರತದ ಕೃಷಿಕರ ಅನುಭವವಾಗಿದೆ. ಒಂದು ಅಧ್ಯಯನದ[2] ಪ್ರಕಾರ 1976-77 ರಲ್ಲಿ ಒಟ್ಟು ಸಾಗುವಳಿಯಾದ ಜಮೀನ ಶೇಕಡಾ 19.8 ರಷ್ಟು ಭಾಗವು ಕ್ರಿಮಿಕೀಟಗಳ ಬಳಕೆಗೆ ಒಳಗಾಗಿದ್ದಿತು. ನೆಲಗಡಲೆ (ಶೇಕಡಾ 47); ಹತ್ತಿ (ಶೇಕಡಾ 28); ಬತ್ತ (ಶೇಕಡಾ 24); ಕಬ್ಬು (ಶೇಕಡಾ 25); ಇವುಗಳೇ ಅತ್ಯಂತ ಹೆಚ್ಚು ನಷ್ಟ ಅನುಭವಿಸಿದ ಬೆಳೆಗಳಾಗಿದ್ದವು. ಕ್ರಿಮಿಕೀಟಗಳ ದೆಸೆಯಿಂದ ಒಟ್ಟಿನಲ್ಲಿ ಕೃಷಿ ಉತ್ಪನ್ನವು ಶೇಕಡಾ 10–15 ರಷ್ಟಾದರೂ ಕಡಮೆಯಾಗುವುದೆಂದು ಅಂದಾಜು ಮಾಡಲಾಗಿದೆ. ಇದರಿಂದ ಪ್ರತಿವರ್ಷವೂ ಕೋಟಿಗಟ್ಟಲೆ ರೂಪಾಯಿಗಳ ಬೆಲೆಯ ಬೆಳೆಗಳು ನಷ್ಟವಾದಂತಾಗುವುದು. ಈ ವಿಧದ ನಷ್ಟವನ್ನು ತಪ್ಪಿಸಲು ಕ್ರಿಮಿಕೀಟ ನಾಶಕಗಳ ಬಳಕೆಗೆ ಕೃಷಿಕರಿಗೆ ಸಹಾಯ ಮಾಡುವುದು ಭಾರತದ ಯೋಜನೆಗಳ ಉದ್ದೇಶವಾಗಿದೆ. ದವಸಧಾನ್ಯಗಳನ್ನು ಗೋದಾಮುಗಳಲ್ಲಿ ಇಟ್ಟಾಗಲೂ ಇಲಿ, ಹೆಗ್ಗಣ ಇತ್ಯಾದಿಗಳ ಹಾವಳಿಯಿಂದ ನಷ್ಟ ಸಂಭವಿಸುವುದು. ಯೋಜನೆಗಳು ಈ ಸಮಸ್ಯೆಗೂ ಪರಿಹಾರ ಒದಗಿಸುವ ಉದ್ದೇಶ ಹೊಂದಿವೆ.

---

1. G. O. I., **Sixth Five Year Plan,** 1980-85, p. 106
2. G. O. I., **Sixth Five Year Plan,** 1980-85, p. 107

ಪ್ರಥಮ ಯೋಜನೆ ಆರಂಭವಾದಾಗ ದೇಶದಲ್ಲಿ ಕೃಷಿಕರು ಉಪಯೋಗಿಸುತ್ತಿದ್ದ ಕ್ರಿಮಿ ಕೀಟನಾಶಕಗಳ ಪ್ರಮಾಣ ಒಟ್ಟಿನಲ್ಲಿ ಕೇವಲ 100 ಟನ್ನುಗಳಷ್ಟು ಮಾತ್ರ ಇದ್ದುದು 1980-81ರಲ್ಲಿ 60,000ಟನ್ನುಗಳಷ್ಟು ಹೆಚ್ಚಿದೆ. ಇದು ಗಮನಾರ್ಹ ಪ್ರಗತಿಯೆಂದು ಕಾಣುವುದಾದರೂ ಕ್ರಿಮಿ ಕೀಟಗಳ ಸಮಸ್ಯೆಯ ಪೂರ್ಣ ಪರಿಹಾರಕ್ಕೆ ಇನ್ನೂ ಹೆಚ್ಚಿನ ಕ್ರಿಮಿಕೀಟನಾಶಕಗಳನ್ನು ಬಳಸಬೇಕಾಗಿದೆ. ಮುಂದುವರಿದ ರಾಷ್ಟ್ರಗಳೊಡನೆ ಹೋಲಿಸಿದರೆ ಭಾರತದಲ್ಲಿ ಉಪಯೋಗಿಸಲಾಗುತ್ತಿರುವ ಕ್ರಿಮಿಕೀಟನಾಶಕಗಳ ಪ್ರಮಾಣ ಅತ್ಯಲ್ಪವಾಗಿದೆ. ಇವುಗಳ ಪ್ರಮಾಣ ಹೆಕ್ಟೇರು ಒಂದಕ್ಕೆ ಜಪಾನಿನಲ್ಲಿ 10.780 ಗ್ರಾಂ.ಗಳೂ, ಯೂರೋಪಿನ ರಾಷ್ಟ್ರಗಳಲ್ಲಿ 1870 ಗ್ರಾಂ.ಗಳೂ, ಅಮೇರಿಕಾದಲ್ಲಿ 1490 ಗ್ರಾಂ. ಗಳೂ ಆಗಿರುವಾಗ ಭಾರತದಲ್ಲಿ ಇದು ಕೇವಲ 149 ಗ್ರಾಂ ಗಳಷ್ಟಿದೆ.[1]

ಕೃಷಿ ಯಂತ್ರೀಕರಣ

ಮುಂದುವರಿದ ರಾಷ್ಟ್ರಗಳ ಕೃಷಿಕಾರ್ಯ ನಿರ್ವಹಣೆಯಲ್ಲಿ ಬಹುಮಟ್ಟಿಗೆ ಯಂತ್ರಗಳ ಬಳಕೆ ರೂಢಿಗೆ ಬಂದಿರುವುದರಿಂದ ಕೃಷಿ ನವೀಕರಣದಲ್ಲಿ ಯಂತ್ರೀಕರಣ ಅವಶ್ಯಕ ಎಂಬ ಒಂದು ಭಾವನೆ ಬೆಳೆದು ಬಂದಿದೆ. ಆದರೆ ಯಂತ್ರೀಕರಣವು ಅನೇಕ ರೂಪಗಳನ್ನು ತಾಳಿರುವುದರಿಂದ ಯಾವ ಮಾದರಿಯ ಯಂತ್ರೀಕರಣವು ಭಾರತದ ಭೂಸ್ಥಿತಿಗತಿಗಳಿಗೆ ಹೊಂದಿಕೊಳ್ಳುವುದು ಎಂಬುದರ ಬಗ್ಗೆ ನಿರ್ದಿಷ್ಟವಾದ ಅಂತಿಮ ನಿರ್ಣಯ ಉಂಟಾಗಿಲ್ಲ. ಅಲ್ಲದೆ ಹೆಚ್ಚಾಗಿ ಕಾರ್ಮಿಕ ಬಲ ಪ್ರಯೋಗದಿಂದಲೇ ಸಾಂದ್ರ ಬೇಸಾಯ ನಡೆಸಬಹುದೆಂಬ-ಅಂದರೆ ಯಂತ್ರೀಕರಣ ಆದಷ್ಟು ಕಡಿಮೆ ಮಾಡಬಹುದೆಂಬ ಅಭಿಪ್ರಾಯವೂ ಇದೆ. ಆದರೆ ಮೊದಲನೆಯ ಮತ್ತು ಎರಡನೆಯ ಯೋಜನೆಗಳಲ್ಲಿ ಕೃಷಿ ಯಂತ್ರೀಕರಣಕ್ಕೂ, ಸುಧಾರಿತ ಕೃಷಿ ಉಪಕರಣಗಳಿಗೂ ವಿಶೇಷ ಗಮನ ನೀಡಲಿಲ್ಲ. ಮೂರನೆಯ ಯೋಜನೆಯ ಕಾಲದಿಂದ ಸುಧಾರಿತ ಕೃಷಿ ಉಪಕರಣಗಳ ಬಳಕೆಯನ್ನು ಉತ್ತೇಜಿಸುವುದಕ್ಕೂ ಕೆಲವು ಕಡೆ ಕೃಷಿ ಕಾರ್ಯ ನಿರ್ವಹಣೆಯಲ್ಲಿ ಯಂತ್ರಗಳ ಬಳಕೆಗೂ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.[1] ಅಂದಿನಿಂದ ಭಾರತದ ಯೋಜನೆಗಳು ಅತ್ಯಾಧುನಿಕ ಕೃಷಿ ಯಂತ್ರಗಳಾದ ಟ್ರ್ಯಾಕ್ಟರುಗಳು, ಪವರ್‌ಟಿಲ್ಲರ್‌ಗಳು, ಹಾರ್ವೆಸ್ಟರುಗಳು, ಪವರ್‌ಸ್ಪ್ರೇಯರ್‌ಗಳು, ಥ್ರೆಷರ್‌ಗಳು ಇತ್ಯಾದಿ ಶ್ರಮ

1. J.S. Verma, "Weapons for Judicious Use", in Vadilal Dagli, Op. Cit., p. 230

ಉಳಿಸುವ ಯಂತ್ರಗಳ ಬಳಕೆಗೆ ಉತ್ತೇಜನ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಇದರ ಜೊತೆಗೆಯೇ ಸಾಂಪ್ರದಾಯಿಕ ನೇಗಿಲಿನಂತಹ ಉಪಕರಣಗಳನ್ನು ಉತ್ತಮ ಗೊಳಿಸುವ ಹಾಗೂ ಎತ್ತುಗಳ ಶಕ್ತಿಯ ಬಳಕೆಯನ್ನು ಹೆಚ್ಚು ದಕ್ಷಗೊಳಿಸುವ ಕಾರ್ಯ ಕ್ರಮಗಳನ್ನೂ ರೂಪಿಸಿವೆ. ಇಳುವರಿ ಹೆಚ್ಚುವರಿ, ಉತ್ಪಾದನಾ ವೆಚ್ಚ, ಉದ್ಯೋಗಾ ವಕಾಶ, ಸಾಮಾಜಿಕ ಪರಿಣಾಮಗಳು ಇತ್ಯಾದಿ ವಿವಿಧ ದೃಷ್ಟಿಗಳಿಂದ ಮೇಲಿನ ಎರಡು ವಿಧದ ಉತ್ಪಾದನಾ ವಿಧಾನಗಳ ಆಳವಾದ ಅಧ್ಯಯನದ ಮೇಲೆ ಇವೆರಡರ ದೀರ್ಘಾವಧಿ ಸಾಪೇಕ್ಷ ಸ್ಥಾನಗಳನ್ನು ನಿರ್ಣಯಿಸಬೇಕಾಗಿದೆ. ಈವರೆಗೆ ಎರಡೂ ಮಾರ್ಗಗಳಲ್ಲಿಯೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಟ್ರ್ಯಾಕ್ಟರು ಗಳು ಮತ್ತು ಪವರ್‌ಟಿಲ್ಲರುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ; ಇದು ಬೃಹತ್ ಪ್ರಮಾಣದ ಯಂತ್ರೀಕರಣದ ಸೂಚನೆಯಂತೆ ತೋರುತ್ತದೆ. ಎಲ್ಲಾ ರಾಜ್ಯಗಳಲ್ಲಿಯೂ 1965 ರಿಂದ ಈಚೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿರುವ ಕೃಷಿ ಕೈಗಾರಿಕೆಗಳ ನಿಗಮಗಳು ಸ್ಥಾಪಿಸಲ್ಪಟ್ಟಿವೆ. ಕೃಷಿಯಂತ್ರ ಸರಬರಾಯಿ ಹಾಗೂ ಕೃಷಿಯಂತ್ರ ರಿಪೇರಿ, ಸೇವೆ ಇವು ಈ ನಿಗಮಗಳ ಮುಖ್ಯ ಕರ್ತವ್ಯಗಳಾಗಿವೆ. ಸಾಂ ಪ್ರದಾಯಿಕ ಕೃಷಿ ಉಪಕರಣಗಳನ್ನು ಉತ್ತಮಗೊಳಿಸುವುದಕಾಗಿ ಸೂಕ್ತ ಉತ್ಪಾದನಾ ತಂತ್ರಗಳ ಸಂಶೋಧನೆಗೆ ವಿಶೇಷ ಏರ್ಪಾಡುಗಳನ್ನು ಮಾಡಲಾಗಿದೆ; ಕೃಷಿ ವಿಶ್ವ ವಿದ್ಯಾನಿಲಯಗಳು ವಿವಿಧ ಪ್ರದೇಶಗಳಿಗೆ ಅನುಗುಣವಾದ ಕೃಷಿಯಂತ್ರ ಹಾಗೂ ಉಪಕರಣಗಳ ಬಗ್ಗೆ ಸಂಶೋಧನೆ ನಡೆಸುತ್ತಿವೆ. ಖಾಸಗಿ ಇಂಜಿನಿಯರುಗಳನ್ನು ಒಳಗೊಂಡ ಕೃಷಿ-ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕೃಷಿಕರಿಗೆ ತಾಂತ್ರಿಕ ಸೇವೆಗಳನ್ನು ನೀಡುವುದೂ, ಉಪಕರಣಗಳನ್ನು ಒದಗಿಸುವುದೂ ಈ ಕೇಂದ್ರಗಳ ಕರ್ತವ್ಯವಾಗಿದೆ. 1983ರಲ್ಲಿ 3160 ಇಂತಹ ಸೇವಾ ಕೇಂದ್ರಗಳಿದ್ದವು. ಕೇಂದ್ರ ಸರ್ಕಾರವು ಕೃಷಿಯಂತ್ರ ಕುರಿತ ಪರಿಜ್ಞಾನವನ್ನು ಹೊಂದಿದ ಸಿಬ್ಬಂದಿಯನ್ನು ಒದ ಗಿಸುವ ಏರ್ಪಾಡು ಮಾಡಿದೆ. ಈ ಉದ್ದೇಶಕ್ಕಾಗಿ ಬುದ್ನಿ ಮತ್ತು ಹಿಸ್ಸಾರ್ ಎಂಬ ಎರಡು ಸ್ಥಳಗಳಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿದೆ. ವಿವಿಧ ಪ್ರದೇಶಗಳ ಅವ ಶ್ಯಕತೆಗಳನ್ನು ಈ ಸಂಸ್ಥೆಗಳು ನೋಡಿಕೊಳ್ಳುತ್ತವೆ. ನವೀನ ಉಪಕರಣಗಳನ್ನೂ, ಯಂತ್ರಗಳನ್ನೂ ಕೃಷಿಕಾರ್ಯದಲ್ಲಿ ಉಪಯೋಗಿಸುವಂತೆ ಕೃಷಿಕರನ್ನು ಪ್ರೇರೇಪಿಸುವ ಕಾರ್ಯವನ್ನೂ ಸರ್ಕಾರವು ನಿರ್ವಹಿಸುತ್ತಿದೆ. ಪೂಸದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ಸುಧಾರಿತ ಕೃಷಿ ಉಪಕರಣಗಳ ಪ್ರದರ್ಶನವನ್ನು ಏರ್ಪ ಡಿಸಿದೆ. ವಿವಿಧ ಬೆಳೆಗಳಿಗೂ, ವಿವಿಧ ಪ್ರದೇಶಗಳಿಗೂ, ವಿವಿಧ ವಿಸ್ತಾರದ ಹಿಡುವಳಿ ಗಳಿಗೂ ಮತ್ತು ಇತರ ಸ್ಥಳೀಯ ಸನ್ನಿವೇಶಗಳಿಗೂ ಅನುಗುಣವಾದ ಯಂತ್ರ ಹಾಗೂ ಉಪಕರಣಗಳ ಬಗ್ಗೆ ಇನ್ನೂ ಸೂಕ್ಷ್ಮವಾದ ಅಧ್ಯಯನ ನಡೆಯಬೇಕಾಗಿದೆ ಎಂದು ಹೇಳಬಹುದು.

ಅಧ್ಯಾಯ 7

ಕೃಷಿ ಯೋಜನೆಯ ಫಲಗಳ ಸಮೀಕ್ಷೆ

ಮೂರ ದಶಕಗಳಿಗೂ ಹೆಚ್ಚಿನ ಭಾರತದ ಕೃಷಿ ಯೋಜನೆಯು ಸಾಧಿಸಿರುವುದೇನು ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಈ ಸಾಧನೆಯ ಹಾಗೂ ಕೆಲವು ಲೋಪ ದೋಷಗಳ ಸಂಕ್ಷಿಪ್ತ ವಿವರಣೆಯನ್ನು ಈ ಅಧ್ಯಾಯದಲ್ಲಿ ಕೊಡಲಾಗುವುದು. ಕೃಷಿ ಉತ್ಪಾದನೆಯ ಹೆಚ್ಚುವರಿ ದರವು ಕೃಷಿಕ್ರಾಂತಿ ಮುನ್ನಡೆಯ ಒಂದು ಸಮಗ್ರ ಸೂಚಿಯಾಗಿದೆ. ಇತರ ಆರ್ಥಿಕ ವಲಯಗಳಿಗೆ ಹೋಲಿಸಿದಂತೆ ಕೃಷಿ ಕ್ಷೇತ್ರದಲ್ಲಿ ಆಗಿರುವ ಉತ್ಪಾದನಾ ಹೆಚ್ಚುವರಿ ವರವನ್ನು ಕೆಳಗಣ ಕೋಷ್ಟಕ 11ರಲ್ಲಿ ತೋರಿಸಲಾಗಿವೆ.

ಕೋಷ್ಟಕ 11. ರಾಷ್ಟ್ರೀಯ ಉತ್ಪನ್ನದ ಹೆಚ್ಚುವರಿ ದರ
(1961-62ರಿಂದ 1973-74ರ ಸರಾಸರಿ)

ಆರ್ಥಿಕ ವಲಯ	ವಾರ್ಷಿಕ ಹೆಚ್ಚುವರಿ ದರ
ಕೃಷಿ ಹಾಗೂ ಕೃಷಿ ಸಂಬಂಧಿ	2.07
ಗಣಿ	4.04
ಕೈಗಾರಿಕೆ	4.21
ನಿರ್ಮಾಣ	4.80
ವಿದ್ಯುಚ್ಛಕ್ತಿ, ಗ್ಯಾಸ್ ಹಾಗೂ ನೀರು ಸರಬರಾಯಿ	9.90
ರೈಲ್ವೆ	3.27
ಇತರ ಸಾರಿಗೆ	5.16
ಇತರ ಸೇವೆಗಳು	4.35
ಒಟ್ಟು	3.40

ಮೂಲ: **C.S.O. Estimates reproduced in G.O.I., Fifth Five Year Plan, p. 98**

ಇತರ ಎಲ್ಲಾ ಆರ್ಥಿಕ ಕ್ಷೇತ್ರಗಳಿಗಿಂತಲೂ ಕೃಷಿ ಕ್ಷೇತ್ರದ ವಾರ್ಷಿಕ ಉತ್ಪನ್ನ ಹೆಚ್ಚುವರಿ ದರವು ಕಡಮೆಯಾಗಿರುವುದನ್ನು ಕೋಷ್ಟಕ 11ರಲ್ಲಿ ಕಾಣಬಹುದು. ಕೃಷಿ ವಲಯದ ಶೇಕಡಾ 2ರಷ್ಟು ವಾರ್ಷಿಕ ಉತ್ಪನ್ನ ಹೆಚ್ಚುವರಿ ದರವು ಇಡೀ ಆರ್ಥಿಕತೆಯ ಶೇಕಡಾ 3.40ಯಷ್ಟು ಸರಾಸರಿ ದರಕ್ಕೂ ಕಡಮೆಯಾಗಿದೆ. ಈ ದರವು ವಾರ್ಷಿಕ ಜನಸಂಖ್ಯಾ ಹೆಚ್ಚುವರಿ ದರಕ್ಕೂ ಕಡಮೆಯಾಗಿದೆ. ಕೃಷಿ ಉತ್ಪಾದನೆಗೆ ಯೋಜನೆಗಳು ಸಾಮಾನ್ಯವಾಗಿ ಶೇಕಡಾ 5ರಷ್ಟು ವಾರ್ಷಿಕ ಹೆಚ್ಚುವರಿ ಗುರಿಯನ್ನು ಹಾಕಿಕೊಂಡಿವೆ. ಈ ಗುರಿಯ ಅರ್ಧದಷ್ಟೂ ಸಾಧನೆಯಾಗದಿರುವುದು ನಿರಾಶಾದಾಯಕ ಪ್ರಗತಿ ಎಂದು ಹೇಳಬಹುದು. ಕೋಷ್ಟಕ 11 ತೋರಿಸುವ ಪ್ರಗತಿಗಿಂತ ಇತ್ತೀಚಿನ ಪ್ರಗತಿಯನ್ನು ಗಮನಿಸಿದಾಗಸಹ ಕೃಷಿ ಅಭಿವೃದ್ಧಿ ಮಂದಗತಿಯಲ್ಲಿ ಸಾಗುತ್ತಿದೆ ಎಂದು ಹೇಳಬಹುದು. 1967-68 ರಿಂದ 1978-79ರ ಅವಧಿಯ ಸರಾಸರಿ ವಾರ್ಷಿಕ ಕೃಷಿ ಉತ್ಪಾದನಾ ಹೆಚ್ಚುವರಿ ದರವು ಶೇಕಡಾ 2.8ರಷ್ಟು ಆಗಿದ್ದಿತು.[1] ತಜ್ಞರ ಅಭಿಪ್ರಾಯದ ಪ್ರಕಾರ ಭಾರತದ ಕೃಷಿ ಉತ್ಪಾದನೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವ ಸಾಧ್ಯತೆ ಇದೆ. ಉದಾಹರಣೆಗೆ ಧಾನ್ಯಗಳ ಉತ್ಪಾದನೆ ವರ್ಷಕ್ಕೆ ಶೇಕಡಾ 8ರಷ್ಟು ಹೆಚ್ಚಬಲ್ಲದೆಂದು ಫೋರ್ಡ್ ಫೌಂಡೇಷನ್ ತಂಡವು ಅಂದಾಜು ಮಾಡಿದೆ. ಅಂದಮೇಲೆ ಯೋಜನೆಗಳು ಕೃಷಿ ವಲಯಕ್ಕೆ ಇನ್ನೂ ಹೆಚ್ಚಿನ ಬಂಡವಾಳವನ್ನು ಒದಗಿಸಿ ಅವಶ್ಯಕವಾದ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಪ್ರಸಕ್ತ ಆರನೆ ಯೋಜನೆಯು ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದೆ. ಇದರ ಫಲ ಕಾದು ನೋಡಬೇಕಾಗಿದೆ.

ಕೆಲವು ಬೆಳೆಗಳ ಉತ್ಪನ್ನದ ಒಲವುಗಳು

ಎಲ್ಲಾ ಬೆಳೆಗಳ ಒಟ್ಟು ಉತ್ಪನ್ನವು ಒಂದೇ ಪ್ರಕಾರವಾಗಿ ಹೆಚ್ಚಿರುವುದಿಲ್ಲವೆಂಬುದನ್ನು ಕೋಷ್ಟಕ 12ರಲ್ಲಿ ತೋರಿಸಿದೆ. ಆಹಾರ ಬೆಳೆಗಳ ಉತ್ಪನ್ನವು 1950-51 ಮತ್ತು 1980-81ರ ಅವಧಿಯಲ್ಲಿ ಸುಮಾರು 55 ದಶಲಕ್ಷ ಟನ್ನುಗಳಿಂದ ಸುಮಾರು 130 ದಶಲಕ್ಷ ಟನ್ನುಗಳಿಗೆ ಹೆಚ್ಚಿರುವುದು ಗಮನಾರ್ಹ ಪ್ರಗತಿ ಎಂದು ತೋರಬಹುದಾದರೂ, ಹೆಚ್ಚುವರಿಯು ಯೋಜಿತ ಗುರಿಗಳಿಗಿಂತ ತುಂಬ ಕಡಮೆಯಾಗಿದೆ. ಧಾನ್ಯಗಳ ಉತ್ಪನ್ನ ಈ ಅವಧಿಯಲ್ಲಿ ಸುಮಾರು ಎರಡೂವರೆಯಷ್ಟು ಹೆಚ್ಚಿರುವುದಾದರೂ, ದ್ವಿದಳಧಾನ್ಯಗಳ ಉತ್ಪನ್ನ ಹೆಚ್ಚುಕಡಮೆ ಸ್ಥಗಿತವಾಗಿರುತ್ತದೆ. ಆಹಾರೇತರ ಬೆಳೆಗಳ ಉತ್ಪನ್ನಗಳಲ್ಲಿಯೂ ಒಟ್ಟಿನಲ್ಲಿ ಎರಡರಷ್ಟು ಹೆಚ್ಚಿರುವುದಾದರೂ

1. G.O.I., Sixth Five Year Plan, p. 97

ಕೋಷ್ಟಕ 12. ಕೆಲವು ಮುಖ್ಯ ಬೆಳೆಗಳ ಉತ್ಪಾದನಾ ಒಲವುಗಳು

(ದಶಲಕ್ಷ ಯೂನಿಟ್ಟುಗಳಲ್ಲಿ)

ಬೆಳೆಗಳು/ಗುಂಪುಗಳು	1950-51	1955-56	1960-61	1971-72	1980-81	1983-84
1. ಆಹಾರ ಬೆಳೆಗಳು (ಟನ್ನುಗಳಲ್ಲಿ)	54.92	69.34	82.33	105.17	129.87	151.54
ಅ) ಧಾನ್ಯಗಳು ,,	45.74	57.63	69.59	94.07	118.70	138.89
ಆ) ದ್ವಿದಳ ಧಾನ್ಯಗಳು ,,	9.18	11.71	12.73	11.09	11.17	12.65
2. ಆಹಾರೇತರ ಬೆಳೆಗಳು ,,						
ಅ) ಎಣ್ಣೆ ಬೀಜಗಳು ,,	5.09	5.[illegible]0	6.87	8.75	8.34	12.81
ಆ) ಕಬ್ಬು (ಗರ್‌ರೂಪದಲ್ಲಿ),,	6.92	7.43	11.41	11.63	15.40	–
ಇ) ಹತ್ತಿ (ದಶಲಕ್ಷ ಬೇಲುಗಳಲ್ಲಿ)	2.90	4.22	5.55	6.95	7.60	6.58
ಈ) ಸೆಣಬು ,, ,,	3.51	4.47	4.14	5.68	6.52	7.41

ಮೂಲ : G.O.I., Economic Survey, 1969-70, p. 67.
G.O.I., Economic Survey, 1981-82, p. 75.
G.O.I., Economic Survey, 1984-85, p. 6.

ಇವುಗಳ ಉತ್ಪನ್ನವೂ ಯೋಜಿತ ಗುರಿಗಳಿಗಿಂತ ತುಂಬ ಕಡಮೆಯಾಗಿದೆ. ಯೋಜನೆಗಳು ಕೃಷಿ ಉತ್ಪಾದನೆ ಹೆಚ್ಚಿಸಲು ಮಾಡಿರುವ ಪ್ರೆಚ್ಚಕ್ಕೆ ಅನುಗುಣವಾಗಿ ಕೃಷಿ ಉತ್ಪನ್ನ ಹೆಚ್ಚಿದೆ ಎಂದು ಹೇಳಲಾಗುವುದಿಲ್ಲ. ಅನೇಕ ಕೃಷಿಬೆಳೆಗಳ ಉತ್ಪನ್ನವು ವರ್ಷ ವರ್ಷಕ್ಕೆ ಏಕಪ್ರಕಾರವಾಗಿ ಏರುತ್ತಾ ಬಂದಿಲ್ಲವೆಂಬ ಅಂಶವು ವರ್ಷ ವರ್ಷದ ಕೋಷ್ಟಕಗಳಿಂದ ವ್ಯಕ್ತವಾಗುವುದು.[1] ಇದು ಕೃಷಿ ಉದ್ಯಮದ ಅಸ್ಥಿಮಿತತೆಯನ್ನು ತೋರಿಸುತ್ತದೆ. ಬೆಳವಣಿಗೆಯ ಪಥದಲ್ಲಿ ಈ ವಿಧದ ಅಸ್ಥಿಮಿತತೆ ಇರುವುದು ಒಂದು ದೋಷವಾಗಿದೆ. ಯೋಜನೆಗಳು ಈ ದೋಷವನ್ನು ನಿವಾರಿಸಬೇಕಾಗಿದೆ,

ಕೃಷಿ ಭೂಮಿಯ ವಿಸ್ತೀರ್ಣ, ಉತ್ಪನ್ನ ಮತ್ತು ಉತ್ಪನ್ನತೆ

ಕೃಷಿ ಉತ್ಪಾದನೆಯಲ್ಲಿ ಮೇಲೆ ಹೇಳಿರುವಂತೆ ಉಂಟಾಗಿರುವ ಹೆಚ್ಚುವರಿಗೆ ಕೃಷಿ ಭೂಮಿಯ ವಿಸ್ತೀರ್ಣ ಮತ್ತು ಉತ್ಪನ್ನತೆ ಹೆಚ್ಚುವರಿ ಇವೆರಡೂ ಕಾರಣವಾಗಿವೆ. ಈ ಎರಡು ಚಲನಾಂಶಗಳೊಳಗೆ ಇರುವ ಪರಸ್ಪರ ಸಂಬಂಧವನ್ನು ಕೋಷ್ಟಕ 13ರಲ್ಲಿ ತೋರಿಸಿದೆ.

ಸಾಗುವಳಿಯಾದ ಭೂ ವಿಸ್ತೀರ್ಣ ಹಾಗೂ ಉತ್ಪನ್ನತೆ ಇವುಗಳು 1951ರಿಂದ ಈಚೆಗೆ ಕೃಷಿ ಉತ್ಪನ್ನದ ಹೆಚ್ಚುವರಿಗ ಎಷ್ಟುಮಟ್ಟಿಗೆ ಕಾರಣವಾಗಿವೆ ಎಂಬುದರ ಸ್ಥೂಲ ಚಿತ್ರವನ್ನು ಕೋಷ್ಟಕ 12ರಲ್ಲಿ ತೋರಿಸಲಾಗಿದೆ.[2] ಯೋಜನೆಯ ಮೊದಲನೆಯ ದಶಕದಲ್ಲಿ ಫಲಿಸಿದ ಶೇಕಡಾ 42.4 ರಷ್ಟು ಕೃಷಿ ಉತ್ಪನ್ನ ಹೆಚ್ಚುವರಿಯು ಸಾಗುವಳಿ ಭೂ ವಿಸ್ತೀರ್ಣದಲ್ಲಿ ಶೇಕಡಾ 21.2 ರಷ್ಟು ಹೆಚ್ಚುವರಿಯಿಂದಲೂ ಉತ್ಪನ್ನತೆಯಲ್ಲಿ ಶೇಕಡಾ 17.5ರಷ್ಟು ಹೆಚ್ಚುವರಿಯಿಂದಲೂ ಉಂಟಾಯಿತೆಂಬುದನ್ನು ಕೋಷ್ಟಕದ ಅಂಕಿ ಅಂಶಗಳು ತೋರಿಸುವುವು. ಯೋಜನೆಯ ಎರಡನೆಯ ದಶಕದಲ್ಲಿ ಕೃಷಿ ಉತ್ಪನ್ನ ಹೆಚ್ಚುವರಿ ದರವು ಮೊದಲನೆಯ ದಶಕಕ್ಕಿಂತಲೂ ತುಂಬ ಕಡಮೆಯಾಗಿದ್ದು ಶೇಕಡಾ 28.4 ರಷ್ಟು ಮಾತ್ರವಾಗಿದ್ದಿತು. ಈ ಹೆಚ್ಚುವರಿಗೆ ಭೂ ವಿಸ್ತೀರ್ಣ ಹೆಚ್ಚುವರಿಯು ಕೇವಲ ಶೇಕಡಾ 6ರಷ್ಟು ಮಾತ್ರವೂ ಉತ್ಪನ್ನತೆಯ ಹೆಚ್ಚುವರಿಯು ಶೇಕಡಾ 17ರಷ್ಟೂ ಕಾರಣವಾಗಿದ್ದವು. 1971ರ ತರುವಾಯ ಕೃಷಿ

---

1. G.O.I., Economic Survey, 1969-70, p. 67.
   G.O.I., Economic Survey 1981-82, p. 75
2. ಒಂದೊಂದು ಬೆಳೆಯ ಬಗ್ಗೆಯೂ ವಿಸ್ತೀರ್ಣ, ಉತ್ಪನ್ನತೆ ಇವುಗಳೊಳಗೆ ಇರುವ ಸಂಬಂಧವನ್ನು 4ನೇ ಪಂಚವಾರ್ಷಿಕ ಯೋಜನೆಯ 117ನೇ ಪುಟದಲ್ಲಿ ಕೊಡಲಾಗಿದೆ.

ಉತ್ಪನ್ನ ಹೆಚ್ಚುವರಿದರವು ಇನ್ನೂ ಕಡಮೆಯಾಗಿ 1971-72ರಿಂದ 1975–76ರ ಅವಧಿಯಲ್ಲಿ ಕೇವಲ ಸುಮಾರು ಶೇಕಡಾ 8ರಷ್ಟು ಮಾತ್ರ ಹೆಚ್ಚಿದೆ. ಈ ಅವಧಿಯಲ್ಲಿ ಸಾಗುವಳಿ ಭೂವಿಸ್ತೀರ್ಣವು ಕೇವಲ ಶೇಕಡಾ 13ರಷ್ಟು ಹೆಚ್ಚಿದೆ. 1975–76 ರಿಂದ 1980–81ರ ಅವಧಿಯಲ್ಲಿ ಕೃಷಿ ಉತ್ಪನ್ನ ಹೆಚ್ಚುವರಿಯು ಕೇವಲ ಶೇಕಡಾ 10ರಷ್ಟು ಆಗಿದ್ದಿತು.[1] ಹೀಗೆ ಸಾಗುವಳಿ ಭೂ ವಿಸ್ತೀರ್ಣ ವಿಸ್ತರಿಸಿರುವುದರ ದರ

ಕೋಷ್ಟಕ 13. ಕೃಷಿ ಭೂಮಿಯ ವಿಸ್ತೀರ್ಣ, ಉತ್ಪನ್ನ ಹಾಗೂ ಉತ್ಪನ್ನತೆಯ ಸೂಚ್ಯಂಕಗಳು

ವರ್ಷ	ವಿಸ್ತೀರ್ಣ	ಉತ್ಪನ್ನ	ಉತ್ಪನ್ನತೆ (ಹೆಕ್ಟೇರು ಒಂದಕ್ಕೆ)
(1) ಮೂಲ ವರ್ಷ : 1949-50ರಿಂದ 1951-52ರ ಸರಾಸರಿ = 100[1]			
1951–52	101.8	100.7	98.9
1955–56	113.8	122.2	107.4
1960-61	121.2	142.14	117.5
(2) ಮೂಲ ವರ್ಷ : 1959-60ರಿಂದ 1961-62ರ ಸರಾಸರಿ = 100[2]			
1961–62	101.4	103.0	101.0
1965–66	100.9	95.8	92.2
1968–69	103.3	114.8	107.6
1970–71	107.3	131.4	118.0
(3) ಮೂಲ ವರ್ಷ : 1967-68ರಿಂದ 1969-70ರ ಸರಾಸರಿ = 100[3]			
1971–72	101.0	108.3	107.2
1973–74	101.3	107.8	106.4
1975–76	105.9	125.1	115.6
1983–84	108.2	155.8	135.7

ಮೂಲ: 1. G.O.I., Economic Survey, 1970-71, Table 1.5, p. 81.
2. G.O.I., Indian Agriculture in Brief, 14th Edn. Table 5-16, p. 112.
3. G.O.I., Economic Survey 1977-78, Table 1.4, p. 60 G.O.I., Economic Survey, 1984-85, Tables 1.6, 1.7, 1.8; pp 96-98.

1. G.O.I., Economic Survey, p. 74.

ಕಡಮೆಯಾಗಿರುವುದು. ಭಾರತದಂತಹ ಹಳೆಯ ಕೃಷಿ ರಾಷ್ಟ್ರದಲ್ಲಿ ಹೆಚ್ಚು ಹೆಚ್ಚು ಭೂಮಿಯನ್ನು ಕೃಷಿ ಯೋಗ್ಯಗೊಳಿಸುವುದರಲ್ಲಿ ಇರುವ ಕಷ್ಟವನ್ನು ಸೂಚಿಸುವುದೆಂದು ತಿಳಿಯಬಹುದು. ಆದರೆ ಉತ್ಪನ್ನತೆ ಹೆಚ್ಚುವರಿದರ ಇಳುವರಿಯಾಗಿರುವುದು ಯೋಜನೆಗಳ ಲೋಪದೋಷಗಳನ್ನು ಸೂಚಿಸುವುದೆಂದು ಹೇಳಬಹುದು; ಏಕೆಂದರೆ ತಜ್ಞರ ಅಭಿಪ್ರಾಯದಂತೆ ಕೃಷಿ ಉತ್ಪನ್ನತೆ ಹೆಚ್ಚಿಸಲು ಇನ್ನೂ ತುಂಬ ಅವಕಾಶವಿದೆ.

ಆರ್ಥಿಕತೆಯ ಮೂಲ ರಚನೆ ಮತ್ತು ಯೋಜನೆಗಳು

ದೇಶದ ಆರ್ಥಿಕತೆಯ ಮೂಲ ರಚನೆಯನ್ನು ಆಧುನಿಕ ಮಾದರಿಗೆ ಪರಿವರ್ತಿಸುವುದು ಯೋಜನೆಗಳ ಒಂದು ಮುಖ್ಯ ಪರಿಣಾಮವಾಗಬೇಕಾಗಿರುವುದರಿಂದ ಈ ಪರಿವರ್ತನೆಯು ದಾರಿಯಲ್ಲಿ ಈ ಮೂರು ದಶಕಗಳಲ್ಲಿ ಆರ್ಥಿಕತೆಯು ಯಾವ ರೀತಿಯಲ್ಲಿ ಸಾಗಿದೆ ಎಂಬುದರ ವಿವೇಚನೆಯು ಯೋಜನೆಗಳ ತುಲನೆಯ ಒಂದು ಅಂಶವಾಗಿರುವುದು.

ಕೋಷ್ಟಕ 14. ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನದ ಶೇಕಡಾ ಭಾಗ

ವರ್ಷ	ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನದ ಶೇಕಡಾ ಭಾಗ (ಪ್ರಸಕ್ತ ಬೆಲೆಗಳಲ್ಲಿ)
1948–49	49.1
1960–61	51.2
1965–66	49.0
1970–71	47.6
1974–75	48.8

ಮೂಲ : C.S.O., National Accounts Statistics 1960-61-1974-75, Table 4.1, p. 12
G.O.I., Economic Survey, 1969-70, Table 1.3, p.63

ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನದ ಸಾಪೇಕ್ಷ ಶೇಕಡಾ ಭಾಗ ಕಡಮೆಯಾಗುವುದು ಮತ್ತು ಒಟ್ಟು ಕಾರ್ಮಿಕರ ಬಲದಲ್ಲಿ ಕೃಷಿಉದ್ಯಮದಲ್ಲಿ ನಿರತರಾಗಿರು

ವವರ ಶೇಕಡಾ ಭಾಗ ಕಡಮೆಯಾಗುವುದು ಆರ್ಥಿಕತೆಯ ಮೂಲ ರಚನೆಯ ನವೀನೀಕರಣದ ಮುಖ್ಯ ಚಿಹ್ನೆಗಳಾಗಿವೆ. ಈ ದೃಷ್ಟಿಯಿಂದ ನೋಡಿದರೆ ಯೋಜನೆಗಳು ಆರ್ಥಿಕತೆಯ ಮೂಲ ರಚನೆಯ ಮೇಲೆ ಗಮನಾರ್ಹವಾದ ಪ್ರಭಾವ ಬೀರಿಲ್ಲವೆಂಬುದು ವ್ಯಕ್ತವಾಗುವುದು. ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಹಾಗೂ ಕೃಷಿ ಸಂಬಂಧಿ ಉದ್ಯಮಗಳ ಉತ್ಪನ್ನದ ಶೇಕಡಾ ಭಾಗವನ್ನು ಕೋಷ್ಟಕ 14ರ ಅಂಕಿ-ಅಂಶಗಳು ತೋರಿಸುತ್ತವೆ.

ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನದ ಶೇಕಡಾ ಭಾಗವು ಯೋಜನೆಗೆ ಮುಂಚೆ 1948-49ರಲ್ಲಿ 49.1 ಇದ್ದುದು ಯೋಜನೆ ಆರಂಭವಾಗಿ ಎರಡೂವರೆ ದಶಕಗಳಾದರೂ ಹೆಚ್ಚು ಬದಲಾವಣೆ ಇಲ್ಲದೆ 1974–75 ರಲ್ಲಿಯೂ ಶೇಕಡಾ 48.8 ರಷ್ಟು ಇದ್ದಿತೆಂಬುದನ್ನು ಕೋಷ್ಟಕ 14ರ ಅಂಕಿ-ಅಂಶಗಳು ತೋರಿಸುತ್ತವೆ.

ಒಟ್ಟು ಕಾರ್ಮಿಕ ಬಲದಲ್ಲಿ ಕೃಷಿ ಉದ್ಯಮದಲ್ಲಿ ನಿರತರಾಗಿದ್ದವರ ಶೇಕಡಾ ಭಾಗವು ಯೋಜನೆಗೆ ಮುಂಚೆಯೂ 73 ರಷ್ಟು ಇದ್ದುದು ಮೂರು ದಶಕಗಳ ಯೋಜನೆಯ ನಂತರವೂ ಇಷ್ಟೇ ಶೇಕಡಾಭಾಗ ಇದೆ. ಪಾಕಿಸ್ತಾನ, ಚೀನಾ, ಬಂಗ್ಲಾದೇಶ, ಇಂಡೋನೇಷಿಯಾಗಳೂ ಸೇರಿ 63 ಏಷ್ಯಾ ರಾಷ್ಟ್ರಗಳಲ್ಲಿ ಈ ಶೇಕಡಾಭಾಗವು ಗಮನಾರ್ಹವಾಗಿ ಇಳುವರಿಯಾಗಿದೆ.[1] ಹೀಗೆ ಈ ಶೇಕಡಾ ಭಾಗ ಇಳುವರಿಯಾಗುವುದು ಮುಂದುವರಿದಿರುವ ಎಲ್ಲಾ ರಾಷ್ಟ್ರಗಳ ಅನುಭವವೂ ಆಗಿದೆ. ಭಾರತದಲ್ಲಿಯೂ ಮೂರನೆಯ ಯೋಜನೆಯು 1965-66ರ ವೇಳೆಗೆ ಒಟ್ಟು ಕಾರ್ಮಿಕರ ಬಲದಲ್ಲಿ ಕೃಷಿ ಉದ್ಯಮದಲ್ಲಿ ನಿರತರಾದ-ಕಾರ್ಮಿಕರ ಶೇಕಡಾಭಾಗವನ್ನು 60ಕ್ಕೆ ಇಳಿಸುವ ಗುರಿ ಹೊಂದಿದ್ದಿತು. ಆದರೆ ಮೇಲೆ ಹೇಳಿದಂತೆ ಈ ಶೇಕಡಾ ಭಾಗದಲ್ಲಿ ಏನೂ ಬದಲಾವಣೆ ಆಗಿರುವುದಿಲ್ಲ.

ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನದ ಸಾಪೇಕ್ಷ ಶೇಕಡಾಭಾಗ ಇಳುವರಿ ಮತ್ತು ಒಟ್ಟು ಕಾರ್ಮಿಕ ಬಲದಲ್ಲಿ ಕೃಷಿ ನಿರತ ಕಾರ್ಮಿಕ ಬಲದ ಶೇಕಡಾ ಭಾಗ ಇಳುವರಿ ಈ ಎರಡು ಮೂಲ ಆರ್ಥಿಕ ರಚನೆಯ ಪರಿವರ್ತನೆಯ ಚಿಹ್ನೆಗಳೂ ಕಾಣದಿರುವುದರಿಂದ ಭಾರತದ ಆರ್ಥಿಕತೆಯ ಮೂಲ ರಚನೆಯು ಮೊದಲಿನಂತೆಯೇ ಇದೆ ಎಂದು ಹೇಳಬಹುದಾಗಿದೆ. ಅಂದ ಮೇಲೆ ಯೋಜನೆಗಳು ಈ ರಚನೆಯ ಮೇಲೆ ಪರಿಣಾಮ ಹೊಂದಿಲ್ಲವೆಂದಂತಾಗಿದೆ.

1. G.O.I., Draft Five Year Plan, 1978-83, Vol. II, p.012.

ಕೃಷಿ ಅಭಿವೃದ್ಧಿ ಹಾಗೂ ಅನುಭೋಗ ಮಟ್ಟಗಳು

ಜನರ ಅನುಭೋಗಕ್ಕೆ ಹೆಚ್ಚು ಆಹಾರವನ್ನೂ, ಕೈಗಾರಿಕೆಗಳಿಗೆ ಹೆಚ್ಚು ಕಚ್ಚಾ ಸರಕುಗಳನ್ನೂ ಒದಗಿಸುವುದು ಯೋಜನೆಗಳ ಯಶಸ್ಸನ್ನು ಅಳೆಯುವ ಇನ್ನೊಂದು ಮುಖ್ಯ ಅಂಶವಾಗಿದೆ. ಕೆಲವು ಮುಖ್ಯ ಕೃಷಿ ಸರಕುಗಳ ತಲಾ ಲಭ್ಯತೆಯನ್ನು ಕೋಷ್ಟಕ 15 ತೋರಿಸುವುದು.

ಜನತೆಯ ಅನುಭೋಗಕ್ಕೆ ಸೇರುವ ಎಲ್ಲಾ ಸರಕುಗಳನ್ನು ಕೋಷ್ಟಕ 15 ತೋರಿಸುವುದಿಲ್ಲವಾದರೂ, ಕೆಲವು ಮುಖ್ಯ ಸರಕುಗಳ ಲಭ್ಯತೆ ಯೋಜಿತ ಪ್ರಗತಿಯಿಂದ ಹೇಗೆ ವ್ಯತ್ಯಾಸವಾಗಿದೆ ಎಂಬುದನ್ನು ತೋರಿಸುತ್ತದೆ. ಸರಾಸರಿ ಲೆಕ್ಕದಲ್ಲಿ ತಲಾ ಒಬ್ಬರಿಗೆ ದೊರಕುವ ಧಾನ್ಯಗಳು, ಖಾದ್ಯತೈಲ, ಸಕ್ಕರೆ, ಟೀ, ಇತ್ಯಾದಿಗಳು ಗಮನಾರ್ಹ ಹೆಚ್ಚುವರಿಯನ್ನು ತೋರಿಸಿವೆ. ಆದರೆ ಬೇಳೆಗಳ ಲಭ್ಯತೆ ಗಣನೀಯ ಪ್ರಮಾಣದ ಇಳುವರಿಯಾಗಿರುವುದೂ ವನಸ್ಪತಿ, ಕಾಫಿ, ಹತ್ತಿ ಬಟ್ಟೆ ಇವುಗಳ ಲಭ್ಯತೆಯಲ್ಲಿ ಹೆಚ್ಚುವರಿಯಾಗದಿರುವುದೂ ಕೃಷಿ ಯೋಜನೆಯ ಒಂದು ಮುಖ್ಯ ಲೋಪ ದೋಷವನ್ನು ಸೂಚಿಸುವುದೆಂದು ಹೇಳಬಹುದು. ವಿವರವಾಗಿ ಎಲ್ಲಾ ಸರಕುಗಳ ಆಂತರಿಕ ಲಭ್ಯತೆಯಲ್ಲಿ-ಆಮದು ಹೊರತು-ವರ್ಷ ವರ್ಷಕ್ಕೆ ಆಗಿರುವ ವ್ಯತ್ಯಾಸಗಳನ್ನು ಗಮನಿಸಿದರೆ[1] ಒಟ್ಟಿನಲ್ಲಿ ಕೃಷಿ ಸರಕುಗಳ ಲಭ್ಯತೆ ತೀವ್ರ ಏರು ಪೇರುಗಳಿಗೆ ಒಳಗಾಗಿರುವುದು ಕಾಣಬರುವುದು.

ಕೃಷಿ ಸರಕುಗಳ ಸ್ವಸಂಪೂರ್ಣತೆ ಮತ್ತು ವಿದೇಶೀ ವ್ಯಾಪಾರ

ಯೋಜನಾ ಅವಧಿಯಲ್ಲಿ ಅನೇಕ ವರ್ಷಗಳಿಂದ ಭಾರತವು ಆಹಾರ ಸರಕುಗಳನ್ನೂ ಕಚ್ಚಾ ಸರಕುಗಳನ್ನೂ ಆಮದು ಮಾಡಿಕೊಳ್ಳಬೇಕಾಗಿ ಬಂದಿದೆ. ಹೀಗೆ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಿ ಅಥವಾ ಗಣನೀಯವಾಗಿ ಕಡಮೆ ಮಾಡಿ, ದೇಶವು ಕೃಷಿ ಸರಕುಗಳ ಬಗ್ಗೆ ಸ್ವಸಂಪೂರ್ಣತೆ ಪಡೆಯುವಂತೆ ಆಗಬೇಕೆಂಬುದು ಕೃಷಿ ಯೋಜನೆಯ ಒಂದು ಮುಖ್ಯ ಉದ್ದೇಶವಾಗಿದೆ. ಕೃಷಿ ಸರಕುಗಳ ರಫ್ತನ್ನು ಹೆಚ್ಚಿಸುವುದೂ ಇನ್ನೊಂದು ಉದ್ದೇಶವಾಗಿದೆ. ಈ ಉದ್ದೇಶಗಳು ಸಫಲವಾಗಿವೆಯೇ ಎಂಬುದರ ಸ್ಥೂಲ ವಿವೇಚನೆಯನ್ನು ಇಲ್ಲಿ ಮಾಡಲಾಗುವುದು.

ಕೃಷಿ ಸರಕುಗಳ ಆಮದು ಹಾಗೂ ರಫ್ತು ವ್ಯಾಪಾರದ ಸಮಗ್ರ ಚಿತ್ರವನ್ನು ಕೋಷ್ಟಕ 16ರಲ್ಲಿ ತೋರಿಸಿದೆ.

---

1 G. O. I. Economic Survey 1881-82, pp. 74-75 and 84

ಕೋಷ್ಟಕ 15. ಕೆಲವು ಮುಖ್ಯ ಸರಕುಗಳ ಲಭ್ಯತೆಯ ಮೇಲೆ ಯೋಜಿತ ಪ್ರಗತಿಯ ಪರಿಣಾಮ

ಸರಕುಗಳು	1951	1956	1961	1966	1969	1974	1981
ಧಾನ್ಯಗಳು (ದಿನಒಂದಕ್ಕೆ ಗ್ರಾಂಗಳಲ್ಲಿ)	330.5	360.5	398.7	360.0	397.9	411.6	420.4
ಬೇಳೆಗಳು (,,)	60.5	70.4	69.0	48.2	47.3	40.9	39.1
ಖಾದ್ಯತೈಲಗಳು (ಕಿ. ಗ್ರಾಂಗಳಲ್ಲಿ)	2.7	2.5	3.2	2.7	2.6	3.4	4.1
ವನಸ್ಪತಿ (,,)		0.7	0.8	0.8	0.9	0.8	1.1
ಸಕ್ಕರೆ (,,)	3.0	5 0	4.7	5.7	5.0	6.0	7.5
ಟೀ (ಗ್ರಾಂ ಗಳಲ್ಲಿ)		257.0	287	337.0	353.0	421.0	539.0
ಕಾಫಿ (,,)	51.0	67.0	80.0	70.0	75.0	64.0	58.0
ಹತ್ತಿಬಟ್ಟೆ (ಮೀಟರ್‌ಗಳಲ್ಲಿ)	11.4	14.4	13,8	14,7	14.4	12.0	11.2

ಮೂಲ : G.O.I., Economic Survey, 1969-70, pp. 72 and 74.
G.O.I., Economic Survey, 1977-78, pp. 68 and 70.
G.O.I., Economic Survey, 1981-82, pp. 84 and 86.

ಕೋಷ್ಟಕ 16. ಕೃಷಿ ಸರಕುಗಳ ಆಮದು ಮತ್ತು ರಫ್ತುಗಳ ಮೌಲ್ಯದ ವಾರ್ಷಿಕ ಸರಾಸರಿ (ಕೋಟಿ ರೂಪಾಯಿಗಳಲ್ಲಿ)

ಯೋಜನಾ ಅವಧಿ	ಕೃಷಿ ಸರಕುಗಳ ರಫ್ತು	ಕೃಷಿ ಸರಕುಗಳ ಆಮದು
ಮೊದಲನೆ ಯೋಜನೆ	218.2 (37.0)	208.4 (30.8)
ಎರಡನೆ ಯೋಜನೆ	251.3 (41.2)	262.1 (26.6)
ಮೂರನೆ ಯೋಜನೆ	305.4 (40.1)	381.4 (30.7)
ಮೂರು ವಾರ್ಷಿಕ ಯೋಜನೆಗಳು	429.5 (34.7)	842.5 (42.5)
ನಾಲ್ಕನೆ ಯೋಜನೆ	537.6 (29.7)	477.4 (24.2)

(ವಿ.ಸೂ: ಒಟ್ಟು ರಫ್ತುಗಳ ಮೌಲ್ಯ ಮತ್ತು ಒಟ್ಟು ಆಮದುಗಳ ಮೌಲ್ಯದಲ್ಲಿ ಕೃಷಿ ಸರಕುಗಳ ರಫ್ತು ಹಾಗೂ ಆಮದಿನ ಮೌಲ್ಯದ ಶೇಕಡಾ ಭಾಗವನ್ನು ಕಂಸದಲ್ಲಿರುವ ಅಂಕಿಗಳು ಸೂಚಿಸುವುವು).

ಮೂಲ: **Monthly Statistics of Foreign Trade of India, D.G.C.I.S., Calcutta.**

ಕೋಷ್ಟಕ 16ರಿಂದ ಈ ಅಂಶಗಳು ವ್ಯಕ್ತವಾಗುವುವು: (1) ಮೊದಲನೆಯ ಮತ್ತು ಎರಡನೆಯ ಯೋಜನೆಗಳ ಅವಧಿಯಲ್ಲಿ ಕೃಷಿ ಸರಕುಗಳ ಆಮದು ಹಾಗೂ ರಫ್ತು ವ್ಯಾಪಾರದ ಮೌಲ್ಯ ಹೆಚ್ಚು ಕಡಮೆ ಸಮನಾಗಿರುವುದು; ಮೂರನೆ ಯೋಜನೆ ಮತ್ತು ಮೂರು ವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೃಷಿ ಆಮದುಗಳ ಮೌಲ್ಯ ರಫ್ತುಗಳ ಮೌಲ್ಯಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ; ಮತ್ತು ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಕೃಷಿ ರಫ್ತುಗಳ ಮೌಲ್ಯವು ಆಮದುಗಳ ಮೌಲ್ಯಕ್ಕಿಂತ ಹೆಚ್ಚಾಗಿಗಿರುತ್ತದೆ. (2) ಮೂರು ವಾರ್ಷಿಕ ಯೋಜನೆಗಳ ಅವಧಿಯನ್ನು ಬಿಟ್ಟರೆ ಒಂದು ಯೋಜನಾ ಅವಧಿಯಿಂದ ಅದರ ಮುಂದಿನ ಯೋಜನಾ ಅವಧಿಯಲ್ಲಿ ಕೃಷಿ ಆಮದು ಹಾಗೂ ರಫ್ತುಗಳ ಮೌಲ್ಯ ಹೆಚ್ಚುವರಿಯಾಗಿರುತ್ತದೆ. ಇವಕ್ಕೆ ಬೆಲೆ ಹೆಚ್ಚುವರಿ ಒಂದು ಕಾರಣವಾಗಿದೆ. (3) ಮೂರು ವಾರ್ಷಿಕ ಯೋಜನೆಗಳ ಅವಧಿಯು ಹೊರತು ಇತರ ಯೋಜನಾ ಅವಧಿಗಳಲ್ಲಿ ಒಟ್ಟು ರಫ್ತು ಮೌಲ್ಯದಲ್ಲಿ ಕೃಷಿ ರಫ್ತುಗಳ ಮೌಲ್ಯದ ಶೇಕಡಾ

ಭಾಗವು ಒಟ್ಟು ಆಮದುಗಳ ಮೌಲ್ಯದಲ್ಲಿ ಕೃಷಿ ಆಮದುಗಳ ಮೌಲ್ಯದ ಶೇಕಡಾ ಭಾಗಕ್ಕಿಂತ ಹೆಚ್ಚಾಗಿದೆ. ಆಂದಮೇಲೆ, ಒಟ್ಟಿನಲ್ಲಿ ಕೃಷಿ ಸರಕುಗಳ ಪ್ರಾಮುಖ್ಯ ಆಮದು ವ್ಯಾಪಾರಕ್ಕಿಂತಲೂ ರಫ್ತು ವ್ಯಾಪಾರದಲ್ಲಿ ಹೆಚ್ಚಾಗಿದೆ ಎಂದು ಹೇಳಬಹುದು.(4) ಕೃಷಿ ಸರಕುಗಳ ವಿದೇಶೀ ವ್ಯಾಪಾರದಿಂದ ದೇಶಕ್ಕೆ ಲಭಿಸಿದ ನಿವ್ವಳ ವಿದೇಶೀ ವಿನಿಮಯ ಕೇವಲ ಅಲ್ಪವಾಗಿದ್ದಿತು. ಮೊದಲನೆ ಯೋಜನೆಯಲ್ಲಿ ಇದರ ಕೊಡುಗೆ ವರ್ಷಕ್ಕೆ ಕೇವಲ 10 ಕೋಟಿ ರೂಪಾಯಿಗಳೂ, ನಾಲ್ಕನೆ ಯೋಜನೆಯಲ್ಲಿ ವರ್ಷಕ್ಕೆ 60 ಕೋಟಿ ರೂಪಾಯಿಗಳೂ ಆಗಿದ್ದಿತು. 1966–67ರಿಂದ 1968-69 ರ ಅವಧಿಯಲ್ಲಿ ವರ್ಷಕ್ಕೆ 413 ಕೋಟಿ ರೂಪಾಯಿಗಳ ಕೊರತೆಯೂ, ಮೂರನೆ ಯೋಜನೆಯಲ್ಲಿ ವರ್ಷಕ್ಕೆ 76 ಕೋಟಿ ರೂಪಾಯಿಗಳ ಕೊರತೆಯೂ ಸಂಭವಿಸಿತು; ಇಷ್ಟು ಪ್ರಮಾಣದ ನಿವ್ವಳ ಆಮದು ಹೆಚ್ಚುವರಿಯು ದೇಶದ ಲೇಣೆ–ದೇಣೆ ವ್ಯವಹಾರದಲ್ಲಿ ಅತೀವ ಭಾರವಾಗಿದ್ದಿತು. ಈ ಪರಿಣಾಮವು ಯೋಜಿತ ಉದ್ದೇಶದ ವಿಫಲತೆಯನ್ನು ಸೂಚಿಸುವುದು. ಆಂದಮೇಲೆ ಸಾಧಿಸಲಾಗಿರುವ ಕೃಷಿ ಅಭಿವೃದ್ಧಿಯು ದೇಶದ ಕೃಷಿ ಸರಕುಗಳ ಬೇಡಿಕೆಯ ಪೂರೈಕೆಗೆ ಸಾಲದಾಯಿತು ಎಂದು ಹೇಳಬಹುದು. 1950–51 ರಿಂದ 1974–75ರ ಅವಧಿಯಲ್ಲಿ ದೇಶವು ಮಾಡಿಕೊಂಡ ಕೃಷಿ ಸರಕುಗಳ ಆಮದಿನಲ್ಲಿ ಶೇಕಡಾ 55ರಷ್ಟು ಧಾನ್ಯಗಳೂ, ಶೇಕಡಾ 15ರಷ್ಟು ಕಚ್ಚಾ ಹತ್ತಿಯೂ, ಶೇಕಡಾ 14ರಷ್ಟು ರಾಸಾಯನಿಕ ಗೊಬ್ಬರವೂ ಆಗಿದ್ದಿತು. ದೇಶದಲ್ಲಿ ಇವುಗಳ ಉತ್ಪಾದನೆ ಹೆಚ್ಚಿಸಿ ಆಮದು ಅವಲಂಬನೆ ಕಡಮೆಮಾಡುವುದು ಇಂದಿನ ಹಾಗೂ ಬರಲಿರುವ ಯೋಜನೆಗಳು ಸಾಧಿಸಬೇಕಾದ ಕಾರ್ಯವಾಗಿದೆ.

ಅಧ್ಯಾಯ 8

ಕೃಷಿ ಸರಕುಗಳ ಬೆಲೆಗಳು ಮತ್ತು ಯೋಜನೆ

'ಸ್ಥಿಮಿತಯುತ ಬೆಳವಣಿಗೆ' ಭಾರತದ ಯೋಜನೆಗಳು ಸಾರುತ್ತಲೇ ಬಂದಿರುವ ಘೋಷಣೆಯಾಗಿದೆ. ಬೆಲೆಗಳು ಮಿತಿಮೀರಿ ಏರದಿರುವುದೇ ಸ್ಥಿಮಿತತೆ, ಕೃಷಿ ಬೆಲೆಗಳ ಯೋಜಿತ ನೀತಿಯ ಉದ್ದೇಶಗಳು ಕೃಷಿ ಬೆಲೆಗಳ ಸ್ಥಿಮಿತತೆಗೂ, ಬೆಲೆಗಳ ವಿಷಯದಲ್ಲಿ ಕೃಷಿಕರ ಹಾಗೂ ಅನುಭೋಗಿಗಳ ಹಿತಾಸಕ್ತಿಗಳ ರಕ್ಷಣೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳು, ಇತರ ಬೆಲೆಗಳಿಗೆ ಸಾಪೇಕ್ಷವಾಗಿ ಕೃಷಿಸರಕುಗಳ ಬೆಲೆಗಳು ಚಲಿಸಿರುವ ಒಲವುಗಳು-ಇವುಗಳ ಸಂಕ್ಷಿಪ್ತ ವಿವರಣೆ ಈ ಅಧ್ಯಾಯದ ಉದ್ದೇಶವಾಗಿದೆ.

ಯೋಜಿತ ಬೆಲೆ ನೀತಿಯ ಉದ್ದೇಶಗಳು

ಭಾರತದ ಯೋಜನೆಗಳು ಘೋಷಿಸಿರುವ ಬೆಲೆನೀತಿಯ ಉದ್ದೇಶಗಳು ಈ ಮುಂದಿನಂತಿವೆ : (1) ಏರುತ್ತಿರುವ ಬೆಲೆಗಳನ್ನು ಗಮನಿಸಿ 'ಬೆಲೆಗಳ ಸಾಮಾನ್ಯ ಮಟ್ಟ ಇನ್ನೂ ಹೆಚ್ಚು ಏರುವುದನ್ನು' ತಡೆಗಟ್ಟುವುದು.[1] (2) ಯೋಜನೆಗಳಲ್ಲಿ ಹಾಕಿಕೊಳ್ಳಲಾಗಿರುವ ಉತ್ಪಾದನಾ ಸಾಧನೆಗಳ ವಿತರಣೆಗೆ ಅನುಕೂಲಕರವಾದ ಬೆಲೆಗಳ ರಚನೆಯನ್ನು ಕಾಪಾಡಿಕೊಂಡು ಬರುವುದು.[2] (3) ಆಹಾರ ಧಾನ್ಯಗಳು, ಕಚ್ಚಾ ಸಾಮಗ್ರಿಗಳು ಮತ್ತು ಇಂತಹ ಇತರ ಉತ್ಪಾದನಾ ವಿಭಾಗಗಳಲ್ಲಿ ನಿರತರಾಗಿರುವ ಉತ್ಪಾದಕರಿಗೆ ಅವರ ಉತ್ಪಾದನಾ ಕಾರ್ಯ ನಿರ್ವಹಣೆಗೆ ಸರಿಯಾದ ಪ್ರೇರಣೆ ಹಾಗೂ ಉತ್ತೇಜನವಾಗುವಂತೆ ಇವುಗಳ ಬೆಲೆಗಳಲ್ಲಿ ಅನುಗುಣ ಸಾಪೇಕ್ಷ ಸಂಬಂಧವಿರುವುದನ್ನು ನೋಡಿಕೊಳ್ಳುವುದು. ಈ ಉದ್ದೇಶವನ್ನು ಎಲ್ಲಾ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಹೇಳಲಾಗಿದೆ. (4) ಮುಖ್ಯವಾಗಿ ಕಡಮೆ ವರಮಾನವುಳ್ಳ ವರ್ಗದವರ ಅನುಭೋಗಕ್ಕೆ ಅವಶ್ಯಕವಾದ ಸರಕುಗಳ ಬೆಲೆಗಳು ಅತಿಯಾಗಿ ಹೆಚ್ಚದಂತೆ ನೋಡಿ

---

1. G.O.I., The First Five Year Plan, p. 28
   G.O.I., The Third Five Year Plan, p. 119
2. G.O.I., The First Five Year Plan, Vol. I. Ch. II. p. 5
   The Third Five Year Plan, p. 119

ಕೊಳ್ಳುವುದು; ಅನುಭೋಗಿಗಳ ಹಿತಾಸಕ್ತಿ ಕುರಿತ ಈ ಉದ್ದೇಶವನ್ನು ಎಲ್ಲಾ ಪಂಚ ವಾರ್ಷಿಕ ಯೋಜನೆಗಳಲ್ಲಿಯೂ ಹೇಳಲಾಗಿದೆ. ಕೃಷಿ ಸರಕುಗಳ ಬಗ್ಗೆ ಸರ್ಕಾರದ ಉದ್ದೇಶಗಳು ಮುಖ್ಯವಾಗಿ ಎರಡು: ಕೃಷಿಕರಿಗೆ ಯೋಗ್ಯಬೆಲೆ ದೊರಕುವಂತೆ ಮಾಡುವುದು ಮತ್ತು ಅನುಭೋಗಿಗಳಿಗೆ ನ್ಯಾಯಬೆಲೆಯಲ್ಲಿ ಆಹಾರ ಧಾನ್ಯಗಳು ಲಭಿಸುವಂತೆ ಮಾಡುವುದು. ಬೆಲೆಗಳ ಸಾಮಾನ್ಯ ಮಟ್ಟ, ಕೃಷಿ ಬೆಲೆಗಳು ಮತ್ತು ವಿವಿಧ ಸರಕುಗಳ ಸಾಪೇಕ್ಷ ಬೆಲೆಗಳಿಗೆ ಸಂಬಂಧಿಸಿದ ಈ ವಿವಿಧ ಉದ್ದೇಶಗಳು ಮೊದಲನೆಯ ಅಧ್ಯಾಯದಲ್ಲಿ ವಿವರಿಸಲಾದ ಯೋಜನೆಗಳ ಸಾಮಾನ್ಯ ಉದ್ದೇಶಗಳ ಸಾಧನೆಗೆ ಅವಶ್ಯಕ ಎಂಬುದನ್ನು ಇಲ್ಲಿ ಗಮನಿಸಬೇಕು.

ಕೃಷಿ ಸರಕುಗಳ ಸಾಪೇಕ್ಷ ಬೆಲೆಗಳ ಸಮಸ್ಯೆಯನ್ನು ಎದುರಿಸುವಾಗ ಯೋಜನಾಕಾರರು ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕಾಗುವುದು. ಶೀಘ್ರ ಆರ್ಥಿಕಾಭಿವೃದ್ಧಿಯೋಜನೆ ಬೆಲೆಗಳ ಸಾಮಾನ್ಯ ಮಟ್ಟ ಏರುವುದು ಒಂದು ಅನುಭವವೇದ್ಯ ವಿಷಯವಾಗಿದೆ. ಹೀಗೆ ಬೆಲೆಗಳ ಸಾಮಾನ್ಯ ಮಟ್ಟ ಏರಿಕೆಯಾದಾಗ ವಿವಿಧ ಸರಕುಗಳ ಬೆಲೆಗಳು ವಿವಿಧ ರೀತಿಯಲ್ಲಿ ಚಲಿಸಿ ಬೆಲೆಗಳ ರಚನೆಯು ವಿರೂಪಗೊಳ್ಳುವುದು. ಇದರಿಂದ ವರಮಾನ ಹಂಚಿಕೆಯು ನ್ಯಾಯಬದ್ಧ ಮಾರ್ಗ ತಪ್ಪಿದಂತಾಗುವುದಲ್ಲದೆ, ಉತ್ಪಾದನಾ ಸಾಧನಗಳ ಹಂಚಿಕೆಯ ಸಮಸ್ಯೆಯನ್ನೂ ಕ್ಲಿಷ್ಟಗೊಳಿಸುವುದು.

ಅಭಿವೃದ್ಧಿಯೊಡನೆ ಉತ್ಪನ್ನತೆಯು ಹೆಚ್ಚುವುದು ಹಾಗೂ ವಾಸ್ತವ ಉತ್ಪಾದನಾ ವೆಚ್ಚ ಕಡಮೆಯಾಗುವುದು. ಒಂದು ನಿರ್ದಿಷ್ಟ ವರ್ಷದ ಬೆಲೆಗಳ ಆಧಾರದ ಮೇಲೆ ಬೆಲೆ ಸೂಚ್ಯಂಕಗಳನ್ನು (Price indices) ರಚಿಸಿದರೆ ಇವುಗಳ ಪ್ರಕಾರ ಉತ್ಪಾದನಾ ವೆಚ್ಚ ಕಡಮೆಯಾದುದಕ್ಕೆ ಅನುಗುಣವಾಗಿ ಬೆಲೆಗಳು ಕಡಮೆಯಾಗಬೇಕು. ಅಂದಮೇಲೆ ವಿವಿಧ ಕೃಷಿ ಬೆಳೆಗಳ ವಾಸ್ತವ ಉತ್ಪಾದನಾ ವೆಚ್ಚ ಎಷ್ಟೆಷ್ಟು ಕಡಮೆಯಾಗಿದೆ ಎಂಬುದರ ಸೂಕ್ಷ್ಮ ಅಧ್ಯಯನದ ಆಧಾರದ ಮೇಲೆ ಈ ಸರಕುಗಳ ಸಾಪೇಕ್ಷ ಬೆಲೆಗಳ ನಿರ್ಣಯವಾಗಬೇಕಾಗುವುದು.

ಕೃಷಿ ಬೆಲೆಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳುವಾಗ ಆರ್ಥಿಕಾಭಿವೃದ್ಧಿಯು ಬೆಲೆಗಳ ಮೇಲೆ ಉಂಟುಮಾಡಬಹುದಾದ ಮೇಲಿನ ಎರಡು ವಿಧದ ಪರಿಣಾಮಗಳನ್ನು ಯೋಜನಾಕಾರರು ಗಮನಿಸಬೇಕಾಗುವುದು.

ಬೆಲೆ ನಿಯಂತ್ರಣ ಸಾಧನಗಳು

ಯೋಜನಾ ಅವಧಿಯಲ್ಲಿ ಕೃಷಿಸರಕುಗಳ ಬೆಲೆಗಳ ನಿಯಂತ್ರಣಕ್ಕೆ ಸರ್ಕಾರವು ಪ್ರಯೋಗಿಸಿರುವ ವಿವಿಧ ಯೋಜಿತ ಸಾಧನಗಳನ್ನು ಸಂಗ್ರಹಿಸಿ ಇವುಗಳನ್ನು ಈ ರೀತಿ ಪಟ್ಟಿಮಾಡಬಹುದು : (1) ಬೆಳೆಯುವವರಿಂದ ಧಾನ್ಯ ಸಂಗ್ರಹಣ ಮಾಡುವುದರ ಮೂಲಕ ಸರ್ಕಾರದ ವಶಕ್ಕೆ ಉತ್ಪನ್ನದ ಒಂದು ಭಾಗವನ್ನು ತೆಗೆದು ಕೊಳ್ಳುವುದು (2) ದವಸ ಧಾನ್ಯಗಳ ಕಾಪುದಾಸ್ತಾನು ಇಡುವುದು. (3) ಪಡಿತರ ಪದ್ಧತಿಯ ಮೂಲಕ ಜನತೆಗೆ ನ್ಯಾಯ ಬೆಲೆಯಲ್ಲಿ ಆಹಾರ ಧಾನ್ಯ ಒದಗಿಸುವುದು (4) ಕೃಷಿಸರಕುಗಳ ಸಗಟು ವ್ಯಾಪಾರಿಗಳಿಗೆ ಕೆಲವು ಷರತ್ತುಗಳಿಗೆ ಒಳಪಟ್ಟು ರಹದಾರಿ ನೀಡುವುದು. (5) ದೇಶವನ್ನು ವಲಯಗಳಾಗಿ ವಿಭಾಗಿಸಿ ನಿರ್ದಿಷ್ಟ ಸರಕುಗಳ ಅಂತರವಲಯ ಚಲನೆಯನ್ನು ನಿಯಂತ್ರಿಸುವುದು. (6) ಅವಶ್ಯಕವಾದಾಗ ಅಂತರರಾಜ್ಯ ಹಾಗೂ ಅಂತರ ಜಿಲ್ಲಾ ಚಲನೆಯನ್ನು ನಿರ್ಬಂಧಿಸುವುದು. (7) ದವಸ ಧಾನ್ಯಗಳ ಬಗ್ಗೆ ರಾಜ್ಯಗಳ ಹೆಚ್ಚಳ-ಕೊರತೆಗಳನ್ನೂ, ಒಟ್ಟಾರೆ ರಾಷ್ಟ್ರದ ಕೊರತೆ ಪರಿಸ್ಥಿತಿಯನ್ನೂ ತಿಳಿಯಲು ರಾಷ್ಟ್ರೀಯ ಆಹಾರ ಬಜೆಟ್ಟನ್ನು ಸಿದ್ಧಪಡಿಸುವುದು (8) ಯಾವುದೇ ಸರಕಿನಲ್ಲಿ ಇರುವ ಕೊರತೆ ಭರ್ತಿಗಾಗಿ ಆಮದು ಮಾಡಿಕೊಳ್ಳುವ ಏರ್ಪಾಡು ಮಾಡುವುದು. (9) ಸಹಕಾರಿ ಕೃಷಿ ಮಾರಾಟ ಸಂಸ್ಥೆಗಳನ್ನು ಅಭಿವೃದ್ಧಿ ಗೊಳಿಸುವುದರ ಮೂಲಕ ಖಾಸಗಿ ವ್ಯಾಪಾರಿಗಳ ಹಾಗೂ ದಲ್ಲಾಳಿಗಳ ಅನೀತಿಯುತ ವ್ಯವಹಾರಗಳನ್ನೂ, ಬಡರೈತರ ಶೋಷಣೆಯನ್ನೂ ತಪ್ಪಿಸುವುದು. (10) ಸರ್ಕಾರದ ಖಜಾನೆ ನೀತಿ ಮತ್ತು ಬ್ಯಾಂಕುಗಳ ಸಾಲನೀತಿಗಳ ಮೂಲಕ ಕೃಷಿ ಬೆಲೆಗಳ ಮೇಲೆ ಉಪಯುಕ್ತ ಪ್ರಭಾವ ಬೀರುವುದು (11) ಬೆಳೆಯುವವರಿಗೆ ಕನಿಷ್ಟ ಬೆಂಬಲ ಬೆಲೆಗಳ ಭರವಸೆ ನೀಡುವುದು (12) ಮುಂದೂಡಿದ ವ್ಯಾಪಾರವನ್ನು ಸೂಕ್ತ ರೀತಿಯಲ್ಲಿ ಕ್ರಮಗೊಳಿಸುವುದು (13) ನೇರವಾಗಿ ಬೆಲೆಗಳನ್ನು ನಿಗದಿಮಾಡುವುದು.

ಮೇಲೆ ಹೇಳಿರುವ ವಿವಿಧ ಸಾಧನಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂದರ್ಭೋಚಿತವಾಗಿ ಉಪಯೋಗಿಸಿವೆ. ಯೋಜನಾ ಅವಧಿಯಲ್ಲಿ ವಿವಿಧ ಕೃಷಿ ಸರಕುಗಳ ಬಗ್ಗೆ ಈ ಸಾಧನಗಳನ್ನು ಇವು ಹೇಗೆ ಪ್ರಯೋಗಿಸಿವೆ ಎಂಬುದರ ವಿವರಣೆ ಪ್ರಕೃತ ಗ್ರಂಥದ ವ್ಯಾಪ್ತಿಗೆ ಮೀರಿದುದು. ಆದರೆ ಕೆಲವು ಸಾಮಾನ್ಯ ಅಂಶಗಳನ್ನು ಇಲ್ಲಿ ಗಮನಿಸಬಹುದು. ದವಸ ಧಾನ್ಯಗಳ ಬಗ್ಗೆ ಸಂಗ್ರಹಣೆ, ಕಾಪು ದಾಸ್ತಾನು, ಆಮದು ಹಾಗೂ ಪಡಿತರ ಪದ್ಧತಿಯ ಅನುಸರಣೆಯು ಮುಖ್ಯವಾಗಿವೆ, ಸಂಗ್ರಹಣೆ ಮತ್ತು ಪಡಿತರ ಪದ್ಧತಿಯನ್ನು ಜಾರಿಗೆ ತರುವುದು ರಾಜ್ಯ ಸರ್ಕಾರಗಳ ಹೊಣೆಯಾಗಿದ್ದುದರಿಂದ ಅವುಗಳಿಗೆ ಸಂಬಂಧಪಟ್ಟ ವಿವರಗಳು ಒಂದೊಂದು ರಾಜ್ಯ

ದಲ್ಲಿ ಒಂದೊಂದು ರೀತಿ ಬೆಳೆದು ಬಂದವು.[1] ಧಾನ್ಯ ಸಂಗ್ರಹಣೆಗೆ ಇವು ಅನುಸರಿಸಿರುವ ಮಾರ್ಗಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ಕೃಷಿಕರು ಬೆಳೆಯುವ ಒಟ್ಟು ಬೆಳೆಗಳಲ್ಲಿ ಮಾರಾಟಕ್ಕೆ ಲಭ್ಯವಾಗಬಲ್ಲ ಭಾಗವೆಂದು ಅಧಿಕೃತವಾಗಿ ನಿರ್ಣಯಿಸಲಾದ ಭಾಗವನ್ನು ನಿಗದಿಯಾದ ಬೆಲೆಗೆ ಸರ್ಕಾರವು ಕೊಂಡುಕೊಳ್ಳುವುದು ಒಂದು ಮಾರ್ಗ. ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಸರ್ಕಾರವು ಕೊಳ್ಳುವುದು ಎರಡನೆಯ ಮಾರ್ಗ. ಹೆಕ್ಟೇರು ಒಂದಕ್ಕೆ ಇಂತಿಷ್ಟು ಎಂದು ಸರ್ಕಾರವು ನಿಗದಿಮಾಡುವ ಬೆಳೆಯನ್ನು 'ಲೆವಿ' ಎಂದು ಬೆಳೆಯುವವರಿಂದ ನಿಗದಿಯಾದ ಬೆಲೆಗೆ ಕೊಂಡು ಮಿಕ್ಕುದನ್ನು ಅವರು ಮುಕ್ತಮಾರುಕಟ್ಟೆಯಲ್ಲಿ ಮಾರಲು ಬಿಡುವುದು ಮೂರನೆಯ ಮಾರ್ಗ. ಮಿತರ ಪದ್ಧತಿಯು ಪ್ರಧಾನವಾಗಿ ರಾಜ್ಯ ಸರ್ಕಾರಗಳಿಗೆ ಸೇರಿದ ವಿಷಯವಾದರೂ ಕೇಂದ್ರದ ಪಾತ್ರವೂ ಪರೋಕ್ಷವಾಗಿ ಕಾಣಬರುವುದು. ಅದು ರಚಿಸಿರುವ ಅಖಿಲಭಾರತ ಮೂಲ ಯೋಜನೆಯ ಪ್ರಕಾರ ಕೆಲವು ಆದೇಶಗಳನ್ನು ರಾಜ್ಯ ಸರ್ಕಾರಗಳಿಗೆ ನೀಡುತ್ತಾ ಬಂದಿದೆ. ಅಲ್ಲದೆ, ಕೇಂದ್ರವು ಒಂದೊಂದು ಮುಖ್ಯ ಧಾನ್ಯದ ಬಗ್ಗೆಯೂ ಬೇಡಿಕೆ ಪೂರೈಕೆ ಆಧಾರದ ಮೇಲೆ ಹೆಚ್ಚಳ ಹೊಂದಿರುವ ರಾಜ್ಯಗಳು ಯಾವುವು, ಕೊರತೆ ಇರುವ ರಾಜ್ಯಗಳು ಯಾವುವು ಎಂದು ವಿಂಗಡಿಸಿ ಈ ಎರಡು ಗುಂಪಿನ ರಾಜ್ಯಗಳೊಳಗೆ ಬೇಡಿಕೆ ಪೂರೈಕೆ ಹೊಂದಾಣಿಕೆ ಮಾಡಲು ಪ್ರಯತ್ನಿಸಿದೆ. ಧಾನ್ಯಗಳ ಬಗ್ಗೆ ದೇಶವು ಹೊಂದಿರುವ ಒಟ್ಟು ಕೊರತೆಯನ್ನು ಭರ್ತಿಮಾಡಲು ಇತರ ದೇಶಗಳಿಂದ ಇವುಗಳನ್ನು ಆಮದು ಮಾಡುವ ಏರ್ಪಾಡು ಕೇಂದ್ರದ ಹೊಣೆಯಾಗಿದೆ.

ಎಣ್ಣೆ ಬೀಜಗಳ ಬೆಲೆನಿಯಂತ್ರಣಕ್ಕೆ ಸರ್ಕಾರವು ಉಪಯೋಗಿಸಿರುವ ಮುಖ್ಯ ಸಾಧನಗಳೆಂದರೆ: ಶಾಸನಬದ್ಧ ಕನಿಷ್ಟ ಹಾಗೂ ಗರಿಷ್ಟ ಬೆಲೆಗಳ ನಿಗದಿ, ಆಮದು ಹಾಗೂ ರಫ್ತುಗಳನ್ನು ಸಂದರ್ಭಾನುಸಾರವಾಗಿ ನಿರ್ಬಂಧಿಸುವುದು ಅಥವಾ ಸರಳಗೊಳಿಸುವುದು, ಸಾಲ ನೀಡಿಕೆಯನ್ನು ಮುಂದೂಡಿದ ವ್ಯಾಪಾರ ವ್ಯವಹಾರಗಳನ್ನೂ ನಿಯಂತ್ರಿಸುವುದು. ಕಬ್ಬು, ಹತ್ತಿ ಇಂತಹ ರೊಕ್ಕದ ಬೆಳೆಗಳ ಬಗ್ಗೆ ನೇರವಾಗಿ ಬೆಲೆ ನಿಗದಿಮಾಡುವ ಕ್ರಮಕ್ಕೆ ಸರ್ಕಾರವು ಪ್ರಾಮುಖ್ಯತೆ ನೀಡಿದೆ.

ಮೇಲೆ ಸಂಕ್ಷಿಪ್ತವಾಗಿ ಸೂಚಿಸಿರುವಂತೆ ವಿವಿಧ ಬೆಳೆಗಳನ್ನು ಕ್ರಮಬದ್ಧಗೊಳಿಸುವುದಕ್ಕೆ ಸರ್ಕಾರವು ಹಿಂದೆ ಪಟ್ಟಿಮಾಡಿರುವ ಸಾಧನಗಳನ್ನು ವಿವೇಚಿಸಿ ಉಪಯೋಗಿಸುತ್ತಾ ಬಂದಿದೆ. ಈ ವಿವೇಚನೆಗೆ ಸಹಾಯಕವಾಗುವಂತೆ ಸರ್ಕಾರವು ಆಗಿಂದಾಗ್ಗೆ ತಜ್ಞರ ಸಮಿತಿಗಳನ್ನು ನೇಮಿಸಿ ಅವುಗಳ ಪರಿಶೀಲನಾಯುತ ಶಿಫಾರಸುಗಳನ್ನು ಪಡೆದಿದೆ. ಕೆಲವು ಮುಖ್ಯ ತಜ್ಞ ಸಮಿತಿಗಳು ಇವು ; 1955 ರಲ್ಲಿ

1. S.C. Joseph, **Food Policy and Economic Development in India** Allied Publisers, 1961, Ch. IV.

ಅಶೋಕ್ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಆಹಾರಧಾನ್ಯಗಳ ಪರಿಶೀಲನಾ ಸಮಿತಿಯೊಂದು ನೇಮಿಸಲ್ಪಟ್ಟಿತು. 1964ರಲ್ಲಿ ಕೃಷಿ ಸರಕುಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಸೂಚಿಸಲು ಜಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. 1966ರಲ್ಲಿ ಬಿ. ವೆಂಕಟಪ್ಪಯ್ಯ ಅವರ ಅಧ್ಯಕ್ಷತೆಯಲ್ಲಿ ಆಹಾರ ಧಾನ್ಯಗಳ ನೀತಿ ಸಮಿತಿಯು ನೇಮಿಸಲ್ಪಟ್ಟಿತು. ಇವೆಲ್ಲಕ್ಕೂ ಮುಖ್ಯವಾಗಿ 1965ರಲ್ಲಿ ಕೃಷಿ ಬೆಲೆಗಳ ಆಯೋಗವನ್ನು ಸ್ಥಾಪಿಸಲಾಯಿತು. ವಿವಿಧ ಬೆಳೆಗಳ ಉತ್ಪಾದನಾ ವೆಚ್ಚ, ನೀಡಿಕೆ-ಬೇಡಿಕೆ ಪರಿಸ್ಥಿತಿಗಳು, ಇತ್ಯಾದಿ ಅಂಶಗಳೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಇವುಗಳ ನಿಯಂತ್ರಿತ ಬೆಲೆಗಳ ಬಗ್ಗೆ ಆಗಿಂದಾಗ್ಗೆ ಪರಿಶೀಲನೆ ಮಾಡುವುದು ಈ ಆಯೋಗದ ಮುಖ್ಯ ಕಾರ್ಯವಾಗಿದೆ. ಸಮತೋಲಿತ ಹಾಗೂ ಸಮಗ್ರ ಬೆಲೆಗಳ ರಚನೆಯನ್ನು ವಿಕಾಸಗೊಳಿಸುವ ಸಮಗ್ರದೃಷ್ಟಿಯಿಂದ ಕೃಷಿ ಸರಕುಗಳಿಗೆ ಸರಿಯಾದ ಬೆಲೆಗಳನ್ನು ಸೂಚಿಸಬೇಕೆಂದು ಈ ಆಯೋಗಕ್ಕೆ ಸರ್ಕಾರವು ಆದೇಶ ನೀಡಿದೆ. ಕನಿಷ್ಟ ಬೆಂಬಲ ಬೆಲೆಗಳನ್ನೂ, ಸಂಗ್ರಹಣೆಯ ಬೆಲೆಗಳನ್ನೂ ಈ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡುವುದು. ಈ ಸಮಿತಿಗಳೇ ಅಲ್ಲದೆ, ಆಹಾರ ನೀತಿಯನ್ನು ಕಾರ್ಯಗತ ಮಾಡಲು ನೆರವಾಗಲು 1965ರಲ್ಲಿ 'ಭಾರತದ ಆಹಾರ ನಿಗಮ'ವನ್ನು ಸ್ಥಾಪಿಸಲಾಯಿತು.

ಕೃಷಿಬೆಲೆಗಳ ಒಲವುಗಳು

ಯೋಜನಾ ಅವಧಿಯ ಕೃಷಿ ಬೆಲೆಗಳ ಪ್ರವೃತ್ತಿಗಳನ್ನು ವೀಕ್ಷಿಸುವಾಗ ಯೋಜನೆ ಆರಂಭವಾದಾಗ ಇದ್ದ ಬೆಲೆಗಳ ಮಟ್ಟ ಹಾಗೂ ಬೆಲೆಗಳ ರಚನೆಗಳನ್ನು ಪ್ರಥಮತಃ ಗಮನಿಸಬೇಕು. 1939ರ ಅಂದರೆ ಯುದ್ಧಪೂರ್ವದ ಸಗಟು ಬೆಲೆಗಳ ಮಟ್ಟವನ್ನು 100 ಎಂದು ಇಟ್ಟುಕೊಂಡರೆ, 1951 ಏಪ್ರಿಲ್‌ನಲ್ಲಿ ಯೋಜನೆ ಆರಂಭವಾದಾಗ ಈ ಬೆಲೆ ಮಟ್ಟದ ಸೂಚ್ಯಂಕವು 457 ಆಗಿದ್ದಿತು. ಬೆಲೆಗಳು ಹೀಗೆ ಸುಮಾರು ನಾಲ್ಕೂವರೆಯಷ್ಟು ಪಾಲು ಏರಿದ್ದುದರ ಜೊತೆಗೆ ವಿವಿಧ ಬೆಲೆಗಳ ಜೋಡಣೆಯಲ್ಲಿಯೂ 1937–39ರ ಸಾಪೇಕ್ಷ ಬೆಲೆಗಳಿಗೆ ಹೋಲಿಸಿದರೆ ಅಸಂಬದ್ಧವಾದ ರೀತಿಯಲ್ಲಿ ಏರುಪೇರುಗಳಾಗಿದ್ದವು. ಐತಿಹಾಸಿಕವಾಗಿ ಹೀಗೆ ಉಂಟಾಗಿದ್ದ ಬೆಲೆಗಳ ಪರಿಸ್ಥಿತಿಯನ್ನು ಆರಂಭ ಹಂತವಾಗಿ ಇಟ್ಟುಕೊಂಡು ಯೋಜನೆಗಳಲ್ಲಿ ಇವುಗಳ ಉದ್ದೇಶಕ್ಕೆ ಅನುಸಾರವಾಗಿ ಬೆಲೆಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಬೇಕಾಗಿದ್ದಿತು. ಯೋಜನೆ ಪ್ರಾರಂಭವಾದಾಗಿನಿಂದ ಸಾಪೇಕ್ಷ ಬೆಲೆಗಳ ಚಲನವಲನಗಳ ಮುಖ್ಯ ಅಂಶಗಳನ್ನು ಈ ಮುಂದೆ ಕೊಡಲಾಗುವುದು.

ಸಗಟು ಬೆಲೆ ಸೂಚ್ಯಂಕಗಳ ಬಗ್ಗೆ ಅಧಿಕೃತ ಅಂಕಿ ಅಂಶಗಳನ್ನು ಈ ಮುಂದಿನ ವಿಂಗಡಣೆಯ ಪ್ರಕಾರ ಕೊಡಲಾಗಿದೆ.[1] (1) ಎಲ್ಲಾ ಸರಕುಗಳು (2) ಆಹಾರ ಪದಾರ್ಥಗಳು (3) ಕೈಗಾರಿಕಾ ಕಚ್ಚಾ ಸರಕುಗಳು ಮತ್ತು (4) ಕೈಗಾರಿಕಾ ಸರಕುಗಳು 1950-51ರಿಂದ 1975-76ರ ವರೆಗಿನ ಅವಧಿಯಲ್ಲಿ ಈ ನಾಲ್ಕು ಗುಂಪಿನ ಸರಕುಗಳ ಸಗಟು ಬೆಲೆ ಸೂಚ್ಯಂಕಗಳ ಚಲನವಲನಗಳನ್ನು ಪರಿಶೀಲಿಸಿದರೆ ಈ ವಿವಿಧ ಬೆಲೆಗಳಲ್ಲಿ ಅಸಂಬದ್ಧ ಏರುಪೇರುಗಳಾಗಿರುವುದು ಕಾಣಬರುತ್ತದೆ, ಎಲ್ಲಾ ಸರಕುಗಳ ಸರಾಸರಿ ಬೆಲೆಗಳಲ್ಲಿ ಆಗಿರುವ ಏರಿಳಿತಗಳಿಗೆ ಆಹಾರ ಧಾನ್ಯಗಳ ಬೆಲೆಗಳ ಏರಿಳಿತಗಳು ಅತಿ ಮುಖ್ಯ ಕಾರಣವಾಗಿರುತ್ತವೆ. 1951-52 ರಿಂದ 1955–56 ರ ಅವಧಿಯಲ್ಲಿ ಬೆಲೆಗಳ ವಾರ್ಷಿಕ ಇಳುವರಿ ದರವು ಆಹಾರ ಸರಕುಗಳ ಬಗ್ಗೆ ಶೇಕಡಾ 5.1ರಷ್ಟು, ಕಚ್ಚಾ ಸರಕುಗಳ ಬಗ್ಗೆ ಶೇಕಡಾ 5.4ರಷ್ಟು ಆಗಿದ್ದರೆ ಕೈಗಾರಿಕಾ ಸರಕುಗಳ ಬಗ್ಗೆ ಕೇವಲ ಶೇಕಡಾ 0.7ರಷ್ಟು ಮಾತ್ರವಾಗಿದ್ದಿತು. 1955-56ರಿಂದ 1975–76ರ ಅವಧಿಯಲ್ಲಿ ಬೆಲೆಗಳ ವಾರ್ಷಿಕ ಏರಿಕೆ ದರವು ಆಹಾರ ಪದಾರ್ಥಗಳ ಬಗ್ಗೆ ಶೇಕಡಾ 8.2ರಷ್ಟು, ಕಚ್ಚಾ ಸರಕುಗಳ ಬಗ್ಗೆ ಶೇಕಡಾ 7ರಷ್ಟು ಆಗಿದ್ದರೆ, ಕೈಗಾರಿಕಾ ಸರಕುಗಳ ಬಗ್ಗೆ ಇದು ಶೇಕಡಾ 6ರಷ್ಟು ಮಾತ್ರ ಆಗಿದ್ದಿತು. ಸಾಪೇಕ್ಷ ಬೆಲೆಗಳ ಈ ಮಾದರಿಯ ಚಲನವಲನಗಳಿಂದ ಕೃಷಿ ಸರಕುಗಳ ಬೆಲೆಗಳು ಕೈಗಾರಿಕಾ ಸರಕುಗಳ ಬೆಲೆಗಳಿಗಿಂತ ಹೆಚ್ಚು ಏರಿಳಿತವಾಗುವ ಒಲವು ಹೊಂದಿರುವುದು ವ್ಯಕ್ತವಾಗುವುದು.

ಐದ್ಯೆದು ವರ್ಷಗಳ ಅಲ್ಪಾವಧಿಯಲ್ಲಿಯೇ ಕೃಷಿ ಸರಕುಗಳ ಬೆಲೆಗಳ ಏರಿಳಿತಗಳು ಕೈಗಾರಿಕಾ ಸರಕುಗಳ ಬೆಲೆಗಳ ಏರಿಳಿತಗಳಿಗಿಂತ ಹೆಚ್ಚು ತೀವ್ರವಾಗಿದ್ದುವೆಂಬುದನ್ನು ಕೋಷ್ಟಕ 17ರ ಅಂಕಿ–ಅಂಶಗಳು ತೋರಿಸುವುವು.

ಪ್ರತಿ ಐದುವರ್ಷಗಳ ಅವಧಿಯಲ್ಲಿಯೂ ಆಹಾರ ಪದಾರ್ಥಗಳ ಮತ್ತು ಕಚ್ಚಾ ಸರಕುಗಳ ಬೆಲೆಗಳು ಕೈಗಾರಿಕಾ ಬೆಲೆಗಳಿಗಿಂತಲೂ ಹೆಚ್ಚು ತೀವ್ರವಾಗಿ ಏರಿಳಿತವಾಗಿರುವುದನ್ನು ಕೋಷ್ಟಕ 17 ತೋರಿಸುವುದು. ಬೆಲೆಗಳ ಏರಿಳಿತದ ವಿಸ್ತಾರವು ಈ ಮೂರು ಗುಂಪಿನ ಸರಕುಗಳ ಬಗ್ಗೆಯೂ ಬೇರೆ ಬೇರೆಯಾಗಿರುವುದನ್ನು ಗಮನಿಸಿದರೆ ಬೆಲೆಗಳ ಅಸ್ಥಿಮಿತತೆಯ ಸ್ವರೂಪ ತಿಳಿಯುವುದು. ಒಂದೊಂದು ಗುಂಪಿನೊಳಗೆ

1. Reserve Bank of India Bulletin, May 1976 & May 1982.
Various Issues of Weekly Statistical Supplement to the Reserve Bank of India Bulletin.
Reserve Bank of India Report of Currency of Finance, 1974-75, 1979-80

ಸೇರಿರುವ ಅನೇಕ ಸರಕುಗಳ ಬೆಲೆಗಳ ಚಲನವಲನಗಳನ್ನು ಗಮನಿಸಿದರೆ ಹೇಗೆ ಒಂದೊಂದರ ಬೆಲೆ ಒಂದೊಂದು ರೀತಿ ಚಲಿಸಿದೆ ಎಂಬುದು ತಿಳಿಯುವುದು. ಉದಾಹರಣೆಗೆ, ದ್ವಿದಳ ಧಾನ್ಯಗಳ ಬೆಲೆಗಳು 1951-56ರ ಅವಧಿಯಲ್ಲಿ 102 ಮತ್ತು 49 ಸೂಚ್ಯಂಕಗಳ ನಡುವೆ ಏರಿಳಿತವಾಗಿವೆ; ಇದೇ ಅವಧಿಯಲ್ಲಿ ಹತ್ತಿ ಬೆಲೆಗಳು 142 ಮತ್ತು 92 ಸೂಚ್ಯಂಕಗಳ ವಿಸ್ತಾರದಲ್ಲಿ ಏರಿಳಿತವಾಗಿವೆ; ಮತ್ತು ಎಣ್ಣೆ ಬೀಜಗಳ ಬೆಲೆಗಳು 149 ಮತ್ತು 71 ಸೂಚ್ಯಂಕದ ವಿಸ್ತಾರದಲ್ಲಿ ಏರುಪೇರಾಗಿವೆ. ಇದೇ ರೀತಿಯ ಹೆಚ್ಚು ತೀವ್ರ ಏರಿಳಿತಗಳು 1956ರ ನಂತರದ ವರ್ಷಗಳಲ್ಲಿಯೂ ಕಂಡು ಬಂದಿದೆ. ಇತರ ಕೃಷಿ ಸರಕುಗಳ ಬೆಲೆಗಳಲ್ಲಿಯೂ ವಿವಿಧ ಪ್ರಮಾಣದ ಏರಿಳಿತಗಳಾಗಿವೆ. ಅಂದ ಮೇಲೆ ಯೋಜನಾ ಅವಧಿಯಲ್ಲಿ ಕೃಷಿ ಸರಕುಗಳ ಬೆಲೆಗಳ ಪರಸ್ಪರ ಸಂಬಂಧ ಅನೇಕ ವಿಧದ ಬದಲಾವಣೆಗಳನ್ನು ಹೊಂದಿವೆ. ಈ ಬದಲಾವಣೆಗಳಿಗೆ ಇವುಗಳ ಉತ್ಪನ್ನತೆ ಮತ್ತು ಉತ್ಪಾದನೆಯಲ್ಲಿ ಆಗಿರುವ ವ್ಯತ್ಯಾಸಗಳು ಕಾರಣವೇ ಅಥವಾ ಬೇರೆ ಕಾರಣಗಳಿವೆಯೋ ಎಂಬ ಮುಖ್ಯ ಪ್ರಶ್ನೆ ಪರಿಶೀಲನೆಯಾಗಬೇಕಾಗಿದೆ. ಕೆಲವು ಸರಕುಗಳ ಉತ್ಪನ್ನತೆ ದೇಶದ ಕೆಲವು ಭಾಗಗಳಲ್ಲಿ ಆಗಿರುವುದಾದರೂ ಇನ್ನೂ ದೇಶದಾದ್ಯಂತ ಹಾಗೂ ಎಲ್ಲಾ ಕೃಷಿ ಸರಕುಗಳ ಉತ್ಪನ್ನತೆಯೂ ಹೆಚ್ಚುವಂತೆ ಮಾಡುವುದು ಯೋಜನೆಗಳು ಇನ್ನೂ ನಿರ್ವಹಿಸಬೇಕಾದ ಕಾರ್ಯವಾಗಿದೆ. ಉತ್ಪಾದನೆಯೂ ಬಹುಮಟ್ಟಿಗೆ ಇನ್ನೂ 'ಪ್ರಕೃತಿಯ ಕೃಪೆ' ಯನ್ನು ಅವಲಂಬಿಸಿರುವುದರಿಂದ ಮಳೆ ಸಕಾಲದಲ್ಲಿ ಸಾಕಷ್ಟು ಆಗದಿದ್ದರೆ ಉತ್ಪಾದನೆ ಕಡಮೆಯಾಗುವುದು. ನೀರಾವರಿ ಸೌಕರ್ಯ ವಿಸ್ತರಣೆಯೇ ಇವಕ್ಕೆ ಪರಿಹಾರ.

ಸಮಾಪ್ತಿ

ಕೃಷಿ ಸರಕುಗಳ ಸಾಪೇಕ್ಷ ಬೆಲೆಗಳ ಚಲನವಲನಗಳನ್ನು ಕುರಿತ ಮೇಲಿನ ವಿವರಣೆಯ ಹಿನ್ನೆಲೆಯಲ್ಲಿ ಹಿಂದೆ ಹೇಳಿದ ಬೆಲೆ ನಿಯಂತ್ರಣ ಸಾಧನಗಳ ಪ್ರಯೋಗದಿಂದ ಬೆಲೆಗಳ ಬಗ್ಗೆ ಯೋಜಿತ ಉದ್ದೇಶಗಳು ಸಫಲವಾಗಿವೆಯೇ ಎಂಬ ಪ್ರಶ್ನೆ ಏಳುವುದು. ಬೆಲೆಗಳು—ಕೃಷಿ ಬೆಲೆಗಳು ಸೇರಿದಂತೆ—ಏರುತ್ತಲೇ ಬಂದಿರುವುದರಿಂದ ಮೊದಲನೆ ಯೋಜನೆಯಲ್ಲಿ ಘೋಷಿಸಲಾದ 'ಬೆಲೆಗಳ ಮಟ್ಟ ಇನ್ನೂ ಮೇಲಕ್ಕೆ ಏರುವುದನ್ನು ತಡೆಗಟ್ಟುವ, ಉದ್ದೇಶವೂ, ಮುಖ್ಯವಾಗಿ ಕಡಮೆ ವರಮಾನವುಳ್ಳ ಜನತೆಯ ಅನುಭೋಗಕ್ಕೆ ಅವಶ್ಯಕವಾದ ಕೃಷಿ ಉತ್ಪನ್ನಗಳ ಬೆಲೆಗಳು ಅತಿಯಾಗಿ ಏರದಂತೆ ನೋಡಿಕೊಳ್ಳುವ ಉದ್ದೇಶವೂ ಈಡೇರಿದಂತಾಗಿಲ್ಲವೆಂದು ಹೇಳಬಹುದು. ಈ ಉದ್ದೇಶಗಳ ಸಫಲತೆಯು ಕೇವಲ ಬೆಲೆ ನಿಯಂತ್ರಣ ಸಾಧನಗಳಿಗಿಂತ ಹೆಚ್ಚಾಗಿ ಕೃಷಿ

ಕೋಷ್ಟಕ 17. ಬೆಲೆಗಳ ಏರಿಳಿತ ವಿಸ್ತಾರ ಸೂಚಿಸುವ ಸಗಟು ಬೆಲೆಗಳ ಸೂಚ್ಯಂಕಗಳು

ಕಾಲಾವಧಿ	ಆಹಾರ ಸರಕುಗಳು		ಕಚ್ಚಾ ಸರಕುಗಳು		ಕೈಗಾರಿಕಾ ಸರಕುಗಳು	
	ಗರಿಷ್ಠ	ಕನಿಷ್ಟ	ಗರಿಷ್ಠ	ಕನಿಷ್ಟ	ಗರಿಷ್ಠ	ಕನಿಷ್ಟ
1951–52 ರಿಂದ 1955–56	92.4	68.4	99.2	69,4	94.2	78.8
1956–57 ರಿಂದ 1960–61	99.9	85.2	102.0	81.3	97.9	84.0
1961–62 ರಿಂದ 1965–66	144.6	100.0	132.8	97.8	118.1	100.0
1966–67 ರಿಂದ 1970–71	207.8	171.1	197.3	156.4	154.9	127.5
1971–72 ರಿಂದ 1975–76	364.0	210.3	328.0	191.0	254.5	167.1

ಮೂಲ : ಹಿಂದಿನ ಅಡಿಟಿಪ್ಪಣಿಗಳಲ್ಲಿ ಕೊಟ್ಟಿರುವಂತೆಯೇ

ಉತ್ಪನ್ನತೆ ಹಾಗೂ ಉತ್ಪನ್ನಗಳ ಹೆಚ್ಚುವರಿಯನ್ನೂ, ಚಲಾವಣೆಗೆ ಬಿಡುವ ಹಣದ ಒಟ್ಟು ಮೊತ್ತವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದನ್ನೂ ಅವಲಂಬಿಸಿದೆ.

ಆಹಾರ ಪದಾರ್ಥಗಳ ಮತ್ತು ಕಚ್ಚಾ ಸರಕುಗಳ ಬೆಲೆಗಳಿಗೆ ಸರಿಯಾದ ಪರಸ್ಪರ ಸಂಬಂಧಗಳನ್ನು ಸ್ಥಾಪಿಸುವುದರ ಮೂಲಕ ಇವುಗಳ ಉತ್ಪಾದಕರಿಗೆ ಸೂಕ್ತವಾದ ಉತ್ತೇಜನ ನೀಡುವ ಉದ್ದೇಶ ಭಾಗಶಃ ಸಫಲವಾಗಿದೆ ಎಂದು ಹೇಳಬಹುದು. ಏಕೆಂದರೆ, ಸಕ್ಕರೆತಯಾರಿಕೆಗೆ ಬೇಕಾದ ಕಬ್ಬಿನ ಬೆಳೆಗೆ ಬೆಲೆ ನಿಯಂತ್ರಣದ ಮೂಲಕ ತಕ್ಕಮಟ್ಟಿಗೆ ಉತ್ತೇಜನ ದೊರಕಿದೆ. ಆದರೆ, ಹತ್ತಿ, ಎಣ್ಣೆಬೀಜಗಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ ಸಾಕಷ್ಟು ಹೆಚ್ಚಾಗಿಲ್ಲ. ಇತರ ಅನೇಕ ಕೃಷಿ ಸರಕುಗಳ ಬಗ್ಗೆಯೂ ಪೂರೈಕೆ ಹಾಗೂ ಬೇಡಿಕೆಯಲ್ಲಿ ಅಸಮತೋಲನವಿರುವುದು ಕಂಡುಬಂದಿದೆ. ಒಟ್ಟಿನಲ್ಲಿ ಸ್ಥಿಮಿತಯುತ ಅಭಿವೃದ್ಧಿಗೂ ಸಮತೋಲಿತ ಬೆಲೆಗಳ ರಚನೆಯನ್ನು ಸ್ಥಾಪಿಸುವುದಕ್ಕೂ ಭಾರತದ ಯೋಜನೆಗಳು ಇನ್ನೂ ಶ್ರಮಿಸಬೇಕಾಗಿದೆ. ಈ ಕಾರ್ಯನಿರ್ವಹಣೆಯಲ್ಲಿ ಸರ್ಕಾರಕ್ಕೆ ತಜ್ಞರ ಸೇವೆ ಒದಗಿಸುತ್ತಿರುವ ಕೃಷಿಬೆಲೆಗಳ ಆಯೋಗದ ಕಾರ್ಯಾಚರಣೆಗಳು ಬಹುಮಟ್ಟಿಗೆ ವಿಸ್ತೃತಗೊಳ್ಳಬೇಕಾಗಿದೆ.

ಅಧ್ಯಾಯ 9

ಕೃಷಿ ಸಂಬಂಧಿ ಉದ್ಯಮಗಳ ಅಭಿವೃದ್ಧಿ ಯೋಜನೆ

ಕೃಷಿ ಅಭಿವೃದ್ಧಿ ಯೋಜನೆಯು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾದ ಕೇವಲ ಭೂಸಾಗುವಳಿಗೆ ಸಂಬಂಧಿಸಿದ ವಿಷಯಗಳಷ್ಟನ್ನೇ ಅಲ್ಲದೆ ಕೃಷಿ ಉದ್ಯಮಕ್ಕೆ ನಿಕಟ ಸಂಬಂಧವಿರುವ ಕೆಲವು ಉದ್ಯಮಗಳ ಅಭಿವೃದ್ಧಿಯನ್ನೂ ಒಳಗೊಳ್ಳುವುದೆಂದು ಹೇಳಬಹುದು. ಭಾರತದಲ್ಲಿ ಸಾಗುವಳಿ ಕಾರ್ಯ ನಿರ್ವಹಣೆಯು ಬಹುಮಟ್ಟಿಗೆ ಎತ್ತುಗಳನ್ನು ಅವಲಂಬಿಸಿದೆ. ಕೃಷಿಕರು ಸಾಮಾನ್ಯವಾಗಿ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ, ಹಂದಿ ಇವುಗಳ ಸಾಕಣೆಯನ್ನು ಕೈಕೊಳ್ಳುತ್ತಾರೆ. ಬೆಳೆ ಕೃಷಿ ಹಾಗೂ ಜಾನುವಾರು ಕೃಷಿ ಎರಡನ್ನೂ ಕೈಗೊಳ್ಳುವ ಅಭ್ಯಾಸವನ್ನು ಒಂದು ರೀತಿಯ ಮಿಶ್ರಬೇಸಾಯ ಎಂದು ಕರೆಯಲಾಗಿದೆ. ಕೃಷಿಕರಿಗೆ ಅವಶ್ಯಕವಾದ ಕೆಲವು ಗ್ರಾಮೀಣ ಕೈಗಾರಿಕೆಗಳು ಗ್ರಾಮೀಣ ಕೃಷಿಉದ್ಯಮಕ್ಕೆ ಪೂರಕ ಉದ್ಯಮಗಳಾಗಿವೆ ಎಂದು ಹೇಳಬಹುದು. ಅರಣ್ಯೋದ್ಯಮವು ಕೈಗಾರಿಕೆಗಳಿಗೆ ಕಚ್ಚಾಸಾಮಗ್ರಿ ಪೂರೈಕೆ, ವಾತಾವರಣ ರಕ್ಷಣೆ ಇತ್ಯಾದಿ ದೃಷ್ಟಿಗಳಿಂದ ಪ್ರತ್ಯೇಕ ಉದ್ಯಮವಾಗಿದೆಯಾದರೂ ಕೃಷಿಗೂ, ಕೃಷಿಕರ ಜೀವನಕ್ಕೂ ಇದು ಹತ್ತಿರ ಸಂಬಂಧ ಹೊಂದಿದೆ. ಅಲ್ಲದೆ ಅರಣ್ಯೋದ್ಯಮವು ದೇಶದ ಕೆಲವು ಕಡೆಗಳಲ್ಲಿ ಇರುವ ಬುಡಕಟ್ಟು ಜನಾಂಗಗಳ ಜೀವನದೊಡನೆ ನಿಕಟ ಸಂಬಂಧ ಹೊಂದಿದೆ. ಮೀನುಗಾರಿಕೆಯು ಗ್ರಾಮಾಂತರ ಪ್ರದೇಶಗಳ ಇನ್ನೊಂದು ಕೃಷಿ ಸಂಬಂಧಿ ಉದ್ಯಮವಾಗಿದೆ. ಹತ್ತಿ ನೂಲುವುದು-ಇಂತಹ ಕೆಲವು ಗ್ರಾಮೀಣ ಗೃಹ ಕೈಗಾರಿಕೆಗಳು ಅನೇಕ ಕಡೆ ಕೃಷಿಕರ ಉಪವೃತ್ತಿಯಾಗಿವೆ. ಹೀಗೆ ವಿವಿಧ ಕೃಷಿ ಸಂಬಂಧಿ ಉದ್ಯಮಗಳು ಗ್ರಾಮೀಣ ಕೃಷಿಕವರ್ಗದ ಉದ್ಯೋಗಾವಕಾಶ ವಿಸ್ತರಣೆ, ವರಮಾನ ಹೆಚ್ಚುವರಿ ಮತ್ತು ಅನುಭೋಗ ಮಟ್ಟ ಏರಿಕೆ ದೃಷ್ಟಿಯಿಂದ ತಮ್ಮದೇ ಆದ ವಿಶೇಷ ಪ್ರಾಮುಖ್ಯತೆ ಹೊಂದಿವೆ. ಭಾರತದ ಯೋಜನೆಗಳಲ್ಲಿ ಈ ಉದ್ಯಮಗಳ ಬೆಳವಣಿಗೆಗೆ ಸಾಕಷ್ಟು ಗಮನ ನೀಡಲಾಗಿದೆ ಎಂದು ಹೇಳಲಾಗದಿದ್ದರೂ ಇವುಗಳ ಅನೇಕ ಅಭಿವೃದ್ಧಿಕಾರ್ಯಕ್ರಮಗಳಿಗೆ ಗಮನಾರ್ಹ ಪ್ರಮಾಣದ ವೆಚ್ಚವನ್ನು

ಮಾಡಲಾಗಿದೆ. ಜಾನುವಾರು ಪೋಷಣೆ, ಮೀನುಗಾರಿಕೆ ಮತ್ತು ಅರಣ್ಯೋದ್ಯಮಗಳ ಅಭಿವೃದ್ಧಿಗೆ ಯೋಜನೆಗಳ ಸರ್ಕಾರಿ ವಲಯದಲ್ಲಿ 1951-52ರಿಂದ 1978-79ರ ಅವಧಿಯಲ್ಲಿ 1473 ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.

ಭಾರತದಲ್ಲಿ ಜಾನುವಾರುಗಳು ಸಂಖ್ಯೆಯಲ್ಲಿ ಹೆಚ್ಚಾಗಿ ಇರುವುದಾದರೂ ಇವುಗಳಲ್ಲಿ ಬಹುಭಾಗ ವಾಸ್ತವವಾಗಿ ಇರಬೇಕಾದಷ್ಟು ಪುಷ್ಟಿಯಾಗಿಲ್ಲದೆ ಬಡಕಲಾಗಿವೆ. ಇವುಗಳ ತಳಿ ಅತ್ಯುತ್ತಮವಾದುದಲ್ಲ. ಇವುಗಳಿಗೆ ಬೇಕಾದ ಹಸಿಮೇವು ಮತ್ತು ಒಣಮೇವು ಸಾಕಷ್ಟು ಇರುವುದಿಲ್ಲ. ಅನೇಕ ಗ್ರಾಮಗಳಲ್ಲಿ ಪೂರ್ವಕಾಲದಲ್ಲಿ ಇದ್ದ ಗೋಮಾಳ ಭೂಮಿಯೂ ಬೆಳೆಗಳ ಸಾಗುವಳಿಗೆ ಉಪಯೋಗಿಸಲ್ಪಟ್ಟು ದನಕರುಗಳಿಗೆ ಮೇಯುವ ಪ್ರದೇಶ ಕಡಮೆಯಾಗಿದೆ. ಈ ಕಾರಣಗಳಿಂದ ಹಸು ಮತ್ತು ಎಮ್ಮೆಗಳು ಕೊಡುವ ಹಾಲಿನ ಪ್ರಮಾಣ ಕಡಮೆ. ಎತ್ತುಗಳ ಕೆಲಸ ಮಾಡುವ ಶಕ್ತಿ ಕಡಮೆ. ಅಂತೆಯೇ ಕುರಿ, ಮೇಕೆ, ಕೋಳಿ ಇವುಗಳೂ ಮುಂದುವರಿದ ರಾಷ್ಟ್ರಗಳ ಪ್ರಾಣಿಗಳೊಡನೆ ಹೋಲಿಸಿದರೆ ತುಂಬ ಕೀಳುದರ್ಜೆಯದಾಗಿವೆ. ಆದುದರಿಂದ ಇವುಗಳು ನೀಡುವ ಉತ್ಪನ್ನಗಳೂ (ಉಣ್ಣೆ, ಮಾಂಸ, ಮೊಟ್ಟೆ, ಚರ್ಮ) ಕಡಮೆಯಾಗಿವೆ. ಭಾರತದ ಯೋಜನೆಗಳು ಉತ್ತಮ ರಾಸಿನ ಎತ್ತುಗಳು, ಹಸುಗಳು, ಎಮ್ಮೆಗಳು, ಕುರಿಗಳು, ಮೇಕೆಗಳು ಮತ್ತು ಕೋಳಿಗಳು ಹೆಚ್ಚಾಗುವಂತೆ ಮಾಡುವ ಮತ್ತು ಹಾಲು, ಬೆಣ್ಣೆ ಹಾಗೂ ಇತರ ಕ್ಷೀರೋತ್ಪನ್ನಗಳು ಮತ್ತು ಉಣ್ಣೆ, ಮೊಟ್ಟೆ ಇತ್ಯಾದಿ ಉತ್ಪನ್ನಗಳನ್ನು ಹೆಚ್ಚಿಸುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಜಾನುವಾರು ಅಭಿವೃದ್ಧಿಯ ಉದ್ದೇಶಗಳು ಮುಖ್ಯವಾಗಿ ನಾಲ್ಕು ; (1) ಜನತೆಗೆ ಪುಷ್ಟಿಕರ ಆಹಾರವಾದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಶೀಘ್ರವಾಗಿ ಹೆಚ್ಚಿಸುವುದು. (2) ಸಾಗುವಳಿಗೂ, ಸಾರಿಗೆಗೂ ಅವಶ್ಯಕವಾದ ಎತ್ತಿನ ಶಕ್ತಿಯನ್ನು ಹೆಚ್ಚಿಸುವುದು (3) ಕೃಷಿಗೆ ಬೇಕಾಗುವ ಗೊಬ್ಬರ, ಗೋಬರ್‌ಗ್ಯಾಸ್ ಪ್ಲಾಂಟ್‌ಗಳಿಗೆ ಕಚ್ಚಾ ಸರಕು ಒದಗಿಸುವುದು, ಮತ್ತು (4) ರಫ್ತುಮೌಲ್ಯವುಳ್ಳ ಚರ್ಮದ ಸರಬರಾಯಿ ಸರಕನ್ನು ಹೆಚ್ಚಿಸುವುದು. ಈ ಉದ್ದೇಶಗಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಭಾರತದ ಯೋಜನೆಗಳು ಒಳಗೊಂಡಿವೆ.

ಕೃತಕ ವೀರ್ಯ ಪ್ರಯೋಗದಂತಹ ಆಧುನಿಕ ಜಾನುವಾರು ಅಭಿವೃದ್ಧಿತಂತ್ರಗಳನ್ನು ಉಪಯೋಗಿಸುವುದು ಯೋಜನೆಗಳು ಕೈಗೊಂಡಿರುವ 'ಕೀ ವಿಲೇಜ್ ಯೋಜನೆ' ಯ ಜಾನುವಾರುಗಳ ಸಾಂದ್ರ ಅಭಿವೃದ್ಧಿ ಪ್ರಾಯೋಜನೆಗಳ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಗಳ ಪ್ರಕಾರ ಅನೇಕ ಕೃತಕ ವೀರ್ಯ ಪ್ರಯೋಗ

ಕೇಂದ್ರಗಳೂ ಚರ್ಮಾಲಯ ವಿಭಾಗವನ್ನು ಹೊಂದಿರುವ ಗೋಶಾಲೆಗಳೂ ಸ್ಥಾಪಿಸಲ್ಪಟ್ಟಿವೆ. ಕುರಿಗಳ ಜಾತಿ ಉತ್ತಮಗೊಳಿಸಲು ಕರಿ ಹಾಗೂ ಉಣ್ಣೆ ವಿಸ್ತರಣಾ ಕೇಂದ್ರಗಳನ್ನೂ ಕುರಿ ಸಾಕಣೆ ಕ್ಷೇತ್ರಗಳನ್ನೂ ಸ್ಥಾಪಿಸಲಾಗಿದೆ. ಹಾಲುಕಾಯಿಸಿ ಕೆನೆತೆಗೆದ ಹಾಲಿನ ಪುಡಿ ಹಾಗೂ ಇತರ ಕ್ಷೀರೋತ್ಪನ್ನಗಳನ್ನು ತಯಾರಿಸಲು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಇವು ಸ್ಥಾಪಿಸಲ್ಪಟ್ಟಿವೆ. ಸಹಕಾರಿ ಸಂಘಗಳ ಮೂಲಕ ಈ ಉತ್ಪನ್ನಗಳನ್ನು ಮಾರಾಟ ಮಾಡುವ ಏರ್ಪಾಡು ಮಾಡಲಾಗಿದೆ. ಜಾನುವಾರುಗಳಿಗೆ ಉತ್ತಮ ತರದ ಮೇವು ಬೆಳೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಜಾನುವಾರುಗಳಿಗೆ ತಗಲುವ ಕಾಲು ಹುಣ್ಣು ಇತ್ಯಾದಿ ರೋಗಗಳ ನಿವಾರಣೆಗೆ ಸೂಕ್ತ ಉಪಾಯಗಳನ್ನು ಕೈಗೊಳ್ಳಲಾಗಿದೆ. ನುರಿತ ಸಿಬ್ಬಂದಿಯನ್ನು ಹೊಂದಿರುವ ಪಶುವೈದ್ಯಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಇವುಗಳಸಂಖ್ಯೆ 1951ರಲ್ಲಿ ಕೇವಲ 1,450 ಇದ್ದುದು 1980ರ ವೇಳೆಗೆ 12,340 ಆಗಿದ್ದಿತು. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸಿನ ಪ್ರಕಾರ, ಯೋಜನೆಗಳಲ್ಲಿ ಸಣ್ಣಪುಟ್ಟ ಕೃಷಿಕರಿಗೂ, ಕೃಷಿಕಾರ್ಮಿಕರಿಗೂ ಅನುಕೂಲವಾಗುವಂತೆ ವಿಶೇಷ ಜಾನುವಾರು ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಮೇಲೆ ಹೇಳಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮಾಡಲಾದ ವೆಚ್ಚವು ಹೆಚ್ಚುತ್ತಾಬಂದಿದೆ. ಜಾನುವಾರು ಅಭಿವೃದ್ಧಿ ಹಾಗೂ ಕ್ಷೀರೋದ್ಯಮಕ್ಕೆ ಮಾಡಿದ ವೆಚ್ಚ ಮೊದಲನೆ ಯೋಜನೆಯಲ್ಲಿ 15.5 ಕೋಟಿ ರೂಪಾಯಿಗಳಷ್ಟು ಇದ್ದುದು ಮೂರನೆ ಯೋಜನೆಯಲ್ಲಿ 77 ಕೋಟಿ ರೂಪಾಯಿಗಳಿಗೂ, ಐದನೆ ಯೋಜನೆಯಲ್ಲಿ 438 ಕೋಟಿ ರೂಪಾಯಗಳಿಗೂ ಹೆಚ್ಚಿದೆ. ಪ್ರಸಕ್ತ ಆರನೆಯ ಯೋಜನೆಯಲ್ಲಿ ಈ ಬಾಬಿಗೆ, 825 ಕೋಟಿ ರೂಪಾಯಿಗಳಷ್ಟು ಹಣವನ್ನು ನಿಗದಿ ಮಾಡಲಾಗಿದೆ.

ಯೋಜಿತ ಅಭಿವೃದ್ಧಿ ಕಾರ್ಯಕ್ರಮಗಳ ಫಲವಾಗಿ ಸಾಗುವಳಿ ಕಾರ್ಯಕ್ರಮ ನಿರ್ವಹಣೆ ಹಾಗೂ ಗ್ರಾಮೀಣ ಸಾರಿಗೆ ಉಪಯೋಗದಲ್ಲಿ ಇಂದಿಗೂ ಅತಿಮುಖ್ಯ ಶಕ್ತಿ ಮೂಲವಾದ ಎತ್ತುಗಳ ಸಂಖ್ಯೆ ಹೆಚ್ಚಿರುವುದಲ್ಲದೆ ಇವುಗಳಲ್ಲಿ ಉತ್ತಮ ರಾಸುಗಳ ಭಾಗ ಹೆಚ್ಚುತ್ತಾ ಬಂದಿದೆ. ಎಮ್ಮೆ ಮತ್ತು ಹಸುಗಳ ಹಾಲಿನ ಉತ್ಪನ್ನ 1951ರಲ್ಲಿ 17 ದಶಲಕ್ಷ ಟನ್ನುಗಳಷ್ಟು ಇದ್ದುದು 1980ರ ವೇಳೆಗೆ 30 ದಶಲಕ್ಷ ಟನ್ನುಗಳಷ್ಟು ಆಗಿದ್ದಿತು. ಕೋಳಿ ಸಾಕಣೆಯ ಅಭಿವೃದ್ಧಿಯಿಂದ ಕೋಳಿಗಳ ಸಂಖ್ಯೆ 1951ರಲ್ಲಿ ಸುಮಾರು 74 ದಶಲಕ್ಷ ಇದ್ದುದು, 1972ರ ವೇಳೆಗೆ 137 ದಶಲಕ್ಷಕ್ಕೆ ಹೆಚ್ಚಿದ್ದಿತು.

ಕೋಳಿ ಮೊಟ್ಟೆಗಳ ಉತ್ಪನ್ನ 1960-61ರಲ್ಲಿ 2880 ದಶಲಕ್ಷ ಇದ್ದುದು 1980ರಲ್ಲಿ 12320 ದಶಲಕ್ಷಕ್ಕೆ ಹೆಚ್ಚಿದ್ದಿತು. ಹೀಗೆಯೇ ಬಹುಮಂದಿ ಜನರಿಗೆ ಆಹಾರವಾಗಿರುವ ಮಾಂಸದ ತಯಾರಿಕೆಯೂ, ಉಣ್ಣೆ ಕೈಗಾರಿಕೆಗೆ ಬೇಕಾದ ಉಣ್ಣೆಯ ಉತ್ಪನ್ನವೂ ಗಮನಾರ್ಹವಾಗಿ ಹೆಚ್ಚಿವೆ.

ಯೋಜನಾ ಅವಧಿಯಲ್ಲಿ ಜಾನುವಾರುಗಳ ಅಭಿವೃದ್ಧಿಯಾಗಿರುವುದಾದರೂ ಮತ್ತು ಇವುಗಳ ಉತ್ಪನ್ನ ಹೆಚ್ಚಿರುವುದಾದರೂ ಮೂರು ದಶಕಗಳಲ್ಲಿ ಮಾಡಲಾದ ಈ ಸಾಧನೆಗಳು ದೇಶದ ಅವಶ್ಯಕತೆಗಳನ್ನು ಪೂರೈಸಲಾಗಿಲ್ಲ. ಎಮ್ಮೆ ಮತ್ತು ಹಸುಗಳ ಹಾಲಿನ ಉತ್ಪನ್ನತೆ ಮುಂದುವರಿದ ರಾಷ್ಟ್ರಗಳಿಗೆ ಹೋಲಿಸಿದರೆ ಅತ್ಯಲ್ಪವೇ ಆಗಿದೆ. ವಾರ್ಷಿಕ ಸರಾಸರಿ ಲೆಕ್ಕದಲ್ಲಿ ಭಾರತದ ಹಸುವಿನ ಹಾಲಿನ ಉತ್ಪನ್ನ 187 ಕಿ. ಗ್ರಾ., ಎಮ್ಮೆಯ ಹಾಲಿನ ಉತ್ಪನ್ನ 504 ಕಿ.ಗ್ರಾ., ಮೇಕೆಯ ಹಾಲಿನ ಉತ್ಪನ್ನ 55 ಕಿ.ಗ್ರಾ. ಆಗಿದೆ. ಹಸುವಿನ ಹಾಲಿನ ವಾರ್ಷಿಕ ಸರಾಸರಿ ಉತ್ಪನ್ನ ನೆದರಲೆಂಡ್‌ನಲ್ಲಿ 4220 ಕಿ.ಗ್ರಾ., ಅಮೇರಿಕದಲ್ಲಿ 4154 ಕಿ.ಗ್ರಾ., ಡೆನ್ಮಾರ್ಕ್‌ನಲ್ಲಿ 3902 ಕಿ.ಗ್ರಾ, ಇಂಗ್ಲೆಂಡ್ ಮತ್ತು ಸ್ವಿಟ್ಸರ್‌ಲೆಂಡಿನಲ್ಲಿ 3930 ಕಿ.ಗ್ರಾ., ಆಗಿರುತ್ತದೆ.[1] ಜಾನುವಾರುಗಳ ಬಹು ಭಾಗ ಇನ್ನೂ ಪುಷ್ಟಿಯಾಗಬೇಕಾಗಿದೆ. ಇವುಗಳಿಗೆ ಉತ್ತಮವಾದ ಮೇವುಗಳ ಕೊರತೆಯಿದೆ. ರೋಗಗಳ ಬಾಧೆಯಿಂದ ಅನೇಕ ಜಾನುವಾರುಗಳು ಇನ್ನೂ ಪಾರಾಗಿಲ್ಲ. ಜಾನುವಾರುಗಳ ಉಪಯೋಗ ಹೆಚ್ಚಿಸಲು ಹಿಂದೆ ಹೇಳಿರುವ ಈಗ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮಗಳನ್ನು ಬಹುಮಟ್ಟಿಗೆ ವಿಸ್ತರಿಸಬೇಕಾಗಿದೆ. ಎತ್ತುಗಳು, ಹಸುಗಳು ಇತ್ಯಾದಿ ಜಾನುವಾರುಗಳ ಉಪಯೋಗಕರ ಜೀವಮಾನದ ಕಾಲಾವಧಿ ಹೆಚ್ಚಿರುವುದು ದೇಶದ ಅಭ್ಯುದಯಕ್ಕೆ ಒಂದು ಮುಖ್ಯ ಮಾರ್ಗವಾಗಿದೆ. ಒಬ್ಬ ತಜ್ಞರ ಅಂದಾಜಿನ ಪ್ರಕಾರ ಎಂಟತ್ತು ದಶಲಕ್ಷ ದನಕರುಗಳ ಜೀವಮಾನಕಾಲವನ್ನು ಒಂದು ವರ್ಷ ಹೆಚ್ಚುವಂತೆ ಮಾಡುವುದರಿಂದ ದೇಶಕ್ಕೆ ಸುಮಾರು 800 ಕೋಟಿ ರೂಪಾಯಿಗಳ ಉಳಿತಾಯವಾಗುವುದು.[2]

---

1. N.S. Ramaswamy, How Valuable is Animal Energy? in **Kurukshethra** Sept. 1, 1978.
2. G. B. Mamoria, **Agricultural Problems of India**, Kitab Mahal, Allahabad, 1976 p. 345.

ಮೀನುಗಾರಿಕೆ ಉದ್ಯಮವೂ ಭಾರತದ ಗ್ರಾಮೀಣ ಆರ್ಥಿಕತೆಯಲ್ಲಿ ಒಂದು ಮುಖ್ಯಸ್ಥಾನ ಪಡೆದಿದೆ. ದೇಶದಲ್ಲಿ ಮೀನು ವ್ಯವಸಾಯವನ್ನೇ ಪ್ರಧಾನವಾಗಿ ಅವಲಂಬಿಸಿರುವ ಗ್ರಾಮ ಸಮುದಾಯಗಳು ಅನೇಕವಿವೆ. ತೀರ ಪ್ರದೇಶಗಳಲ್ಲಿ ಸಾಗರ ಮೀನುಗಾರಿಕೆಗೂ ಒಳಪ್ರದೇಶಗಳಲ್ಲಿ ನದಿಕೆರೆಗಳಿರುವೆಡೆಗಳಲ್ಲಿ ಒಳನಾಡಿನ ಮೀನುಗಾರಿಕೆಗೂ ಅವಕಾಶವಿದೆ. ಮೀನುಗಾರಿಕೆ ಅಭಿವೃದ್ಧಿಗೆ ಭಾರತದ ಯೋಜನೆಗಳು ಕೈಗೊಂಡಿರುವ ಕ್ರಮಗಳು ಹಲವಾರು : (1) ಮೀನು ಹಿಡಿಯುವ ತಂತ್ರದ ಸುಧಾರಣೆ ಹಾಗೂ ಆಧುನೀಕರಣ (2) ಆಳಸಮುದ್ರ ಮೀನುಗಾರಿಕೆಗೆ ವಿಶೇಷ ವ್ಯವಸ್ಥೆ (3) ಸಮುದ್ರ ಮೀನುಗಾರಿಕೆಗೆ ಬಂದರುಗಳ ಸ್ಥಾಪನೆ (4) ಮೀನುಗಳ ಸಂಗ್ರಹ, ಶೀತಕಗಳಲ್ಲಿ ದಾಸ್ತಾನು. ತಿನ್ನುವುದಕ್ಕೆ ಹದಗೊಳಿಸುವಿಕೆ, ಸಾರಿಗೆ, ಮಾರಾಟ ಇತ್ಯಾದಿಗಳಿಗೆ ಸೂಕ್ತ ಏರ್ಪಾಡುಗಳು (5) ಮೀನುಗಾರಿಕೆ ಸಾಧನಗಳು ಹಾಗೂ ಮೀನುಗಳ ದರ್ಜೆ ಮತ್ತು ಯೋಗ್ಯತೆ ಉತ್ತಮಗೊಳಿಸಲು ಸಂಶೋಧನೆ (6) ಆಧುನಿಕ ಮೀನುಗಾರಿಕೆ ಬಗ್ಗೆ ಶಿಕ್ಷಣ ಹಾಗೂ ತರಬೇತಿ (7) ಮೀನುಗಾರರ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಸುಧಾರಣಾ ಕ್ರಮಗಳು. ಹೀಗೆ ಅನೇಕ ವಿಧದ ಕಾರ್ಯಕ್ರಮಗಳ ಮೂಲಕ ಮೀನುಗಾರಿಕೆ ಅಭಿವೃದ್ಧಿಗೆ ಭಾರತದ ಯೋಜನೆಗಳು ಪ್ರಯತ್ನಿಸಿವೆ.

ಯೋಜನೆಗಳಲ್ಲಿ ಸಾಗರ ಮೀನುಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಏಕೆಂದರೆ, ಸಾಗರಗಳಲ್ಲಿ ಹುದುಗಿರುವ ಮೀನಿನ ಸಂಪತ್ತು ಅಪಾರವಾಗಿದೆ. ಇತರ ಪ್ರಯೋಜನ ಪಡೆಯಲು ಆಧುನಿಕ ತಂತ್ರಗಳ ಬಳಕೆಗೆ ಉತ್ತೇಜನ ಕೊಡಲಾಗುತ್ತಿದೆ. ಸಾಗರ ಮೀನುಗಾರಿಕೆಗೆ ಅನುಕೂಲವಾಗುವಂತೆ ತೀರ ಪ್ರದೇಶಗಳಲ್ಲಿ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸಲಾಗಿದೆ. ಬೆಸ್ತರಿಗೆ ಸ್ವಯಂಚಾಲಿತ ದೋಣಿಗಳನ್ನೂ, ಉತ್ತಮವಾದ ಬಲೆಗಳನ್ನೂ ಉಪಯೋಗಿಸಲು ನೆರವು ನೀಡಲಾಗಿದೆ. 1961ರಲ್ಲಿ ದೇಶದಲ್ಲಿ ಒಟ್ಟು 2161 ಸ್ವಯಂಚಾಲಿತ ಮೀನುಗಾರಿಕೆ ದೋಣಿಗಳಿದ್ದವು. ಈ ಸಂಖ್ಯೆ 1980ರ ವೇಳೆಗೆ 16100ಕ್ಕೆ ಹೆಚ್ಚಿದ್ದಿತು.[1] ಬಲೆ, ಗಾಳ ಇತ್ಯಾದಿ ಸಾಧನಗಳನ್ನು ಉತ್ತಮಗೊಳಿಸಿ ಮೀನುಗಾರರಿಗೆ ಒದಗಿಸುವ ಏರ್ಪಾಡು ಮಾಡಲಾಗಿದೆ. ಅನೇಕ ಬೆಸ್ತರ ಅಭಿವೃದ್ಧಿ ಏಜೆನ್ಸಿಗಳನ್ನು ಸ್ಥಾಪಿಸಲಾಗಿದೆ. ಆಧುನಿಕ ವಿಧಾನದಲ್ಲಿ ಸಾಂದ್ರಮೀನುಗಾರಿಕೆಯನ್ನು ಬೆಳೆಸುವುದು ಮತ್ತು ಈ ಬಗ್ಗೆ ಬೆಸ್ತರಿಗೆ ಅವಶ್ಯಕವಾದ ಶಿಕ್ಷಣ ನೀಡುವುದು ಈ ಏಜೆನ್ಸಿಗಳ ಕರ್ತವ್ಯವಾಗಿದೆ. ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಒರಿಸ್ಸಾ ರಾಜ್ಯಗಳಲ್ಲಿ ರಾಜ್ಯಮೀನುಗಾರಿಕೆ ನಿಗಮಗಳನ್ನು

---

1. G.O.I., Sixth Five Year Plan, p. 134.

(State Lisheries Corporation) ಸ್ಥಾಪಿಸಲಾಗಿದೆ. ಮೀನುಗಳನ್ನು ಸಂಸ್ಕರಣಗೊಳಿಸಲು (Processing), ಶೀತಕಗಳಲ್ಲಿ (Refrigerators) ಮೀನುಗಳನ್ನು ದಾಸ್ತಾನು ಮಾಡಿಡಲು ಮತ್ತು ಇವುಗಳನ್ನು ಮಾರಾಟ ಮಾಡಲು ತಕ್ಕ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲಾ ಯೋಜಿತ ಕ್ರಮಗಳ ಫಲವಾಗಿ ದೇಶದಲ್ಲಿ ಮೀನುಗಳ ಉತ್ಪಾದನೆ 1950-51ರಲ್ಲಿ ಕೇವಲ 7.5 ಲಕ್ಷ ಟನ್ನುಗಳಷ್ಟು ಮಾತ್ರ ಇದ್ದುದು, 1979–80ರಲ್ಲಿ 23.4 ಲಕ್ಷ ಟನ್ನುಗಳಿಗೂ ಹೆಚ್ಚಿದ್ದಿತು. ಮೀನುಗಳನ್ನು ರಫ್ತು ಮಾಡಿದುದರಿಂದ ಗಳಿಸಿದ ವಿದೇಶಿ ಹಣದ ರೂಪಾಯಿ ಮೌಲ್ಯ 1960-61ರಲ್ಲಿ ಕೇವಲ 4.13 ಕೋಟಿ ರೂಪಾಯಿಗಳಿದ್ದುದು 1979–80ರಲ್ಲಿ 263 ಕೋಟಿ ರೂಪಾಯಿಗಳಾಗಿದ್ದಿತು.

ವೈವಿಧ್ಯಮಯವಾದ ಮರಗಿಡಬಳ್ಳಿಗಳನ್ನೂ ಪಕ್ಷಿ ಪ್ರಾಣಿ ಜಂತುಗಳನ್ನೂ ಒಳಗೊಂಡಿರುವ ಅರಣ್ಯಗಳು ಯಾವುದೇ ದೇಶದ ಸಂಪತ್ತಿನ ಒಂದು ಅತಿಮುಖ್ಯ ಭಾಗವಾಗಿರುತ್ತವೆ. ಅರಣ್ಯಗಳ ಉಪಯೋಗ ಹಲವಾರು; ವಾಯುಗುಣವೂ ಸೇರಿದಂತೆ ಪ್ರಾಕೃತಿಕ ವಾತಾವರಣವನ್ನು ಉತ್ತಮ ಸ್ಥಿತಿಯಲ್ಲಿ ಇಡುವುದು, ವಿವಿಧ ಪ್ರಾಣಿ ವರ್ಗಗಳನ್ನೂ ಸಸ್ಯವರ್ಗಗಳನ್ನೂ ಪೋಷಿಸುವುದು, ಭೂ ಕೊಚ್ಚಣೆಯನ್ನು ತಡೆಗಟ್ಟುವುದು, ನಾರು, ಸೌದೆ, ಬೆಂಕಿಕಡ್ಡಿಗೆ ಬೇಕಾದ ಮರಗಳು ಮತ್ತು ಇತರ ಅನೇಕ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನೂ, ಔಷಧಗಳ ತಯಾರಿಕೆಗೆ ಗಿಡಮೂಲಿಕೆಗಳನ್ನೂ, ದನಕರುಗಳಿಗೆ ಬೇಕಾದ ಮೇವುಗಳನ್ನೂ ಒದಗಿಸುವುದು ಮತ್ತು ಭಾರತದ ಅರಣ್ಯವಾಸಿಗಳಾದ ಸುಮಾರು 40 ದಶಲಕ್ಷ ಬುಡಕಟ್ಟು ಜನಾಂಗದವರಿಗೆ ಹಾಗೂ ಅನೇಕ ಗ್ರಾಮವಾಸಿಗಳಿಗೆ ಉದ್ಯೋಗ ಒದಗಿಸುವುದು, ಇವೆಲ್ಲವೂ ಅರಣ್ಯಗಳಿಂದ ದೇಶಕ್ಕೆ ಲಭಿಸುವ ಪ್ರಯೋಜನಗಳಾಗಿವೆ.

ಭಾರತದ ಯೋಜನೆಗಳು, ಇರತಕ್ಕ ಅರಣ್ಯ ಸಂಪತ್ತಿನ ಅತ್ಯುತ್ತಮ ಪ್ರಯೋಜನ ಪಡೆಯುವ ಹಾಗೂ ಉಪಯೋಗಿಸಲ್ಪಟ್ಟ ಹಾಗೂ ನಶಿಸುವ ಅರಣ್ಯ ಭಾಗವನ್ನು ಪುನರುಜ್ಜೀವನಗೊಳಿಸುವ ಉದ್ದೇಶ ಹೊಂದಿವೆ. ಈ ಉದ್ದೇಶಕ್ಕಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮರಗಿಡಗಳನ್ನು ಬೆಳೆಸುವುದನ್ನು ಜನಾದರಣೀಯ ಮಾಡಲು 'ವನಮಹೋತ್ಸವ' ಕಾರ್ಯಕ್ರಮವನ್ನು 1950 ರಿಂದಲೂ ನಡೆಸುತ್ತಾ ಬಂದಿದೆ. ಅರಣ್ಯೋದ್ಯಮದ ವಿವಿಧ ಭಾಗಗಳ ಬಗ್ಗೆ ಯೋಜನೆಗಳಲ್ಲಿ ನಿರ್ದಿಷ್ಟ ಗುರಿಗಳನ್ನು ಹಾಕಿಕೊಳ್ಳಲಾಗಿದೆ. ಅನೇಕ ಅರಣ್ಯ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಅರಣ್ಯೋತ್ಪನ್ನಗಳ ಅಭಿವೃದ್ಧಿ ಹಾಗೂ ಉಪಯೋಗಿಸುವಿಕೆಗೆ ಸಂಬಂಧ

ಪಟ್ಟಿ ಕಾರ್ಯಗಳ ನಿರ್ವಹಣೆಯೇ ಇವುಗಳ ಕರ್ತವ್ಯವಾಗಿದೆ. ಡೆಹರಾಡುನ್, ಕೊಯಮುತ್ತೂರು, ಬೆಂಗಳೂರು ಇತ್ಯಾದಿ ಕೆಲವು ಸ್ಥಳಗಳಲ್ಲಿ ಅರಣ್ಯೋದ್ಯಮಕ್ಕೆ ಸಂಬಂಧಪಟ್ಟ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಸರ್ಕಾರದ ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಬಲಗೊಳಿಸಲಾಗಿದೆ. ಅರಣ್ಯಗಳ ಪ್ರವೇಶ ಹಾಗೂ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಕಾಲುವೆದಡಗಳು, ರಸ್ತೆ ಬದಿಗಳು, ಗ್ರಾಮ ಹಾಗೂ ಇತರ ಸಣ್ಣ ಪ್ರದೇಶಗಳಲ್ಲಿ ಮರಗಿಡಗಳನ್ನು ಬೆಳೆಸುವ ಕಾರ್ಯಕ್ರಮವನ್ನು ನೆರವೇರಿಸಲಾಗುತ್ತಿದೆ. ಈ ವಿವಿಧ ಕಾರ್ಯಕ್ರಮಗಳಿಗೆ ಸರ್ಕಾರಿ ವಲಯದ ಒಟ್ಟು ಯೋಜನಾ ವೆಚ್ಚದಲ್ಲಿ ಸುಮಾರು ಶೇಕಡಾ 0.4 ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. ಈ ವೆಚ್ಚ ಭಾಗವು ಕಡಮೆಯಾಗಿದ್ದು ಅರಣ್ಯಾಭಿವೃದ್ಧಿಗೆ ಯೋಜನೆಗಳಲ್ಲಿ ಸರಿಯಾದ ಆದ್ಯತೆ ನೀಡಿಲ್ಲವೆಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿರುತ್ತಾರೆ.

ಯೋಜಿತ ಉದ್ದೇಶದಂತೆ ಅರಣ್ಯಾಭಿವೃದ್ಧಿಯಾಗಿಲ್ಲವೆಂಬುದನ್ನು ಅಂಕಿ-ಅಂಶಗಳು ಸೂಚಿಸುವುವು. 1950-51ರಲ್ಲಿ ದೇಶದ ಭೂ ವಿಸ್ತೀರ್ಣದಲ್ಲ ಶೇಕಡಾ 22.5 ರಷ್ಟು ಅರಣ್ಯಗಳ ಭಾಗವಾಗಿದ್ದುದು 1966-67ರಲ್ಲಿ ಶೇಕಡಾ 20.4ಕ್ಕೆ ಇಳಿದಿದ್ದಿತು. ಸಾಗುವಳಿ ಭೂ ಭಾಗ ವಿಸ್ತರಣೆ, ನದಿಕಣಿವೆ ಯೋಜನೆಗಳು ಇತ್ಯಾದಿಗಳು ಈ ಇಳುವರಿಗೆ ಕಾರಣವಾಗಿದ್ದವು. ತರುವಾಯ ಸ್ವಲ್ಪ ವಿಸ್ತರಿಸಿರುವುದಾದರೂ ಈ ಭಾಗ ಶೇಕಡಾ 30 ರಷ್ಟು ಇರಬೇಕೆಂದು 1952ರ ರಾಷ್ಟ್ರೀಯ ಅರಣ್ಯನೀತಿಯು ಅನುಮೋದಿಸಿದ ಗುರಿಗಿಂತ ಕಡಮೆಯಾಗಿದೆ. ಅರಣ್ಯವಲಯವು ರಾಷ್ಟ್ರೀಯ ವರಮಾನಕ್ಕೆ ನೀಡಿದ ಭಾಗ ಯೋಜನಾ ಅವಧಿಯಲ್ಲಿ ಯಾವ ಬದಲಾವಣೆಯೂ ಇಲ್ಲದೆ ಕೇವಲ ಶೇಕಡಾ 1.4 ರಷ್ಟು ಭಾಗವಾಗಿದೆ.

ಅಧ್ಯಾಯ 10

ಸಾರಾಂಶ

ಭಾರತದ ಯೋಜನೆಯ ಸ್ವರೂಪ ಕುರಿತ ಮೊದಲ ಅಧ್ಯಾಯದಲ್ಲಿ ಭಾರತವು ಹೇಗೆ ತನ್ನದೇ ಆದ ವಿಶಿಷ್ಟ ಮಾದರಿಯ ಯೋಜಿತ ಪದ್ಧತಿಯನ್ನು ರೂಪಿಸಿಕೊಳ್ಳುತ್ತಾ ಬಂದಿದೆ ಎಂಬುದನ್ನು ಸೂಚಿಸಲಾಗಿದೆ. 'ಸಮಾಜವಾದಿ ನಮೂನೆ ಸಮಾಜ' ಸ್ಥಾಪನೆಯ ಗುರಿಯನ್ನುಳ್ಳ ಈ ಮಾದರಿಯು ತೆರೆದ ಆರ್ಥಿಕತೆಯ, ಮಿಶ್ರ ಆರ್ಥಿಕತೆಯ, ಫೆಡರಲ್ ರಾಜ್ಯಾಂಗದ, ಪ್ರಜಾಸತ್ತಾತ್ಮಕ ಗುಣದ ಯೋಜನೆಯಾಗಿದೆ ಎಂಬುದನ್ನು ವಿವರಿಸಲಾಗಿದೆ. ಭಾರತದಲ್ಲಿ ಕೃಷಿ–ಕೈಗಾರಿಕೆಗಳ ಪರಸ್ಪರ ಸಂಬಂಧವನ್ನು, ಭಾರತದ ಮಿಶ್ರ ಆರ್ಥಿಕತೆಯ ಪ್ರಧಾನ ವಲಯವಾದ ಕೃಷಿ ಉದ್ಯಮದ ಪ್ರಾಮುಖ್ಯತೆ ಹಾಗೂ ಸ್ಥಾನಮಾನಗಳ ವಿವರಣೆಯನ್ನೂ, ಕೃಷಿ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಪಾತ್ರವನ್ನೂ ಯೋಜನೆಯ ಸಾಮಾನ್ಯ ಉದ್ದೇಶಗಳನ್ನೂ ಕೃಷಿ ಯೋಜನೆಯ ನಿರ್ದಿಷ್ಟ ಉದ್ದೇಶಗಳನ್ನೂ ಎರಡನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಸುಮಾರು ಮೂರು ದಶಕಗಳ ಯೋಜಿತ ಕೃಷಿ ಅಭಿವೃದ್ಧಿ ಪ್ರಯತ್ನದಿಂದ ಉಂಟಾಗಿರುವ ಪ್ರಗತಿಯ ವಿಮರ್ಶಾತ್ಮಕ ಸ್ಥೂಲ ವಿವರಣೆಯನ್ನು ಹಿಂದಿನ ಏಳು ಅಧ್ಯಾಯಗಳಲ್ಲಿ ಕೊಡಲಾಗಿದೆ. ಆಧುನಿಕ ಜಗತ್ತಿನೊಡನೆ ಸರಿಸಮಾನವಾಗಿ ಮುಂದುವರಿಯುವುದರಲ್ಲಿ ಹಿಂದಿನ ಶತಮಾನದ ಜಡತ್ವವನ್ನು ತೊರೆದು ಭಾರತವು 1951 ರಿಂದ ಆರಂಭವಾದ ಯೋಜನಾ ಯುಗದಲ್ಲಿ 'ಹಸಿರು ಕ್ರಾಂತಿ'ಗಳ ಪಥದಲ್ಲಿ ಕೆಲವು ಹೆಜ್ಜೆಗಳನ್ನಿಟ್ಟು ಮುಂದುವರಿಯುತ್ತಿದೆ ಎಂಬುದು ವಿವರಣೆಯಿಂದ ಸ್ಪಷ್ಟವಾಗುವುದು. ಆದರೆ, ಸರ್ಕಾರವೂ ಖಾಸಗಿ ಕೃಷಿಕರೂ ಕೈಗೊಂಡಿರುವ ಯೋಜಿತ ಅಭಿವೃದ್ಧಿವೆಚ್ಚ ಹಾಗೂ ಕೃಷಿ ಯೋಜನೆಗಳ ಅಂಗವಾಗಿ ಕೈಗೊಂಡಿರುವ ಅನೇಕ ಕಾರ್ಯಕ್ರಮಗಳು ನೀಡಿರುವ ಪ್ರತಿಫಲಗಳು ದೇಶದ ಜನತೆಯ ಅವಶ್ಯಕತೆಗಳನ್ನು ಪೂರೈಸಿರುವುದಿಲ್ಲವೆಂಬುದನ್ನು ಕೃಷಿಯ ಆಧುನಿಕ ಪರಿವರ್ತನೆ ಕಾರ್ಯ ಇನ್ನೂ ಮೊದಲ ಹಂತಗಳಲ್ಲಿ ಇದೆ ಎಂಬುದನ್ನು ಸಹ ಈ ವಿವರಣೆಯು ತೋರಿಸಿದೆ. ಮೂರು ದಶಕಗಳ ಕೃಷಿಯ ವಾರ್ಷಿಕ ಅಭಿವೃದ್ಧಿ ದರವು ಕೇವಲ ಶೇಕಡಾ 2ರಷ್ಟು ಇದ್ದು ಯೋಜಿತ ಗುರಿಗಿಂತ ಕಡಿಮೆಯಾಗಿರುವುದಲ್ಲದೆ ಹೆಚ್ಚು ಕಡಮೆ ದೇಶದ

ವಾರ್ಷಿಕ ಜನಸಂಖ್ಯಾ ಹೆಚ್ಚುವರಿ ದರದಷ್ಟೇ ಆಗಿರುವುದರಿಂದ ದೇಶದಲ್ಲಿ ಉಂಟಾಗಿರುವ ಅಲ್ಪಪ್ರಮಾಣದ ತಲಾ ವರಮಾನ ಹೆಚ್ಚುವರಿಗೆ ಕೃಷಿ ಬೆಳವಣಿಗೆಯ ಕೊಡುಗೆ ಏನೂ ಇಲ್ಲದಾಗಿದೆ. ಯೋಜನೆಗಳಿಂದ ಉಂಟಾಗಿರುವ ಕೃಷಿ ಬೆಳವಣಿಗೆಯಲ್ಲಿ ಭಾರತದ ಬಹುಭಾಗವೂ ಬಹುಸಂಖ್ಯಾತ ಕೃಷಿಕರೂ ಹೆಚ್ಚು ಪ್ರಯೋಜನ ಪಡೆದಿರುವುದಿಲ್ಲ. ಯೋಜನೆಗಳು ಜಾರಿಗೆ ತಂದಿರುವ ನೂತನ ಕೃಷಿ ತಂತ್ರದ ಪ್ರಯೋಜನ ಎಲ್ಲಾ ವರ್ಗಗಳ ಕೃಷಿಕರಿಗೂ ಲಭಿಸುವಂತೆ ಯೋಜನೆಗಳು ರೂಪಿಸಲ್ಪಡಬೇಕು. ಯೋಜನೆಗಳು ಹೇಳಿಕೊಂಡಿರುವ ಕೃಷಿ–ಕೈಗಾರಿಕೆಗಳ ಸಮತೂಕ ಅಭಿವೃದ್ಧಿಯಾಗಲಿ, ವಿವಿಧ ಪ್ರದೇಶಗಳ ಸಮತೂಕ ಕೃಷಿ ಅಭಿವೃದ್ಧಿಯಾಗಲಿ ಉಂಟಾಗಿರುವುದಿಲ್ಲ. ಕೃಷಿ ಯೋಜನಾ ವೆಚ್ಚ ಹಂಚಿಕೆಯಾಗಲೀ, ಕೈಗೊಂಡಿರುವ ವಿವಿಧ ಕೃಷಿ ಅಭಿವೃದ್ಧಿಕಾರ್ಯಕ್ರಮಗಳಾಗಲೀ ಯೋಜನೆಗಳಲ್ಲಿ ಘೋಷಿಸಿರುವಂತೆ ಬಡಕೃಷಿಕರ ಮತ್ತು ಧನಿಕ ಕೃಷಿಕರ ನಡುವೆ ಇರುವ ಆರ್ಥಿಕ ಅಸಮಾನತೆಯನ್ನು ಕಡಮೆ ಮಾಡಿರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬಡತನರೇಖೆಗೂ ಕೆಳಗಿರುವವರ ಸಂಖ್ಯೆ ಹೆಚ್ಚುತ್ತಾ ಬಂದಿದೆ. ಯೋಜನಾ ಸಮಿತಿಯ ಅಂದಾಜಿನ ಪ್ರಕಾರ 1977–78ರಲ್ಲಿ ಬಡತನ ರೇಖೆಯ ಕೆಳಗೆ ಇದ್ದವರ ಸಂಖ್ಯೆಯು ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯ ಶೇಕಡಾ 48ರಷ್ಟು ಆಗಿದ್ದಿತು. ಅಲ್ಲದೆ ಗ್ರಾಮೀಣ ನಿರುದ್ಯೋಗ ಸಮಸ್ಯೆಯು ಹಿಂದಿಗಿಂತಲೂ ಉಲ್ಬಣವಾಗಿದೆ. ಗೋಧಿ, ಅಕ್ಕಿ ಇಂತಹ ಧಾನ್ಯಗಳ ಬೆಳೆಗೆ ಕೃಷಿ ಯೋಜನೆಗಳು ವಿಶೇಷ ಪ್ರಾಮುಖ್ಯತೆ ನೀಡಿದವಾದರೂ, ಇವುಗಳ ಆಮದು ಅವಲಂಬನೆ ತಪ್ಪಲಿಲ್ಲ. ಕೃಷಿ ಸರಕುಗಳ ಮುಖ್ಯವಾಗಿ ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳ ಕೊರತೆ ಮತ್ತು ಇದರಿಂದ ಇವುಗಳ ಬೆಲೆಗಳ ಗಮನಾರ್ಹ ಏರಿಕೆಯು ಕೃಷಿ ಯೋಜನೆಯಲ್ಲಿ ನೀಡಲಾದ ಆದ್ಯತೆ ಕ್ರಮ ಸರಿಯಾಗಿರಲಿಲ್ಲ ಎಂಬುದನ್ನು ಸೂಚಿಸುವುದು. ಅನೇಕ ಕೃಷಿ ಸರಕುಗಳ ಉತ್ಪಾದನೆಯಲ್ಲಿ ನಿಗದಿ ಮಾಡಲಾದ ಗುರಿಗೂ ಸಾಧಿಸಿದ ಉತ್ಪನ್ನಕ್ಕೂ ತುಂಬ ಅಂತರವಿರುವುದು ಯೋಜನಾ ತಂತ್ರದ ದೋಷವನ್ನು ತೋರಿಸುತ್ತದೆ. ಗುರಿಗಳಿಗೂ ವಾಸ್ತವ ಸಾಧನೆಗಳಿಗೂ ಇಂತಹ ಅಂತರವು ರಾಸಾಯನಿಕ ಗೊಬ್ಬರ, ಶಕ್ತಿಮಾನ್ ಬೀಜಗಳು ಇತ್ಯಾದಿಗಳನ್ನು ಒದಗಿಸುವ ವಿಷಯದಲ್ಲಿಯೂ ಇರುವುವು. ನೀರಾವರಿ ಸೌಕರ್ಯಗಳನ್ನು ದೊರಕಿಸಿದ ಕಾಲಕ್ಕೂ, ಇದನ್ನು ಕೃಷಿಕರು ಸಾಗುವಳಿ ಕಾರ್ಯದಲ್ಲಿ ಉಪಯೋಗಿಸುವ ಕಾಲಕ್ಕೂ ನಡುವೆ ಹೆಚ್ಚು ಕಾಲವಿಳಂಬವಿರುವುದು ನೀರಾವರಿ ಯೋಜನೆಗಳು ಸುಸಂಘಟಿತವಾಗಿಲ್ಲದುದನ್ನು ಸೂಚಿಸುವುದು. ಭೂಸುಧಾರಣೆಗಳು, ಸಾಮುದಾಯಿಕ ಅಭಿವೃದ್ಧಿ, ಪಂಚಾಯತಿ ರಾಜ್, ಸಹಕಾರ ಸಂಸ್ಥೆಗಳು, ದುರ್ಬಲ ಕೃಷಿಕರ ಅಭಿವೃದ್ಧಿ ಏಜೆನ್ಸಿಗಳು ಇತ್ಯಾದಿ ಸಂಸ್ಥಾ ಅಡಿಪಾಯ ರಚನೆಗಳ ಲೋಪದೋಷಗಳೇ ಕೃಷಿಕ್ರಾಂತಿಯ ಗತಿಯನ್ನು ಮಂದಗೊಳಿಸಿವೆ. ಈ ಸಂಸ್ಥಾ ಅಡಿಪಾಯ

ರಚನೆ ಕಾರ್ಯಕ್ರಮಗಳನ್ನು ರೂಪಿಸುವಾಗ ಆರ್ಥಿಕೇತರ ಅಂಶಗಳನ್ನು ಯೋಜನೆಗಳು ಗಮನಿಸದಿರುವುದು ಈ ಲೋಪದೋಷಗಳಿಗೆ ಒಂದು ಮುಖ್ಯ ಕಾರಣವಾಗಿದೆ. ಕೃಷಿ ಯೋಜನೆಯು ಒಳಗೊಳ್ಳದ ಇತರ ವಿಭಾಗಗಳ ಕೆಲವು ವಿಷಯಗಳನ್ನೂ ಕೃಷಿ ಅಭಿವೃದ್ಧಿಯು ಅವಲಂಬಿಸಿರುವುದರಿಂದ ಈ ಇತರ ವಿಭಾಗಗಳ ಯೋಜನೆಗಳನ್ನೂ, ಕೃಷಿ ಯೋಜನೆಯನ್ನೂ ಪರಸ್ಪರ ಸಂಘಟಿಸುವುದು ಅವಶ್ಯಕ. ಉದಾಹರಣೆಗೆ, ಗ್ರಾಮೀಣ ಸಾರಿಗೆ, ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ, ಕೈಗಾರಿಕಾವಲಯವು ಒದಗಿಸುವ ರಾಸಾಯನಿಕ ಗೊಬ್ಬರ ಮತ್ತು ಇತರ ಕೃಷಿ ಉತ್ಪನ್ನ ಸಾಧನ ಇತ್ಯಾದಿಗಳು ಎಷ್ಟು ಪ್ರಮಾಣದಲ್ಲಿ ಒದಗಲಿವೆ ಎಂಬುದು ಕೃಷಿ ಯೋಜನೆಯ ಯಶಸ್ಸನ್ನು ನಿರ್ಣಯಿಸುವ ಒಂದು ಅಂಶವಾಗಿದೆ. ಭಾರತದ ಕೃಷಿ ಯೋಜನೆಗಳು ಇಂತಹ ಇತರ ಆರ್ಥಿಕ ವಲಯಗಳ ಯೋಜನೆಗಳೊಡನೆ ಸಾಕಷ್ಟು ಮಟ್ಟಿಗೆ ಸುಸಂಘಟಿತವಾಗಿಲ್ಲವೆಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ತೋರಿಸಲಾಗಿದೆ. ಕೃಷಿ ಬೆಲೆಗಳ ಸ್ಥಿಮಿತತೆ, ಉತ್ತಮವಾದ ಸಾಪೇಕ್ಷ ಬೆಲೆಗಳ ರಚನೆ, ಬೆಲೆಗಳ ವಿಷಯದಲ್ಲಿ ಕೃಷಿಕರ ಹಾಗೂ ಅನುಭೋಗಿಗಳ ಹಿತಾಸಕ್ತಿ ಇವುಗಳ ಬಗ್ಗೆ ಯೋಜನೆಗಳಲ್ಲಿ ಘೋಷಿಸಲಾದ ಉದ್ದೇಶಗಳು ಈಡೇರಿಲ್ಲವೆಂಬುದನ್ನು ಎಂಟನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೇಲೆ ಹೇಳಿರುವಂತೆ ಭಾರತದ ಕೃಷಿ ಯೋಜನೆಯು ಅನೇಕ ವಿಧದಲ್ಲಿ ತೃಪ್ತಿಕರವಾಗಿಲ್ಲದಿದ್ದರೂ ಇದು ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗುವುದು. ಮೂರನೆ ಅಧ್ಯಾಯದಲ್ಲಿ ವಿವರಿಸಿರುವ ಆರು ಯೋಜನೆಗಳ ಒಟ್ಟು 43.000ಕೋಟಿ ರೂಪಾಯಿಗಳ ಕೃಷಿ ವೆಚ್ಚ ನಿಷ್ಫಲವಾಗಲಾರದು. ನಾಲ್ಕನೆಯ ಅಧ್ಯಾಯದಲ್ಲಿ ತೋರಿಸಿರುವಂತೆ ಕೃಷಿಕ್ರಾಂತಿಗೆ ಅವಶ್ಯಕವಾದ ಸಂಸ್ಥಾ ಅಡಿಪಾಯ ರಚನೆಯ ಕಾರ್ಯಗಳಾದ ಭೂಸುಧಾರಣೆಗಳು, ಸಾಮುದಾಯಿಕ ಅಭಿವೃದ್ಧಿ ಹಾಗೂ ಪಂಚಾಯಿತಿರಾಜ್, ಸಹಕಾರಿ ಸಂಸ್ಥೆಗಳು, ಕೃಷಿ ಸಂಶೋಧನಾ ಕೇಂದ್ರಗಳು, ದುರ್ಬಲ ಕೃಷಿಕವರ್ಗದವರಿಗಾಗಿ ವಿಶೇಷ ಏಜೆನ್ಸಿಗಳು ಇತ್ಯಾದಿ ಕೇವಲ ಕೃಷಿ ಉದ್ಯಮಕ್ಕೆ ಅಲ್ಲದೆ ಗ್ರಾಮೀಣ ಜೀವನಕ್ಕೇ ಹೊಸ ತಿರುವು ಕೊಟ್ಟಿವೆ. ದೇಶದ ನೀರಾವರಿ ಸೌಕರ್ಯವಿರುವ ಸಾಗುವಳಿ ಭೂಮಿಯ ವಿಸ್ತೀರ್ಣ 1950–51ರಲ್ಲಿ 22.6 ದಶಲಕ್ಷ ಹೆಕ್ಟೇರುಗಳಷ್ಟು ಇದ್ದುದು 1980–81ರ ವೇಳೆಗೆ 55.02 ದಶಲಕ್ಷ ಹೆಕ್ಟೇರುಗಳಿಗೆ ಹೆಚ್ಚಿದೆ ಎಂಬುದೂ, ಇದಕ್ಕಾಗಿ 1951–52ರಿಂದ 1978–79ರ ಅವಧಿಯಲ್ಲಿ 7230 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತೆಂಬುದೂ ಐದನೆ ಅಧ್ಯಾಯದ ನೀರಾವರಿ ಪ್ರಗತಿಯ ಸಮೀಕ್ಷೆಯಿಂದ ತಿಳಿದುಬರುತ್ತದೆ. ಆಧುನಿಕ ಕೃಷಿ ಸಾಧನೆಗಳ ಬಳಕೆಯೂ ಗಮನಾರ್ಹವಾಗಿ ಹೆಚ್ಚಿರುವುದನ್ನು ಆರನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. 1951

52ರಿಂದ 1979–80ರ ಅವಧಿಯಲ್ಲಿ ನೈಟ್ರೋಜಿನಸ್ ಗೊಬ್ಬರದ ಸರಬರಾಯಿ 45,000ಟನ್ನುಗಳಿಂದ, 3,52,000ಟನ್ನುಗಳಿಗೂ, ಫಾಸ್‌ಫಾಟಿಕ್ ಗೊಬ್ಬರವು ಕೇವಲ 11,000 ಟನ್ನುಗಳಿಂದ, 9,94,000 ಟನ್ನುಗಳಿಗೂ ಪೊಟಾಸಿಕ್ ಗೊಬ್ಬರವು 8000 ಟನ್ನುಗಳಿಂದ 4,73,000 ಟನ್ನುಗಳಿಗೂ ಹೆಚ್ಚಿವೆ. ವಿವಿಧ ಬೆಳೆಗಳಿಗೆ ಸಂಶೋಧನೆಯಿಂದ 'ಶಕ್ತಿಮಾನ್ ಬೀಜ' ಗಳನ್ನು ಕಂಡುಹಿಡಿದು ಇವುಗಳ ಉತ್ಪಾದನೆಗೂ, ಕೃಷಿಕರಿಗೆ ವಿತರಣೆ ಮಾಡಲೂ ಸೂಕ್ತ ವ್ಯವಸ್ಥೆ ಮಾಡಲಾಗಿದೆ. 1979–80ರ ವೇಳೆಗೆ 35.2 ದಶಲಕ್ಷ ಹೆಕ್ಟೇರುಗಳಲ್ಲಿ ಶಕ್ತಿಮಾನ್ ಬೀಜಗಳನ್ನು ಉಪಯೋಗಿಸಲಾಗುತ್ತಿತ್ತು. ಬೆಳೆಗಳಿಗೆ ಶತ್ರುಗಳಾದ ಕ್ರಿಮಿಕೀಟ ನಾಶಕಗಳ ಬಳಕೆಯೂ ಹೆಚ್ಚಿದೆ. 1950–51ರಲ್ಲಿ ಕೃಷಿಕರು ಉಪಯೋಗಿಸುತ್ತಿದ್ದ ಕ್ರಿಮಿ ಕೀಟನಾಶಕಗಳ ಒಟ್ಟು ಪ್ರಮಾಣ ಕೇವಲ 100 ಟನ್ನುಗಳಷ್ಟು ಮಾತ್ರ ಇದ್ದದು 1980–81ರಲ್ಲಿ 60,000 ಟನ್ನುಗಳಷ್ಟು ಹೆಚ್ಚಿದೆ. ಸಾಗುವಳಿಗೆ ಉಪಯೋಗಿಸುವ ನೇಗಿಲು ಇತ್ಯಾದಿ ಉಪಕರಣಗಳನ್ನು ಸುಧಾರಿಸಿರುವುದೇ ಅಲ್ಲದೆ, ಸಾಧ್ಯವಾದ ಕಡೆಗಳಲ್ಲಿ ಆಧುನಿಕ ಕೃಷಿಯಂತ್ರಗಳನ್ನು ಉಪಯೋಗಿಸಲಾಗುತ್ತಿದೆ. ಏಳನೆ ಅಧ್ಯಾಯದ ಕೃಷಿಯೋಜನೆಯ ಫಲಗಳ ಸಮೀಕ್ಷೆಯಲ್ಲಿ ಕಾಣಿಸಿರುವಂತೆ ಕೃಷಿ ಉತ್ಪನ್ನವು ವರ್ಷ ವರ್ಷವೂ ಶೇಕಡಾ 2.07 ರಷ್ಟು ಹೆಚ್ಚುತ್ತಾ ಬಂದಿದೆ. 1950–51 ರಿಂದ 1980–81ರ ಅವಧಿಯಲ್ಲಿ ಆಹಾರ ಬೆಳೆಗಳ ಉತ್ಪನ್ನ ಸುಮಾರು 55 ದಶಲಕ್ಷ ಟನ್ನುಗಳಿಂದ ಸುಮಾರು 130 ದಶಲಕ್ಷ ಟನ್ನುಗಳಿಗೆ ಹೆಚ್ಚಿದೆ.ಆಹಾರೇತರ ಬೆಳೆಗಳ ಉತ್ಪನ್ನವೂ ಸ್ವಲ್ಪಮಟ್ಟಿಗೆ ಹೆಚ್ಚಿದೆ. ಕೃಷಿಕರ ಅಮೂಲ್ಯ ಆಸ್ತಿಯಾದ ಎತ್ತು, ಎಮ್ಮೆ, ಹಸು ಇತ್ಯಾದಿ ಜಾನುವಾರುಗಳೂ, ಕೃಷಿಗೆ ಸಂಬಂಧಿ ಉದ್ಯಮಗಳಾದ ಹೈನುಗಾರಿಕೆ, ಮೀನುಗಾರಿಕೆ, ಅರಣ್ಯೋದ್ಯಮ ಇತ್ಯಾದಿಗಳೂ ಯೋಜನಾ ಕಾರ್ಯಕ್ರಮಗಳ ಫಲವಾಗಿ ಅಭಿವೃದ್ಧಿ ಹೊಂದುತ್ತಿರುವುದನ್ನು ಒಂಬತ್ತನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಹೀಗೆ, ಒಟ್ಟಿನಲ್ಲಿ ಹಿಂದೆ ಹೇಳಿದಂತೆ 1951ರಿಂದ ಭಾರತವು ಕೃಷಿ ಕ್ರಾಂತಿಯ ಪಥದಲ್ಲಿ ಮುಂದುವರಿಯುತ್ತಿದೆ. ಕೃಷಿ ಜನಾಂಗವೂ ಅನೇಕ ದಶಕಗಳ ಜಡತ್ವವನ್ನು ತೊರೆದು ತನ್ನ ಕೃಷಿ ಉದ್ಯಮವನ್ನು ಆಧುನಿಕ ವಿಧಾನಕ್ಕೆ ಪರಿವರ್ತಿಸುವ ಮಹಾಕಾರ್ಯದಲ್ಲಿ ತೊಡಗಲಾರಂಭಿಸಿದೆ. ಕೃಷಿಕರಲ್ಲಿ ಹೊಸ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಜ್ಞೆಮೂಡುತ್ತಿದೆ. ತಮ್ಮ ಸ್ಥಾನಮಾನವನ್ನೂ, ಆರ್ಥಿಕ ಸ್ಥಿತಿಗತಿಗಳನ್ನೂ ಉತ್ತಮಗೊಳಿಸಿಕೊಳ್ಳಬೇಕೆಂಬ ಹಂಬಲ ಅವರಲ್ಲಿ ಹುಟ್ಟಿದೆ. ಸರ್ಕಾರವು ಕೈಗೊಳ್ಳುತ್ತಿರುವ ಅನೇಕ ಯೋಜಿತ ಕಾರ್ಯಕ್ರಮಗಳ ಪ್ರಾಮುಖ್ಯತೆ ಅರಿವು ಹೆಚ್ಚು ಹೆಚ್ಚು ಕೃಷಿಕರಿಗೆ ಆಗುತ್ತಾ ಬಂದಿದೆ. ಇದರಿಂದ ಯೋಜನಾ ಕಾರ್ಯ ನಿರ್ವಹಣೆಯಲ್ಲಿ ಸರ್ಕಾರಕ್ಕೆ ಗ್ರಾಮೀಣ ಸಾರ್ವಜನಿಕರಿಂದ ಹಿಂದಿಗಿಂತ ಹೆಚ್ಚು ಸಹಕಾರ ದೊರೆಯುವ ಸೂಚನೆಗಳು ಸ್ಪಷ್ಟವಾಗಿವೆ.

ಮೂರು ದಶಕಗಳ ಯೋಜನೆಯ ಅನುಭವವು ಯೋಜನಾಕಾರರಿಗೆ ಉಪಯುಕ್ತ ಪಾಠಗಳನ್ನು ಕಲಿಸಿದೆ. ಯೋಜನಾ ತಂತ್ರಗಳ ಲೋಪದೋಷಗಳು, ಆಡಳಿತ ಅದಕ್ಷತೆ, ಸಾರ್ವಜನಿಕ ಕ್ಷೇತ್ರವನ್ನು ಕಲುಷಿತಗೊಳಿಸಿವೆ. ವೆಚ್ಚಕ್ಕೆ ತಕ್ಕ ಪ್ರತಿಫಲ ದೊರಕದಂತೆ ಮಾಡಿರುವ ಅಂಶಗಳಲ್ಲಿ ಒಂದೆಂದು ಸಾಮಾನ್ಯವಾಗಿ ಹೇಳಲಾಗಿರುವ ಭ್ರಷ್ಟಾಚಾರ ಹಾಗೂ ಅನೀತಿಯುತ ಆರ್ಥಿಕ ವ್ಯವಹಾರಗಳು ಇತ್ಯಾದಿ ದೋಷಗಳ ನಿವಾರಣೆಗೆ ಯೋಜನಾಕಾರರು ಪ್ರಯತ್ನಿಸುತ್ತಿದ್ದಾರೆ, ಈ ವಿವಿಧ ಹೊಸ ಒಲವುಗಳು ಅಭಿವೃದ್ಧಿ ಪ್ರಯತ್ನಕ್ಕೆ ಹೆಚ್ಚು ಅನುಕೂಲಕರವಾಗಿವೆ. ಆದುದರಿಂದ ಪ್ರಸಕ್ತ ಆರನೆ ಯೋಜನೆ ಹಾಗೂ ಬರಲಿರುವ ಇತರ ಯೋಜನೆಗಳೂ ಭಾರತದಲ್ಲಿ ಕೃಷಿಕ್ರಾಂತಿಯು ಶೀಘ್ರವಾಗಿ ದೇಶದಾದ್ಯಂತವೂ ವ್ಯಾಪಕವಾಗಿ ಹರಡುವಂತೆ ಮಾಡುವವೆಂದು ನಿರೀಕ್ಷಿಸಬಹುದು.

ಪಾರಿಭಾಷಿಕ ಶಬ್ದಕೋಶ

ಅಡಿಪಾಯ ರಚನೆ	Infrastructure
ಅನುಚಲಿ	Variable
ಅಭಿವೃದ್ಧಿಶೀಲ ರಾಷ್ಟ್ರ	Developing country
ಆರ್ಥಿಕತೆ (ಆರ್ಥಿಕ ವ್ಯವಸ್ಥೆ)	Economy
ಆಕರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ	Command area development authority
ಆಯವ್ಯಯ ನೀತಿ	Budgetary policy
ಉತ್ಪನ್ನತೆ	Yield; Productivity
ಉತ್ಪನ್ನ ಹೆಚ್ಚಳ	Surplus output
ಉತ್ತಮ ಗೊಳಿಸಿದುದಕ್ಕೆ ತೆರ	Betterment levy
ಉತ್ತೇಜಕಗಳು	Incentives
ಉದ್ಯಮ ಕ್ಷೇತ್ರ ಯೋಜನೆ	Sectoral plan
ಉಪಯುಕ್ತ ಉತ್ಪಾದನಾ ತಂತ್ರ	Appropriate technology
ಊಳಿಗಮಾನ್ಯ ಪದ್ಧತಿ	Feudalism
ಒಕ್ಕಲೆಬ್ಬಿಸುವಿಕೆ	Eviction of tenants
ಕಚ್ಚಾ ಸರಕು	Raw material
ಕಾಪು ದಾಸ್ತಾನು	Buffer stock
ಕ್ರಿಯಾ ವ್ಯವಸ್ಥಾತ್ಮಕ ಯೋಜನೆ	Functional planning
ಕೂಡೊಕ್ಕಲು ಸಂಘ	Collective farming society
ಕೃಷಿ ಸಾಧನಗಳು	Agricultural Inputs
ಕೃಷಿಕೈಗಾರಿಕಾ ನಿಗಮ	Agro-Industries corporation
ಕೃಷಿ ರಚನೆ	Agrarian structure
ಕೇಂದ್ರೀಕೃತ ಯೋಜನೆ	Centralised planning
ಕೇಂದ್ರೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆ (ಕೇಂದ್ರ ಸಂಖ್ಯಾ ಸಂಸ್ಥೆ)	Central statistical organization
ಕೇಂದ್ರದಿಂದ ಪ್ರಾದೇಶಿಕ ಘಟಕಗಳಿಗೆ ಯೋಜನೆ	Top-down plan
ಚಾಲತಿ ವೆಚ್ಚ	Working expenses
ಜಾನುವಾರು ಕೃಷಿ	Livestock farming
ಜೀವನದ ಮೂಲಭೂತ ಸೌಕರ್ಯಗಳು	Basic amenities of life
ತೆರೆದ ಅರ್ಥಿಕತೆ	Open economy
ನಾಡ ಗೊಬ್ಬರ	Compost manure
ನಿವ್ವಳ ರಾಷ್ಟ್ರೀಯ ಉತ್ಪನ್ನ	Net national product
ನಿಗಮ	Corporation
ನೀರಾವರಿ ತೆರಿಗೆ	Irrigation cess
ಪಡಿತರ	Rationing
ಪೂರೈಕೆ	Supply

ಪ್ರತೀಕ್ಷಾ ಯೋಜನೆ	Perspective plan
ಪ್ರಾದೇಶಿಕ ಘಟಕಗಳಿಂದ ಕೇಂದ್ರಕ್ಕೆ ಯೋಜನೆ	Bottom-up plan
ಪ್ರಾದೇಶಿಕ ಯೋಜನೆ	Regional plan
ಬಂಡವಾಳ ಹೂಡಿಕೆ	Investment
ಬಿಗುವು	Tension
ಬೆಲೆಗಳ ರಚನೆ	Structure of prices
ಬೆಳೆಗಳು	Crops
ಬೆಳೆ ಕೃಷಿ	Crop farming
ಬೇಡಿಕೆ	Demand
ಬಂಡವಾಳ-ಉತ್ಪನ್ನ ಪ್ರಮಾಣ	Capital-output ratio
ಬಂಡವಾಳ ಸಂಚಯನ	Capital formation
ಬೆಂಬಲ ಬೆಲೆಗಳು	Support prices
ಭಾರತದ ರಾಜ್ಯ ಫಾರ್ಮ್‌ಗಳ ನಿಗಮ	State Farms Corporation of India
ಭಾರತೀಯ ಕೃಷಿ ಸಂಶೋಧನಾ ಪರಿಷತ್ತು	Indian Council of Agricultural Research
ಭೂಸುಧಾರಣೆ	Land reform
ಭೂ ಸವೆತ	Soil erosion
ಭೂ ಸಂರಕ್ಷಣೆ	Soil conservation
ಮಿಶ್ರ ಬೇಸಾಯ	Mixed farming
ಮಿಶ್ರ ಆರ್ಥಿಕತೆ	Mixed economy
ಮಿಶ್ರತಳಿ	Hybrid variety
ಮುಚ್ಚಿದ ಆರ್ಥಿಕತೆ	Closed economy
ಮುಕ್ತ ಖಾಸಗಿ ಉದ್ಯಮಶೀಲ ಪದ್ಧತಿ	System of free private enterprise
ಮುಕ್ತ ಮಾರುಕಟ್ಟೆ	Open market.
ಯಂತ್ರೀಕರಣ	Machanization
ಯೋಜನಾ ಯಂತ್ರ	Planning machinery
ಯೋಜನಾ ಆಯೋಗ	Planning commision
ರಚನಾ ನಿರ್ಮಾಪಕ ಯೋಜನೆ	Structural planning
ರಾಷ್ಟ್ರೀಯ ಬೀಜಗಳ ನಿಗಮ	National Seeds Corporation
ರಾಷ್ಟ್ರೀಯ ಅಭಿವೃದ್ಧಿ ಮಂಡಳಿ	National development council
ರಾಷ್ಟ್ರೀಯ ವಿಸ್ತರಣಾ ಸೇವೆ	National extension service
ರೊಕ್ಕದ ಬೆಳೆ	Cash crop
ವಾಸ್ತವ ವೆಚ್ಚ	Real cost
ವ್ಯಾಪಾರದ ಷರತ್ತುಗಳು	Terms of trade
ವಿಕೇಂದ್ರೀಕೃತ ಯೋಜನೆ	Decentralised planning
ವಿದೇಶೀ ವಿನಿಮಯ	Foreign exchange
ಶಕ್ತಿವರ್ಧಕ ಬೀಜಗಳು	High-yielding variety of seeds
ಶೀತಕ	Refrigerator
ಶ್ರಮಸಾಂದ್ರ	Labour intensive
ಶ್ರಮ ಉಳಿಸುವ	Labour saving
ಸಂಗ್ರಹಣ	Procurement

ಪಾರಿಭಾಷಿಕ ಶಬ್ದಕೋಶ

ಸಂಸ್ಥಾ ಅಡಿಪಾಯ ರಚನೆ	Institutional infrastructure	ಸಾಪೇಕ್ಷ ಬೆಲೆಗಳು	Relative prices
ಸಮತೋಲನ ಅಭಿವೃದ್ಧಿ	Balanced development	ಸಾಮಾಜಿಕ ಪ್ರತಿಫಲ-ವೆಚ್ಚ ವಿಶ್ಲೇಷಣೆ	Social benefit-cost Analysis
ಸಮಾಜವಾದಿ ನಮೂನೆ ಸಮಾಜ	Socialist pattern of society	ಸಾಮುದಾಯ ಅಭಿವೃದ್ಧಿ ವ್ಯವಸ್ಥೆ	Community development oraganization
ಸಮಾನಾಧಿಕಾರ ಪಟ್ಟಿ	Concurrent list	ಸ್ವಾವಲಂಬಿತ ಸ್ಥಿರತೆಯುತ ಅಭಿವೃದ್ಧಿ	Self-reliant development with stability
ಸರ್ವಾಧಿಕಾರ ರಾಜ್ಯ	Dictatorship	ಸೂಚ್ಯಂಕಗಳು	Index numbers
ಸ್ವಪ್ರಚೋದಿತ ಬೆಳವಣಿಗೆ	Self-sustaining growth	ಹಣಕಾಸು ಆಯೋಗ	finance commission
ಸುಸ್ಥ	Sound		

ಆಧಾರ ಗ್ರಂಥಗಳು

Albert Waterston, **Development Planning-Lessons of Experience**, Johns Hopkins Press, Baltimore, 1971.

Boserup M. "Agrarian structure and Take-off" cited in Cairncross, **Factors in Economic Development**", Allen & Unwin, 1963.

Coale, A.J. & Hoover E.M, **Population Growth and Economic Development in Low-income Countries-a Case study of India's Prospects**, O.U.P., 1959.

C.S.O., **National Accounts Statistics**, 1960-61 to 1974-75 Oct. 1976.

D.G.C.I.S., **Monthly Statistics of Foreign Trade in India**

Galbraith, G.K., "Condition for Economic Change in Under-developed Countries" in **Journal of Farm Economics**, Nov. 1951.

G.O.I., **Evolution of Community Development Programme**, 1973.

G.O.I., **Economic Survey**, 1969-70, 1970-71, 1975-76, 1976-77, 1977-78, 1981-82 and 1984-85.

G.O.I., **Development of Irrigation Report**, 1976-77.

G.O.I., **Indian Agriculture in Brief**, 14th Edition.

G.O.I., Planning Commission, **First Five Year Plan**.

G.O.I., Planning Commission, **Second Five Year Plan**.

G.O.I., Planning Commission, **Third Five Year Plan**.

G.O.I., Planning Commission, **Annual Plans**, 1966-67, 1967-68, 1968-69.

G.O.I., Planning Commission, **Fourth Five Year Plan**.

G.O.I., Planning Commission **Draft Fifth Five Year Plan,** Vols. I & II.

G.O.I., *Planning Commission* ***Fifth* Five Year Plan,** 1974-79

G.O.I., Planning Commission **Draft Five Year Plan** 1978-83

G.O.I., Planning Commission **Sixth Five Year Plan.**

G.O.I., Planning Commission **Review of the First Five Year Plan.**

G.O.I., Planning Commission **Second Five Year Plan, Progress** 1958-59

G.O.I , Planning Commission **The Third Plan-Mid-term Appraisal**

G.O.I., Planning Commission **The Fourth Plan-Mid-term Appraisal,** Vols. I & II.

G.O I., Planning Commission **India-A Reference Annual**1979

Harvey Leibenstein. **Economic Backwardness and Economic Growth**, John Wiley & Sons, 1957.

Joseph, S.C., **Food Policy and Economic Development in India** Allied Publishers, 1961.

Jacob Viner, **International Trade and Economic Development,** Illinois, The Freer Press, 1950

Kenneth, K. Kuiehara, 'Theoretical Objections to Agriculture biased economic development, **indian Journal of Economics** Oct. 1958.

Lewis, W. Arthur, **Development Planning,** Allen & Unwin, 1966.

Lewis W. Authur, **The Theory of Economic Growth** Allen & Unwin, 1955.

Mamoria, C.B.. **Agricultural Problems of India,** *Kitab Mahal, 1976.*

Meier, G.M. (Ed.), **Leading Issues in Economic Development,** O.U.P., Second Edition, 1907.

Paul Streeton & Michael Lipton, (Ed.) **The Crisis of Indian Planning** O.U.P., 1968.

Planning Commission. **Yojana,** May 28, 1967 & Dec. 1, 1977.

R. B. I., **Report on Currency & Finance**, 1974-75

R. B. I., **Reserve Bank of India Bulletins** 1979, 1980, **1982.**

R. B. I., **Small Farmers' Development Agencies-A Field Study**, 1972-73.

R. B. I., **Statistical Tables Relating to Co-operative Movement in India, 1973-74, Part II-Non-Credit Societies,**

Richard S. Eckaus, Planning in India, Reprinted in Meier (ed) **Leading Issues in Economic Development** O.U.P., 1970.

Ramaswamy, N. S., How Valuable is Animal Energy? **Kurukshetra**, Sept. 1, 1978.

Rostow, W.W., **The Stages of Growth-a Non-Communist Manifesto**, Cambridge University Press, 1965

Vadilal Dagli, **Foundation of Indian Agriculture,** Vora & Co., 1968.

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

		ಸಾದಾ	ಕ್ಯಾಲಿಕೊ
1.	ಸುಭಿಕ್ಷತೆಗೆ ತೆರೆದ ಬಾಗಿಲು (ದ್ವಿತೀಯ ಮುದ್ರಣ)	2–50	
2.	ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7–00	
3.	ಕೀಟ ವಿಂಗಡಣೆ	15–00*	
4.	ಕೀಟ ಹತೋಟಿ (ದ್ವಿತೀಯ ಮುದ್ರಣ)	12–50	
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–1	6–25	
6.	ತರಕಾರಿ ಬೇಸಾಯ	12–50*	
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	5–00	6-25*
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15–00	19–00*
9.	ರೈತರ ನೆಚ್ಚು ಮೆಚ್ಚಿನ ಮರಗಳು	15–00	19-00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ–2	11–25	15–00
11.	ಬೀಜಗಣಿತ ಪರಿಚಯ ಭಾಗ–1	15-00	50–00
12.	ಮಣ್ಣು ಮತ್ತು ನೀರು ನಿರ್ವಹಣೆ	15–00	19-00
13.	ಮಣ್ಣು	11–25	15–00*
14.	ಕೃಷಿ ಸಹಕಾರ	6–25	10–00*
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	15–00	19-00
16.	ಗೋಸಂಪತ್ತು	6–25	10–00*
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	7–50	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17-50	21–25*
19.	ಪಶುವೈದ್ಯಕೀಯ ವಿಜ್ಞಾನ (ದ್ವಿತೀಯ ಮುದ್ರಣ)	6–00	16–00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8-25*	12–00*
21.	ಟ್ರ್ಯಾಕ್ಟರು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7-50*	12–50*
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-3	10–00	15–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11-25*	16–25*
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	15–00	19–00

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
25. ಸಸ್ಯ ವರ್ಗೀಕರಣಶಾಸ್ತ್ರ	15–00	20–00
26. ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6–00	16–00
27. ಕಡಲ ಮೀನುಗಾರಿಕೆ	5–00	10-00
28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75*	
29. ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4-50*	
30. ಶಿಶುವಿಹಾರ (ದ್ವಿತೀಯ ಮುದ್ರಣ)	6–00	
31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50*	
32. ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	9–50	14–00
33. ಇಲಿಗಳು ಹಾಗೂ ಅವುಗಳ ನಿಯಂತ್ರಣ	9–50	13–25
34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	21–50*	
35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16–25*	
36. ಕ್ಯಾನಿಂಗ್-ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ	16–25	21–25
37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75	
38. ಜೀವಕೋಶಕ್ರಿಯಾಶಾಸ್ತ್ರ ಮತ್ತು ಜೀವರಸಾಯನ ಶಾಸ್ತ್ರ	20–00	25-00
39. ಎಲುಬುಶಾಸ್ತ್ರ	11–25	16–25
40. ಕಡಲೆಕಾಯಿ	10-00	15-00*
41. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-1	25–00	30–00
42. ತೆಂಗು, ಅಡಕೆ, ಇತರ ಗಿಡಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9-00*	

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12–00*	
44. ಭಾರತದಲ್ಲಿ ಕೋಳಿ ಸಾಕಣೆ	22–50*	27–50*
45. ಕಲ್ಲುನಾರು (ಭೂತಾಳೆ) ಗಿಡಗಳು	5–00	
46. ಎಣ್ಣೆಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟ ಹಾಗೂ ಅವುಗಳ ಹತೋಟಿ	7–50	
47. ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–00	
48. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5–00*	
49. ಮಾದಕ (ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3–75	
50. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50	
51. ಸಸ್ಯ ಸಾಮ್ರಾಜ್ಯ	25–00	30–00
52. ಮೀನುಗಾರಿಕೆ	10–00	15–00
53. ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟಣೆ	8–25	13–25
54. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ–2	20–00	25–00
55. ಸಾವಯವ ರಸಾಯನಶಾಸ್ತ್ರ ಪ್ರವೇಶಿಕೆ	14–00	19–00
56. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	12–50	17–50
57. ಭಾರತದಲ್ಲಿ ಜೇನು ಸಾಕಣೆ	20–00	25–00
58. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	7–50	12–00
59. ದೊಡ್ಡರೋಗ	5–00	
60. ಮೂಲ ಅರ್ಥಶಾಸ್ತ್ರ	19–00	24–00
61. ಜೇನುಸಾಕಣೆ	17–50	22–50

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
62.	ಕೃಷಿರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–25	
63.	ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ	20–00	25-00
64.	ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60-00
65.	ಸಹಕಾರಿ ಬೇಸಾಯ	18–00	23-00
66.	ಕೋಶ	20–00	25-00
67.	ತರಕಾರಿ ಬೆಳೆಗಳ ಕೀಟ ನಿಯಂತ್ರಣ	12–50	19-00
68.	ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20-00	25-00
69.	ಸಂಸ್ಕೃತಿಯ ರೂಪಿಕೆಗಳು	17-00	22-00
70.	ರೇಖಾತ್ಮಕ ಬೀಜಗಣಿತ	30-00	35-00
71.	ಹುಲಿ-ಭಾರತದ ರಾಷ್ಟ್ರೀಯ ಮೃಗ	20-00	24-00
72.	ನೀರಾವರಿ ತತ್ವ ಹಾಗೂ ಪದ್ಧತಿಗಳು	45-00	50-00
73.	ಮಣ್ಣು ಶಿಲೀಂಧ್ರ ಕೈಪಿಡಿ	45-00	50-00
74.	ಪ್ರಾಣಿಗಳ ವರ್ತನೆ	17-00	22-00
75.	ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ		125-00*
76.	ಸಸ್ಯತಳಿ ಅಭಿವೃದ್ಧಿ ವಿಧಾನಗಳು		60-00
77.	ಪ್ರಾಣಿಗಳ ಶರೀರಕ್ರಿಯಾಶಾಸ್ತ್ರ	17–00	22–00
78.	ಆಹಾರ ಸೂಕ್ಷ್ಮ ಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಗಳಿಸಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-1)	8–50	
79.	ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಇಂಗ್ಲೀಷ್ ಹಾಗೂ ಕನ್ನಡ ಹೆಸರು	15-00	20-00
80.	ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ	20–00	25-00
81.	ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20-00	22-00
82.	ಕುರಿಸಾಕಣೆ	8–00	13-00
83.	ಜೋಳ	10–00	15–00
84.	ಹಂದಿಯ ಭ್ರೂಣಶಾಸ್ತ್ರ	35–00	40-00
85.	ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25-00	30-00
86.	ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8-00	

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
87. ಮನೆ ಕೀಟಗಳು ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	10-00	
88. ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
89. ತೆಂಗಿನ ಬೇಸಾಯ	9-00*	14-00*
90. ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-2)	11-00	
91. ಸೂಕ್ಷ್ಮಜೀವಿಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು (ಸೂಕ್ಷ್ಮಜೀವಿ ಜಗತ್ತು, ಭಾಗ-1)	17-00	
92. ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-00	
93. ಹಸುರು ಸಸ್ಯದ ಜೀವನ	12-00	17-00
94. ಸೂಕ್ಷ್ಮಜೀವಿಗಳ ಚಯಾಪಚಯ (ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18-00	
95. ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15-00	
96. ಸೂಕ್ಷ್ಮಜೀವಿಗಳು ಉತ್ಪತ್ತಿ ಮಾಡುವ ಆಹಾರಗಳು ಮತ್ತು ರಾಸಾಯನಿಕ ಕಿಣ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97. ರೋಗಗಳಿಗೆ ಸಂಬಂಧಿಸಿದಂತೆ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5-00	
98. ಆಹಾರದ ನೈರ್ಮಲ್ಯ ನಿಯಂತ್ರಣ ಮತ್ತು ತನಿಖೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7-00	
99. ಕೃಷಿ ಕರ್ನಾಟಕ	12-50	17-50
100. ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35-00
101. ಮತ್ಸ್ಯಶಾಸ್ತ್ರ		50-00

* ಪ್ರತಿಗಳು ತೀರಿವೆ

102. ಹಣ್ಣು ಮತ್ತು ತರಕಾರಿ ಸಂರಕ್ಷಣೆ	35–00	40–00
103. ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60–00
104. ಆಹಾರ ಸೂಕ್ಷ್ಮಜೀವಿ ವಿಜ್ಞಾನ		62–50
105. ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25–00	35–00
106. ಬತ್ತದ ಬೇಸಾಯ	15–00	25–00
107. ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳಹತೋಟಿ	12–00	17–00
108. ವ್ಯವಸಾಯ ಮುನ್ನಡೆ	18-00	28–00
109. ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–50	
110. ಸಚಿತ್ರ ಬತ್ತದ ಬೆಳೆ	12–50	22–50
111. ಕೋಳಿಸಾಕಣೆ ಕೈಪಿಡಿ (ದ್ವಿತೀಯ ಮುದ್ರಣ)	12–00	
112. ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10–00	20-00
113. ಭೂಸಾರ ಸಂರಕ್ಷಣೆ	7–50	17–50
114. ಬಿಳಿಕಸ	9-00	19–00
115, ವೈರಸ್‌ಗಳು (ಸೂಕ್ಷ್ಮಜೀವಿ ಜಗತ್ತು ಭಾಗ-3)	7–50	
116. ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20–00	30–00
117. ಲವಂಗ	3–50	
118. ಸೂಕ್ಷ್ಮಜೀವಿಗಳ ಉತ್ಪರಿವರ್ತನೆ ಹಾಗೂ ಆನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ-4)	15–00	
119. ಬ್ಯಾಕ್ಟೀರಿಯಾಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ-5)	25–00	
120. ಎಣ್ಣೆ ಕೊಡುವ ಕೆಲವು ಹೊಸ ಸಸ್ಯಗಳು	12–00	22–00
121, ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ-6)	20–00	
122. ಕೃಷಿ ಯಂತ್ರಗಳು ಹಾಗೂ ಉಪಕರಣಗಳು		80–00
123, ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10–00	20–00
124. ಮೆಣಸು-ಕಪ್ಪು ಹೊನ್ನು	9–00	19–00

		ಸಾದಾ	ಕ್ಯಾಲಿಕೊ
125.	ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು ಭಾಗ-7)	5–00	
126.	ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25–00	35–00
127.	ರೇಷ್ಮೆ ವ್ಯವಸಾಯ	20-00	30–00
128.	ಕೃಷಿ ಪ್ರಸರಣೆ	25–00	35–00
129.	ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12–00	22–00
130.	ತ್ರಿಕೋನಮಿತಿ	15-00	25–00
131.	ಬಿದಿರು ಮತ್ತು ಬೆತ್ತ	10–00	20–00
132.	ಬತ್ತದ ಬೆಳೆ ಕೀಟ ನಿಯಂತ್ರಣ	6–00	
133.	ಇಪ್ಪತ್ತೊಂಬತ್ತನೆಯ ದಿನ	30–00	40–00
134.	ಮಣ್ಣಿನ ಭೌತಿಕ ಗುಣಧರ್ಮಗಳು	20–00	30–00
135.	ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		70–00
136.	ಸುಗಂಧದ್ರವ್ಯ ಸಸ್ಯಗಳು	12–50	22–50
137.	ಸೂಕ್ಷ್ಮಜೀವಿ ಜಗತ್ತು		130·00
138.	ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2–50	
139.	ಪ್ಲಾಂಟೇಶನ್ ಬೆಳೆಗಳಲ್ಲಿ ಕೀಟ ಹತೋಟಿ	14-00	24–00
140.	ಪ್ರಾಚೀನ ಭಾರತದಲ್ಲಿ ಬೇಸಾಯ	ಅಚ್ಚಿನಲ್ಲಿದೆ	
141.	ಪ್ರಾಚೀನ ಮತ್ತು ಅರ್ವಾಚೀನ ದನಗಳ ಇತಿಹಾಸ	24–00	34–00
142.	ಬೀಜಗಣಿತ ಪರಿಚಯ (ಭಾಗ-2)	20–00	30–00
143.	ಸಾಗುವಳಿ ಉಪಕರಣಗಳು	15–00	25–00
144.	ಮಾವು	40–00	50–00
145.	ಬತ್ತ	40–00	50-00
146.	ಬತ್ತದ ಬೇಸಾಯ-ಸಮಸ್ಯೆ ಹಾಗೂ ಪರಿಹಾರಗಳು	18–00	28–00
147.	ಬೆಳೆಗಳ ಪ್ರಾಣಿ ಪೀಡೆಗಳು	50-00	60-00
148.	ಭಾರತದ ಸಂಬಾರದ ಬೆಳೆಗಳು	18-00	28-00
149.	ಸಜೀವ ಸಸ್ಯ	35-00	45-00
150.	ಕೃಷಿ ಸಮಾನ ಪದಗಳ ಸಮೀಕ್ಷೆ	5–00	
151.	ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ	5-00	
152.	ವನ್ಯಪ್ರಾಣಿಗಳ ವಿಕಸನ ಹಾಗೂ ವಿತರಣೆ	ಅಚ್ಚಿನಲ್ಲಿದೆ	
153.	ಭಾರತದಲ್ಲಿ ಕೃಷಿಅಭಿವೃದ್ಧಿ ಯೋಜನೆ-ಒಂದು ಪಕ್ಷಿನೋಟ	12-00	22-00
154.	ಸಹಕಾರಿ ವಿಸ್ತರಣ ಕಾರ್ಯ	ಅಚ್ಚಿನಲ್ಲಿದೆ	